ಅಖಿಲ ಭಾರತ ಪತ್ರಿಕೆ

ಡಿಸೆಂಬರ್ 2019

# ಆತ್ಮ–ಶೋಧನೆ

ಬೆಲೆ : 15/-



ದಿವ್ಯರೆಪ್ಪೆಗಳು ತೆರೆಯೆ ತಾನಾಗ ಅರಳಿತ್ತು ಸ್ವರ್ಗ–ದ್ವಾರ
ಸಚ್ಚಿದಾನಂದ ರೂಹು ತಾನೊಂದು ಬಂದಿತ್ತು ಸನಿಹ ತೀರ
ವಿಶ್ವದಾದ್ಯಂತ ದೇವಿ ಸರ್ವಜ್ಞೆ ತೋರುತಲಿ ಒಲವು ಹರಡಿ
ಅಲ್ಲಿ ಮಧ್ಯದಲಿ ರಾಯಭಾರಿಣಿಯು ನಿತ್ಯತ್ವ ಚಲನ ಮೂಡಿ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ ‘ಸಾವಿತ್ರಿ’; ದಳ 1 ರೇಣು 1 ಪುಟ 4)**

**ಅಖಿಲ ಭಾರತ ಪತ್ರಿಕೆ**

**ಡಿಸೆಂಬರ್ 2019**

ಸಂಪುಟ: 29 ಸಂಚಿಕೆ: 12


## ಪರಿವಿಡಿ


**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 343.
ಫೋನ್: 94487 74920
editorabpbng@yahoo.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪ್ಸೆ
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.


# “ಆತ್ಮ–ಶೋಧನೆ”

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು


**ಆತ್ಮಾನ್ವೇಷಣೆ** 7
ಅನು: ಶ್ರೀ ಪುಟ್ಟು ಕುಲಕರ್ಣಿ

**ಚೈತ್ಯದ ಉಗಮ** 39
ಅನು: ಡಾ॥ ಮಹಾದೇವ ಸಕ್ರಿ
ಡಾ॥ ಬಲಭೀಮ ಭೀಡ

**ವಾರ್ತಾಪತ್ರ** 68




**“ಚೈತ್ಯದ ಅಂತರಂಗದಲ್ಲಿ ದೈವತ್ವದ ಜೊತೆಗೆ ಆತ್ಮೀಯತೆ”**
ಪೂರ್ಣ ಪ್ರಗತಿ ಹೊಂದಿರುವ ಚೈತ್ಯದ ಸ್ವಾಭಾವಿಕ ಹಂತ
ಆಧ್ಯಾತ್ಮಿಕ ಮಹತ್ ಮತ್ತು ವಿವರಣೆಗಳು – ಶ್ರೀಮಾತೆ
ಸಸ್ಯಶಾಸ್ತ್ರೀಯ ಹೆಸರು: ಲೊಗರ್‌ಸ್ಟ್ರೇಮಿಯಾ ಇಂಡಿಕಾ
(ಮೇ ಫ್ಲವರ್)

## ಸಂಪಾದಕರ ಟಿಪ್ಪಣಿ

ಒಂದು ವೇಳೆ ರೂಪಾಂತರಣಕ್ಕೆ ಸಾಗಲು ಇರುವ ಹಾಗೂ ತಕ್ಷಣವೇ ಹೆಜ್ಜೆ ಇಡಲು ಸಿದ್ಧವಿರುವ ಸಂಗತಿ ಎಂದರೆ, ಅದು ನಮ್ಮಂತರಂಗದಲ್ಲಿಯೇ ಇರುವ ಚೈತ್ಯ ಪುರುಷನ ಆನ್ವೇಷಣೆಯಾಗಿದೆ. ಮಾನವನಿಗೆ ಲಭ್ಯವಾಗಿರುವ, ಅದೂ ಅವನಲ್ಲಿಯೇ ಲಭ್ಯವಿರುವ ದೈವತ್ವವೇ ಆಗಿರುತ್ತದೆ. ಒಮ್ಮೆ ಇದು ಸಾಧ್ಯವಾದಲ್ಲಿ, ಉಳಿದುದೆಲ್ಲವೂ ಅತೀ ಸರಳವಾಗಿಯೇ–ಸಾಪೇಕ್ಷವಾಗಿಯೇ – ಸಾಧ್ಯಗೊಳ್ಳುತ್ತವೆ. ಪ್ರತಿಯೊಬ್ಬರೂ ಆ ದೈವಶಕ್ತಿಗಳ ಕಡೆಗೆ ಸಾಗಲು, ಅತ್ಯಂತ ಸುಲಭದಲ್ಲಿಯೇ ತೆರೆಯಲ್ಪಡುವ ದ್ವಾರ ಇದಾಗಿರುತ್ತದೆ. ಅಷ್ಟೇ ಅಲ್ಲದೇ ಇದು ಪ್ರಕಾಶಮಯವಾದ ಪಥದ ಮೇಲೆ ಸಾಗಲು ಇರುವ ಮಾರ್ಗವೂ ಆಗಿರುತ್ತದೆ. ಈ ವಿಷಯವೇ ಅತ್ಯಂತ ಪ್ರಾಮುಖ್ಯವಾಗಿರುವದರಿಂದ ಇದು ಯೋಗದಲ್ಲಿಯೂ ಅಳವಡಿಸಲಪ್ಪಟ್ಟಿದೆ.

ಈ ಚೈತ್ಯ ಪುರುಷನ ಅವತರಣಕ್ಕೆ ಮತ್ತು ಅದರ ಶೋಧನೆಗೆ, ಸಾಕ್ಷಾತ್ಕಾರಕ್ಕೆ ಇರುವ ಮಾರ್ಗಗಳ ಕುರಿತ ವಿಷಯಗಳನ್ನು ಈ ಸಂಚಿಕೆಯಲ್ಲಿ ರೂಪಿಸಲಾಗಿದೆ. (ಎಐಎಮ್)

*

## ಸಂಪಾದಕೀಯ

ಕಾಲ ಮತ್ತು ಚೈತನ್ಯಗಳು ರೂಪಧಾರಣೆಯಲ್ಲಿಯೇ ಅನಂತತೆಯ ಶೋಧದ ಅನುಭವವನ್ನು ಪಡೆಯಲು ಚಲಿಸುತ್ತವೆ. ಜೀವನದ ಪರಿವರ್ತನೆಯ ಯುಗಗಳ ರೆಕ್ಕೆಗಳ ಮೂಲಕವಾಗಿಯೇ ಪ್ರಕಾಶವನ್ನೂ ಗಳಿಸಿಕೊಳ್ಳುತ್ತಾ, ಸದಾ ಮಿನುಗುತ್ತಿರುವ ತಾರಾಗಣಗಳ ಹಾಗೆ ಕರ್ತವ್ಯ ಪ್ರಜ್ಞೆಯಲ್ಲಿ ಇರುತ್ತವೆ. ಈ ಅವಿನಾಶಿಯಾದ ಅವಕಾಶವು ಸದಾ ಘನಪ್ರಶಾಂತತೆಯಲ್ಲಿ ಸ್ಪಂದಿಸುತ್ತಿದ್ದರೂ ಸಹಿತ ಅದರ ಮಿಡಿತಕ್ಕೆ ಅನುಸ್ಪಂದಗೊಳ್ಳಲು ಮಾನವನ ಆತ್ಮವು ತನ್ನನ್ನು ತಾನೇ ಸಿದ್ಧಗೊಳಿಸಿಕೊಂಡಲ್ಲಿ, ಆಗ ರೂಪಧಾರಣೆಯ ಹಂತದಲ್ಲೂ ಸಹಿತ ಋತದ ವ್ಯಾಪ್ತತೆಯನ್ನು ಅನುಭಾವಿಸಲು ಸಾಧ್ಯವಾಗುತ್ತದೆ. ಈ ಅನುಭಾವವನ್ನು ಪಡೆದುಕೊಳ್ಳಲು ಸಾಗುತ್ತಿರುವ ಅಲೆಗಳೂ ಸಹಿತ ಅಪಾರ ಪ್ರಮಾಣದಲ್ಲಿಯೇ ಇವೆ. ಅವುಗಳ ಅಭೀಪ್ಸೆಯೂ ಸಹಿತ ಹೃದಯಾಂತರಾಳದಿಂದಲೇ ನಿಗದಿಗೊಂಡಿದ್ದ ಕಾರಣದಿಂದಾಗಿ ಕೆಲವೇ ಕೆಲವು ಅಲೆಗಳು ಮಾತ್ರ ಈ ಅಪರಿಮಿತ ಆಯಾಮವನ್ನು ದರ್ಶಿಸಲು ಶಕ್ತವಾಗುತ್ತವೆ.

ನಾದದಿಂದ ಜನಿತಗೊಂಡ ಧ್ವನಿಯು ಶಬ್ದರೂಪದಲ್ಲಿ ಬದುಕನ್ನು ಸಂಕೇತಿಸುತ್ತಿರುವ ಪರಿಕಲ್ಪನೆ ಬಂದಾಗಿನಿಂದಲೂ, ಮಾನವನ ಶೋಧನಾ ಸಾಮರ್ಥ್ಯಕ್ಕೊಂದು ಸವಾಲಾಗಿಯೇ ಇರುವದು "ಈ ಆತ್ಮದ ಚಿಂತನ". ನಾಲ್ಕು ಕಾಲುಗಳನ್ನು ಊರಿ ನಡೆಯುವ ಪ್ರಾಣಿ ಪ್ರಪಂಚದ ಹಂತದಲ್ಲಿದ್ದಾಗ ವಿಕಸನದ ಪ್ರಾರಂಭದ ಹಂತದಲ್ಲಿದ್ದ ಮೆದುಳು ಸಹಿತ ತನ್ನ ಸೀಮಿತ ಗಾತ್ರದಲ್ಲಿಯೇ ಇತ್ತು. ಆದರೆ, ಯಾವಾಗ ಎರಡು ಕಾಲ ಮೇಲೆ ನಡೆಯಲು ಪ್ರಾರಂಭವಾಯಿತೋ, ಅಂದಿನಿಂದ ವಿಕಾಸನದ ಅಲೆಯನ್ನೇರಿದ ಮೆದುಳೂ ಸಹಿತ ವಿಸ್ತಾರವನ್ನು ಹೆಚ್ಚಿಸಿಕೊಂಡು, ಚಿಂತನದ ಆಯಾಮಗಳನ್ನು ಅಭಿವ್ಯಕ್ತಗೊಳಿಸತೊಡಗಿತು. ಇದು ಕೇವಲ ಭೌತಿಕ ವಿಕಾಸದ ದಾಖಲಾತಿಯಲ್ಲ. ಸೃಷ್ಟಿಯ ಉಗಮಕ್ಕೆ ಹಾಗೂ ವಿಕಾಸಕ್ಕೆ ಕಾರಣವಾಗಿರುವ ಆ 'ರಹಸ್ಯದ' ಬಗೆಗೆ, ಅಲ್ಲಿರುವ ಪ್ರಕೃತಿಯ ನಿಸರ್ಗ ಸಹಜವಾದ ಸಂಕೀರ್ಣ ಸಂಯೋಜನಾ ಜೋಡಣೆಗಳ ಕುರಿತು ಚಿಂತನಗಳೂ ಪ್ರಾರಂಭವಾದವು.

ಈ ಸೃಷ್ಟಿಯ ಗೂಢ ಗಮ್ಯತೆಯನ್ನು ನಿರಾಕಾರ ಸ್ವರೂಪದ ಆತ್ಮದ ಮೂಲಕವೇ ಸಾಕ್ಷಾತ್ಕರಿಸಿಕೊಳ್ಳಬೇಕು ಎಂದು ಕಂಡುಕೊಂಡ ಚೇತನಕ್ಕೆ ಆ ವಿಶ್ವ

ಚೈತನ್ಯವೂ 'ಮಾನವನ ಹೃದಯದಲ್ಲಿ ಅಡಗಿರುವ ಆ ಸೂಕ್ಷ್ಮಾತಿ ಸೂಕ್ಷ್ಮವಾಗಿರುವ ಆತ್ಮ'ದ ಮೂಲಕವೇ ಎಂದು ಹಲವು ಜಾಗ್ರತ ಚೇತನಗಳೂ ಪಥವನ್ನು ನಿರ್ಮಿಸಿವೆ. ಆ ಪಥದ ಗಹನತೆ, ಅದರ ಗಮ್ಯಾತಿಗಮ್ಯದ ಅಂತರಾಳ, ಅಲ್ಲಿ ಲಭ್ಯವಾಗುವ ಅನುಭೂತಿ, ವಿಶ್ವ ಸತ್ಯದ ಸಾಕ್ಷಾತ್ಕಾರ ಮತ್ತು ಇವೆಲ್ಲಕ್ಕೂ ಆಧಾರಭೂತವಾಗಿರುವ, ಆ ಊರ್ಧ್ವಾತಿ ಊರ್ಧ್ವದಲ್ಲಿರುವ ಆ 'ಪರಮೋಚ್ಚ ಚೈತನ್ಯ'ದ ಬಗೆಗೆ ಸಂಪರ್ಕ ಒದಗಿಸುವ ಏಕೈಕ ಸಾಧನವೆಂದರೆ 'ನಮ್ಮದೇ ಆತ್ಮ'.

ಶ್ರೀ ಅರವಿಂದರೂ ಈ ಚೈತ್ಯ–ಪುರುಷ ಹಾಗೂ ಮಾನವನ ಅನುಭಾವ ಸಂಬಂಧದ ಜೋಡಣೆಯಾಗಿರುವ ಚೈತನ್ಯವನ್ನು ತಮ್ಮ ಮೇರು ಗ್ರಂಥವಾಗಿರುವ 'ಸಾವಿತ್ರಿ'ಯಲ್ಲಿ ಪ್ರತಿಮಾ ವಿಧಾನದಲ್ಲಿ ಅಮರಗೊಳಿಸಿದ್ದಾರೆ. ಈ ಸಂಚಿಕೆಯಲ್ಲಿ ರೂಪಿಸಲ್ಪಟ್ಟಿರುವ ವಿಷಯಗಳ ಸೂತ್ರ ವಾಕ್ಯಗಳಂತೆ 'ಸಾವಿತ್ರಿ'ಯಲ್ಲಿ, "ಚಿದ್ಬ್ರಹ್ಮನವನು ನಮ್ಮಲ್ಲಿ ನಿತ್ಯ ಪ್ರಚ್ಛನ್ನ ವಾಸ ಮಾಡಿ, ತನ್ನದೇ ಶಕ್ತಿ ಜೊತೆಯಲ್ಲಿ ಸತತ ಕಣ್ಣು ಮುಚ್ಚಾಲೆಯಾಡಿ, ಪ್ರಕೃತಿಯಾ ದ್ರವ್ಯ ಕಾರಕಗಳಲ್ಲಿ ಬಲು ಮಂದ್ರ–ಮಂದ್ರದಲ್ಲಿ, ಚಲಿಸುತ್ತ ಬರುವ ಗಾಢ ಗೂಢದಲಿ ಆ ಗುಹ್ಯ ದೇವನಿಲ್ಲಿ" ಎಂದು ಅವನ ಆಗಮನದ – ಅಂದರೆ ಆತ್ಮ ಸಾಕ್ಷಾತ್ಕಾರದ ಮಾರ್ಗ ತೋರಿದ್ದಾರೆ. ಈ ಅಂತರಾತ್ಮವೂ ಸಹಿತ ಅಂತರಂಗದಲ್ಲಿಯೇ ಇದ್ದು, ಅದನ್ನೇ ತನ್ನ ನೆಲೆಯಾಗಿಸಿಕೊಂಡಿದೆ. ತನ್ನ ಕ್ರೀಡೆಗಳ ಅವಕಾಶಕ್ಕಾಗಿ ಈ ಲೋಕ–ಲೋಕ ಸೃಷ್ಟಿಸುತ್ತ ಮತ್ತೆ ಅದರ ಮೂಲಕವೇ ಸೃಷ್ಟಿಯ ಮೂಲವನ್ನೂ ಅರಸುತ್ತ, ತನ್ನನ್ನೇ ತಾನು ಅರಿತುಕೊಳ್ಳುವದನ್ನು, ಈ ಮರ್ತ್ಯ ಜೀವನದ ವಿಭ್ರಮೆಯ ಮಧ್ಯದಲ್ಲಿಯೇ ಅರಿತುಕೋಳ್ಳುವದರ ಕುರಿತು ಸಂಜ್ಞೆಯನ್ನೂ ತೋರುತ್ತಾರೆ.

ಆಧುನಿಕ ಕಾಲದಲ್ಲೂ ಸಹಿತ ಈ ರೀತಿಯಾಗಿ ಚೈತ್ಯ ಪುರುಷನನ್ನು ಸಾಕ್ಷಾತ್ಕರಿಸಿಕೊಂಡ ಅತ್ಯಪೂರ್ವದ ಘಟನೆಯನ್ನು ಪ್ರತ್ಯಕ್ಷ ಕಂಡವರು, ಅನುಭಾವಿಸಿದವರು ಹಾಗೂ ಅದರ ಎಲ್ಲ ಆಯಾಮಗಳನ್ನೂ ಆತ್ಮಸಂಗತವಾಗಿಸಿಕೊಂಡ ಶ್ರೀ ಅರವಿಂದರು ಮತ್ತು ಶ್ರೀಮಾತೆಯವರ ಈ ಅನುಭಾವದ ಕೃಪೆಯಲ್ಲಿ ಹರಸಲ್ಪಟ್ಟವರೂ ಸಹಿತ, ಈ ವಿಷಯದ ಕುರಿತು ತಮ್ಮ ತಮ್ಮ ಸಾಧನೆಯನ್ನು ಪ್ರಗತಿಗೊಳಿಸಿಕೊಂಡಿದ್ದಾರೆ. ಪ್ರಗತಿಗೊಳಿಸಿಕೊಳ್ಳುತ್ತಿದ್ದಾರೆ. ಮೂಲತಃ ಇಂಗ್ಲೀಷ ಭಾಷೆಯಲ್ಲಿ ಅಭಿವ್ಯಕ್ತಿಸಲ್ಪಟ್ಟಿರುವ ಈ ಸಂಗತಿಗಳನ್ನು ಆಯಾ ಪ್ರದೇಶದ ಭಾಷೆಯಲ್ಲಿ, ಆಯಾ ಭೌಗೋಲಿಕ ವ್ಯವಸ್ಥೆಯ ಹಿನ್ನೆಲೆಯಲ್ಲಿ

ರೂಪಣೆಗೊಳ್ಳುವ ಭಾಷಾಸ್ವರೂಪ ಹಾಗೂ ಪ್ರತಿಮಾ ವಿಧಾನಗಳನ್ನು ಗಮನದಲ್ಲಿಟ್ಟುಕೊಂಡು, ಇಲ್ಲಿ ಕನ್ನಡ ಭಾಷೆಗೆ ಅನುಸ್ಪಂದಗೊಳಿಸಲು ಯತ್ನಿಸಲಾಗಿದೆ. ಆತ್ಮ-ಶೋಧನೆ ಎನ್ನುವದೇ ಒಂದು ಗಹನಾತಿಗಹನವಾದ ವಿಷಯವೆಂದು ಜನ ಸಾಮಾನ್ಯರಿಂದ ದೂರವೇ ಇದ್ದ ಕಾರಣದಿಂದಾಗಿಯೂ ಸಹಿತ, ಇಲ್ಲಿನ ಶಬ್ದಗಳು ಕೆಲವೊಮ್ಮೊಮ್ಮೆ ಗಹನತೆಯಿಂದ ಕೂಡಿರುವಂತೆ ತೋರುತ್ತವೆ. ಆದರೆ, ಅತ್ಯಂತ ಸುಲಭವಾಗಿಯೇ, ಅಂತರಾತ್ಮವನ್ನು ಜಾಗ್ರತಿಗೊಳಿಸುವ ಸೂತ್ರಗಳನ್ನು ನೀಡಿರುವ ಶ್ರೀ ಅರವಿಂದರು ಹಾಗೂ ಆ ಸೂತ್ರಗಳನ್ನು ಅನುಷ್ಠಾನಿಸುವಲ್ಲಿ ಗಮನಸಿಬೇಕಾದ ಸಂಗತಿಗಳನ್ನು ಶ್ರೀಮಾತೆಯವರು ಸುಲಭವಾದ ಭಾಷೆ ಮತ್ತು ಪ್ರತೀಕಗಳಲ್ಲಿ ಹೇಳಿದ್ದಾರೆ.

ಮೂಲ ಪಠ್ಯವೂ ಸಹಿತ ಪ್ರಶ್ನೋತ್ತರದ ರೂಪದಲ್ಲಿಯೇ ಇರುವದರಿಂದ, ಕನ್ನಡದ ವಾತಾವರಣದಲ್ಲಿಯೂ ಇದನ್ನು ಅನುಷ್ಠಾನಿಸುವ ಇಚ್ಛೆ "ಅಖಿಲ ಭಾರತ ಪತ್ರಿಕೆ"ಗೆ ಇದೆ. ಈ ಕನ್ನಡ ರೂಪಾಂತರಣದಲ್ಲಿ ಮಂಡಿಸಲಾಗುವ ವಿಷಯಗಳ ಬಗೆಗೆ ಪ್ರಶ್ನೆಗಳನ್ನು/ಸಲಹೆಗಳನ್ನು/ಸೂಚನೆಗಳನ್ನು ಪತ್ರಿಕೆ ನಿರೀಕ್ಷಿಸುತ್ತಿದೆ.



ಎಲ್ಲ ಭಾವನೆಗಳ ಆಚೆ, ಅದೂ ಆ ಘನಪ್ರಶಾಂತವಾಗಿರುವ ಮತ್ತು ನಮ್ಮ ಆ ಸುಪ್ತಶಾಂತತೆಯ ನಿರ್ಮಾಯ ಮೌನದ ಜೀವದತ್ತ, ಅಲ್ಲೊಂದು ಚಿರಂತನವಾಗಿ ಜ್ಯೋತಿ ಸೂಸುತ್ತಿರುವ ಬೆಳಕೊಂದು ಇದೆ, ಇದೇ ಚೈತ್ಯಾತ್ಮದ ಚೇತನವಾಗಿದೆ. ಈ ಪ್ರಕಾಶವನ್ನು ಅರಿತುಕೊಳ್ಳುವದರ ಸಲುವಾಗಿ ಯಾತ್ರೆ ಇರಲಿ, ಅದರ ಬಗೆಗೆ ಲಕ್ಷ್ಯವೆಲ್ಲ ಕೇಂದ್ರೀಕರಿಸಿರಲಿ. ಅದು ನಿನ್ನ ಅಂತರಂಗದಲ್ಲಿಯೇ ಇದೆ. ಅದನ್ನು ಸಂರಕ್ಷಿಸುವ ಅಭಿಲಾಷೆ, ಇಚ್ಛೆಯಿಂದ ಅದನ್ನು ಅರಸುವುದಾದಲ್ಲಿ ಅದು ನಿನಗೆ ಖಂಡಿತವಾಗಿಯೂ ಲಭ್ಯವಾಗುತ್ತದೆ. ಯಾವಾಗ ನೀನು ಅದರಲ್ಲಿ ಪ್ರವೇಶ ಪಡೆದುಕೊಳ್ಳುವೆಯೋ, ಆಗಲೇ ನೀನು ಅಮರತ್ವದ ಅಥವಾ ಅಮೃತತ್ವದ ಸಂವೇದನೆಯ ಬಗೆಗೆ ಜಾಗ್ರತಿಯನ್ನು ಪಡೆಯುತ್ತೀಯ. ನೀನು ಯಾವಾಗಲೂ ಅಲ್ಲಿಯೇ ವಾಸವಾಗಿದ್ದಿ; ನೀನು ಅಲ್ಲಿಯೇ ವಾಸವಾಗಿರುವೆ. ನೀನು ನಿನ್ನ ದೇಹದ ಬಂಧನದಿಂದ ಸಂಪೂರ್ಣ ಮುಕ್ತವಾಗಿ ಇರುವೆ. ನಿನ್ನ ಪ್ರಜ್ಞೆಯ ಅಸ್ತಿತ್ವವು ಇದನ್ನು ಅವಲಂಬಿಸಿರುವದಿಲ್ಲ. ಮತ್ತೆ ಈ ದೇಹವೆನ್ನುವದು ಕೇವಲ ಕ್ಷಣಿಕ ಅಸ್ತಿತ್ವವಾಗಿದ್ದು, ಇದರ ಮೂಲಕವೇ "ನೀನು" ಅಭಿವ್ಯಕ್ತಗೊಂಡಿರುವೆ. ಸಾವು ಎನ್ನುವದೂ ಸಹಿತ ನಿನ್ನನ್ನು ವಿಲುಪ್ತಿಗೊಳಿಸುವದಿಲ್ಲ (ನಿಶ್ಶೇಷಗೊಳಿಸುವದಿಲ್ಲ) ಏಕೆಂದರೆ ಸಾವು ಎನ್ನುವದು ಒಂದು ಸಂಕ್ರಮಣದ ಸ್ಥಿತಿಯಾಗಿರುತ್ತದೆ ಅಷ್ಟೇ. ಎಲ್ಲ ಭಯಗಳೂ ಸಹಿತ ಇದ್ದಕ್ಕಿದ್ದಂತೆಯೇ ಕರಗಿಹೋಗುತ್ತವೆ ಮತ್ತೆ ಮುಕ್ತ ಮನುಷ್ಯನ ಹಾಗೆ ಸುನಿಶ್ಚಿತವಾದ ಪ್ರಶಾಂತತೆಯ ಜೀವನದ ಜೊತೆಗೆ ನೀನು ಸಹವರ್ತಿಯಾಗಿರುತ್ತೀಯಾ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/83–84 – ಶ್ರೀಮಾತೆ**

# ಆತ್ಮಾನ್ವೇಷಣೆ

– ಅನುವಾದ: ಪುಟ್ಟು ಕುಲಕರ್ಣಿ

## ಏಕಾಗ್ರತೆಯು ಹೃದಯ ಕೇಂದ್ರಿತವಿರಲಿ

*ಏಕಾಗ್ರತೆಯು ಧ್ಯಾನದ ವಿನಾ ಯೋಗದಲ್ಲಿ ಬೇರೆ ಯಾವುದೇ ವಿಷಯ ಅಥವಾ ವಿಧಾನ ಇಲ್ಲವೇ ಇಲ್ಲ. ಅದರಲ್ಲೂ ಈ ಏಕಾಗ್ರತೆಯೂ ಹೃದಯಸ್ಥವಾಗಿಯೇ ಅಂದರೆ ಹೃದಯ ಕೇಂದ್ರಿತವಾಗಿಯೇ ಇರಬೇಕು. ಆ ಶ್ರೀಮಾತೆಯ ಕೃಪೆ, ಶಕ್ತಿ ಹಾಗೂ ಅವಳ ಸಾಮೀಪ್ಯದ ಮೂಲಕ ಈ ಜೀವವನ್ನು/ಜೀವಿಯನ್ನು ಉದ್ಧರಿಸಲು ಸ್ವೀಕರಿಸುವಂತೆಯೇ ಪ್ರಾರ್ಥನೆಯು ಇರಬೇಕು. ಜೊತೆಜೊತೆಗೆ ಅವಳ ಚೈತನ್ಯದ ಬಲವೂ ಸಹಿತ ಅನುಷ್ಠಾನಗೊಂಡು ಚೇತನದಲ್ಲಿ ರೂಪಾಂತರಗೊಳ್ಳುವಂತೆ ಅವಳನ್ನು ಪ್ರಾರ್ಥಿಸಿ ಕರೆಯಬೇಕು. ಇಲ್ಲಿ ಕೆಲವರು ತಮ್ಮ ಬೌದ್ಧಿಕ (ಮಸ್ತಿಷ್ಕದ) ಹಂತದಲ್ಲಿ ಅಥವಾ ಭ್ರೂಮಧ್ಯದ ಹಂತದಲ್ಲಿ ಕೇಂದ್ರೀಕರಿಸಿಕೊಂಡು ಪ್ರಾರ್ಥಿಸಬಹುದು. ಆದರೆ ಈ ವಿಧಾನವು ಬಹುತೇಕ ಜನರಿಗೆ ಈ ರೀತಿಯಲ್ಲಿ ತಮ್ಮನ್ನು ತಾವು ಜಾಗ್ರತಿಗೊಳಿಸಿಕೊಳ್ಳಲು ಬಹು ಕಷ್ಟದಾಯಕವಾಗಿರುತ್ತದೆ.*

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/389**

*ಓ ಮಾತೆಯೇ, ಈ ಹೃದಯ ಕೇಂದ್ರಿತ ಏಕಾಗ್ರತೆಯು ಅದು ಹೇಗೆ ಉತ್ತಮ ಮಾರ್ಗವಾಗಿದೆ?*

– ಅದು ಸುಲಭವೆಂದು ಇವನೂ ಹೇಳುತ್ತಿದ್ದಾನೆ. ಆದರೆ ಕೆಲವರಿಗೆ ಬಹುತೇಕವಾಗಿ ಕಷ್ಟಸಾಧ್ಯವಾದ ವಿಷಯವಾಗಿ ಕಾಣುತ್ತದೆ. ಏನೇ ಆದರೂ ಅದು ಆಯಾ ವ್ಯಕ್ತಿಗಳ ಸ್ವಭಾವವನ್ನು ಅವಲಂಬಿಸಿರುತ್ತದೆ. ಒಂದು ವೇಳೆ ನೀನು ನಿನ್ನ ಲಕ್ಷ್ಯವನ್ನು ಅಲ್ಲಿಯೇ ಕೇಂದ್ರೀಕರಿಸಿಕೊಂಡಿದ್ದಲ್ಲಿ, ಅದು ಅತ್ಯಂತ ಗಾಢವಾಗಿ, ಹೃತ್ಪೂರ್ವಕವಾಗಿ ಕೇಂದ್ರೀಕರಿಸಿಕೊಂಡಿದ್ದಲ್ಲಿ, ಆಗ ಆ 'ಪ್ರಾಣ'ದ ಜೊತೆಗೆ ಪ್ರಪ್ರಥಮವಾಗಿ ಸಂಪರ್ಕವನ್ನು ಸಾಧಿಸಿಕೊಂಡಿರುತ್ತದೆ. ಒಂದು ವೇಳೆ ನೀನು ಬೌದ್ಧಿಕವಾಗಿ ಲಕ್ಷ್ಯವನ್ನು ಕೇಂದ್ರೀಕರಿಸಿಕೊಂಡಿದ್ದಲ್ಲಿ, ತದನಂತರದಲ್ಲಿ ಬೌದ್ಧಿಕ ಹಂತದಿಂದ ಹೃದಯದ ಹಂತಕ್ಕೆ ಮುಂದೆ ಗಮಿಸಬೇಕಾಗುತ್ತದೆ. ಅದೂ ನಿನ್ನನ್ನು

ನೀನೇ ಆ ಪ್ರಾಣಿಕ ಬಲದೊಂದಿಗೆ (ಜೀವಾತ್ಮನೊಂದಿಗೆ) ಗುರುತಿಸಿಕೊಳ್ಳಲು ಅಥವಾ ಅರ್ಥೈಸಿಕೊಳ್ಳಲು ಸಮರ್ಥನಾಗುತ್ತೀಯಾ. ಅಲ್ಲದೇ ಒಂದು ವೇಳೆ ಇಲ್ಲಿ ನೀನು ಶಕ್ತಿಗಳನ್ನು ಒಗ್ಗೂಡಿಸಿಕೊಳ್ಳಲು ಅಥವಾ ಕ್ರೋಢೀಕರಿಸಿಕೊಳ್ಳುವದು ಅತ್ಯುತ್ತಮವೇ ಆಗಿದೆ. ಏಕೆಂದರೆ ಇದೇ ಆ ವಿಷಯದ ಕೇಂದ್ರವಾಗಿರುತ್ತದೆ. ಈ ಅಸ್ತಿತ್ವದ ವಲಯದಲ್ಲಿಯೇ ನೀನು ಪ್ರಗತಿಯನ್ನೂ ಕಾಣುತ್ತೀಯಾ. ಪವಿತ್ರಗೊಳ್ಳಲು ಬೇಕಾದ ಬಲಗಳನ್ನು ಕಾಣುತ್ತೀಯಾ. ಮತ್ತೂ ಮೇಲಾಗಿ ಅತ್ಯಂತ ಪರಿಣಾಮಕಾರಿಯಾದ ಅಭೀಪ್ಸೆಯಾಗಿರುತ್ತದೆ. ಈ ಅಭೀಪ್ಸೆಯೂ ಹೃದಯದಿಂದಲೇ ಉದಿತಗೊಂಡಿರುತ್ತದೆ. ಏಕೆಂದರೆ ಬೌದ್ಧಿಕ ಹಂತದಿಂದ ಬರುವ ಅಭೀಪ್ಸೆಗಿಂತ ಇದು ತುಂಬ ಪರಿಣಾಮಕಾರಿಯಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/389**

ಹಾಗಾದರೆ ಯೋಗದಿಂದ ನೀನು ಏನನ್ನು ಇಚ್ಛಿಸುತ್ತೀಯಾ? ಶಕ್ತಿಯನ್ನು ಪಡೆದುಕೊಳ್ಳಲೇ? ಅಥವಾ ಪ್ರಶಾಂತತೆಯನ್ನು ಮತ್ತು ಸಮಾಧಾನವನ್ನು ಪಡೆಯುವದಕ್ಕೋ? ಮಾನವೀಯತೆಯಿಂದ ಸೇವೆ ಮಾಡುವದಕ್ಕೋ?

ಆದರೆ ನೀನು ಸೂಕ್ತವಾದ ಪಥದಲ್ಲಿ ಸಾಗುತ್ತಿದ್ದೀಯ ಎನ್ನುವದನ್ನು ಈ ಯಾವ ಉದ್ದೇಶಗಳೂ ತೋರಿಸುತ್ತಿಲ್ಲ.

ನೀನು ಉತ್ತರಿಸಲೇಬೇಕಾದ ಪ್ರಶ್ನೆ ಹೀಗಿದೆ; 'ನೀನು ದೈವತ್ವದ ಸಲುವಾಗಿ ಯೋಗವನ್ನು ಅನುಷ್ಠಾನಿಸುತ್ತಿರುವೆಯಾ?' ನಿನ್ನ ಜೀವನದಲ್ಲಿ ದೈವತ್ವವೇ ಪರಮೋಚ್ಚವಾಗಿರುವ ಸಂಗತಿಯಾಗಿದೆಯೇ/ಇದಿಲ್ಲದೇ ನೀನು ಏನನ್ನೂ ಸರಳವಾಗಿ ಸುಲಭವಾಗಿ ಸಾಧಿಸಲು ಸಾಧ್ಯವಿಲ್ಲವೇನು? ನಿನ್ನ ಮೂಲಹೇತುವೇ ದೈವತ್ವವಾಗಿದೆ ಎಂದು ನಿನ್ನ ಅನುಭೂತಿ ಇದೆಯೇ? ಅದಿಲ್ಲದೇ ಇದ್ದ ಸಂದರ್ಭದಲ್ಲಿ ನಿನ್ನ ಅಸ್ತಿತ್ವಕ್ಕೇ ಅರ್ಥವಿಲ್ಲ ಎನ್ನುವದನ್ನು ಅರಿತುಕೊಂಡಿದ್ದೀಯಾ? ಹೀಗಿದ್ದಲ್ಲಿ ಮಾತ್ರ, ಆ ಪಥದ ಎಡೆಗೆ ಸಾಗಲು ಇರುವ ಕರೆಯನ್ನು ನೀನು ಹೊಂದುತ್ತೀಯಾ. ದೈವತ್ವಕ್ಕಾಗಿ ಅಭೀಪ್ಸೆ ಹೊಂದುವದೇ ಇಲ್ಲಿ ಅತ್ಯಾವಶ್ಯವಾಗಿರುವ ಸಂಗತಿಯಾಗಿರುತ್ತದೆ.

ಇನ್ನು ಮುಂದಿನ ಸಂಗತಿ ಎಂದರೆ, ನೀನು ಅದನ್ನು ಸದಾ ಕಾಲವೂ ಒಲವಿನಿಂದಲೇ ರಕ್ಷಿಸಿಕೊಳ್ಳಬೇಕಾಗಿದೆ. ಅದಕ್ಕಾಗಿ ಸದಾ ಕಾಲವೂ ಜಾಗ್ರತಿಯಿಂದಲೇ ಇರಬೇಕು. ಎಚ್ಚರಿಕೆಯಲ್ಲಿಯೇ ಮುಂದುವರೆಯಬೇಕಾಗಿದೆ.

ಇದರ ಜೊತೆಗೆ ಸದಾ ಕಾಲವೂ ಜೀವಂತಿಕೆಯು ತುಂಬಿರುವಂತೆ ಕಾಯ್ದುಕೊಳ್ಳಬೇಕಾಗಿದೆ. ಇದಕ್ಕಾಗಿ ಅವಶ್ಯವಿರುವ ಸಂಗತಿ ಏನೆಂದರೆ, – ಅದೂ ಈ ಏಕಾಗ್ರತೆ – ಅದರಲ್ಲೂ ದೈವತ್ವದ ಬಗೆಗೆ ಒಂದು ಖಚಿತವಾದ ನೆಲೆಯ, ಅಖಂಡವಾಗಿರುವ ಮತ್ತು ಏಕಾಗ್ರತೆಯ ಪಾರಮ್ಯದ ಹಂತದಲ್ಲಿ ಅದರ ಇಚ್ಛೆ ಮತ್ತು ಉದ್ದೇಶದ ಬಗೆಗೆ ದೃಷ್ಟಿಕೋನವನ್ನು ಹೊಂದಬೇಕಾಗಿದೆ.

ಹೃತ್ಪೂರ್ವಕವಾಗಿ ಏಕಾಗ್ರತೆಯನ್ನು ಗಳಿಸಿಕೊ. ಅದರಲ್ಲಿಯೇ ನಿನ್ನನ್ನು ನೀನು ಸಂಪೂರ್ಣ ತೊಡಗಿಸಿಕೊಳ್ಳಬೇಕು. ಹೃದಯದ ಆಳಕ್ಕೆ – ಅದೂ ನಿನಗೆ ಎಷ್ಟು ಸಾಧ್ಯವೋ ಅಷ್ಟೂ ಆಳಕ್ಕೆ ಪ್ರವೇಶಿಸಬೇಕು. ಚೆದುರಿ ಹೋಗಿರುವ ನಿನ್ನ ಚೇತನದ ಸರ್ವಾತಿಸರ್ವ ತಂತುಗಳನ್ನು ಒಗ್ಗೂಡಿಸಿಕೊಳ್ಳಬೇಕು. ಕೇಂದ್ರೀಕರಿಸಿ–ಕೊಳ್ಳಬೇಕು. ಅವುಗಳನ್ನು ಒಂದೇ ಸೂತ್ರದಲ್ಲಿ ಸೂತ್ರೀಕರಿಸಿಕೊಳ್ಳಬೇಕು. ಮತ್ತೆ ಅದರಲ್ಲಿಯೇ ಧುಮುಕಿ ಅದರಲ್ಲಿಯೇ ತಲ್ಲೀನತೆಯನ್ನು ಸಾಧಿಸಿಕೊಳ್ಳಬೇಕು.

ಹೃದಯದ ಅಂತರಾಳದ ಆಳದಲ್ಲಿಯೇ ಸದಾ ಘನ ಪ್ರಶಾಂತತೆಯಲ್ಲಿ ಒಂದು ಜ್ವಾಲೆಯು (ಜ್ಯೋತಿಯು) ಪ್ರಜ್ವಲಿಸುತ್ತಲೇ ಇರುತ್ತದೆ. ಅದೇ ನಿನ್ನಂತರಾಳದಲ್ಲಿರುವ "ದಿವ್ಯತ್ವ" ಅಥವಾ "ದೈವ"ವಾಗಿದೆ. ಅದೇ ನಿನ್ನ ನೈಜ ಆತ್ಮವೂ ಹೌದು. ನೀನು ಅದರ ನಾದವನ್ನು ಆಲಿಸು. ಅದರ ನಿರ್ದೇಶಗಳನ್ನು ಅನುಸರಿಸಬೇಕು.

ಏಕಾಗ್ರತೆಯನ್ನು ಸಾಧಿಸಿಕೊಳ್ಳಬಹುದಾದ ಮತ್ತೆ ಕೆಲವು ಕೇಂದ್ರಗಳು/ಸ್ಥಾನಗಳೂ ಇವೆ. ಉದಾಹರಣೆಗೆ, – ಓರ್ವನು ಶಿರೋಭಾಗದ ಮೇಲೆ ಕೇಂದ್ರಿಕರಿಸಿಕೊಂಡರೆ, ಮತ್ತೆ ಓರ್ವನು ತನ್ನ ಭ್ರೂಮಧ್ಯದಲ್ಲಿ ಕೇಂದ್ರೀಕರಿಸಿ–ಕೊಳ್ಳುತ್ತಾನೆ. ಪ್ರತಿಯೊಂದು ಹಂತವೂ ಸಹಿತ ಅದರದೇ ಆದ ಕಾರ್ಯಕಾರಿತ್ವವನ್ನು ಹೊಂದಿದ್ದು, ಜೊತೆಗೆ ನಿಗದಿತವಾಗಿರುವ ಸೂಕ್ತ ಫಲಿತಾಂಶಗಳನ್ನೂ ಒದಗಿಸುತ್ತವೆ. ಆದರೆ ಮುಖ್ಯ ಪ್ರಾಣ (ಸೆಂಟ್ರಲ್ ಬೀಯಿಂಗ್) ಮಾತ್ರ ಹೃದಯದಲ್ಲಿಯೇ ಸ್ಥಿತಗೊಂಡಿರುತ್ತದೆ. ಮತ್ತೆ ಇದು ಹೃದಯದ ಅಂತರಾಳದ ಸರ್ವ ಚಲನವಲನಗಳನ್ನೂ ಮುಂದುವರೆಸುತ್ತಿರುವ ಅಭಿಜಾತ ಆಂದೋಲನವಾಗಿರುತ್ತದೆ. ಇದರಲ್ಲಿ ಸರ್ವಗತಿಶೀಲತೆ ಮತ್ತು ರೂಪಾಂತರಕ್ಕೆ ಅವಶ್ಯವಾಗಿರುವ ತುಡಿತ ಹಾಗೂ ಸಾಕ್ಷಾತ್ಕಾರಕ್ಕಾಗಿ ಬೇಕಾದ ಶಕ್ತಿ ಎಲ್ಲವೂ ಇರುತ್ತವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/1**

## ಆಕಾಂಕ್ಷೆಯ ಹುಸಿಯ ಆತ್ಮ ಮತ್ತು ನೈಜ ಆತ್ಮ

ಮಾನವನಲ್ಲಿ ಪ್ರಾಣಿಜನ್ಯವಾಗಿರುವ ಪ್ರಾಣಿಕ ಆವೇಗಗಳು/ಪ್ರಾಕೃತಿಕ ಆವೇಗಗಳು ಅವನ ಹೃದಯದಲ್ಲಿ ಸದಾ ಮುಂಚೂಣಿಯಲ್ಲಿಯೇ ಇರುತ್ತವೆ. ಮತ್ತೂ ಹೆಚ್ಚು ವಿಕಾಸಗೊಂಡಂತೆ ಇರುವ ಹಂತದಲ್ಲೂ ಸಹಿತ ಇವು ಮುಂಚೂಣಿಯಲ್ಲಿಯೇ ಕಾಣುತ್ತವೆ. ಈ ತೆರನಾದ ಎಲ್ಲ ಭಾವನೆಗಳೂ ಅಹಂಕಾರ ತುಂಬಿರುವ ರಾಗಾವೇಶದಿಂದಲೇ ಕೂಡಿರುತ್ತವೆ. ಪ್ರಾಕೃತಿಕವಾದ (ಸ್ವಾಭಾವಿಕವಾದ) ಅಂಧಾನುಕರಣೆಯಿಂದಲೇ ಕೂಡಿರುತ್ತವೆ. ಮತ್ತೆ ಮೇಲಾಗಿ ಈ ಜೀವನದ ಎಲ್ಲ ಲೀಲೆಗಳ–ಪ್ರಚೋದನೆಗಳೂ ಅವುಗಳ ಅಪರಿಪೂರ್ಣತೆ–ಯಿಂದಲೇ ರೂಪು ಪಡೆದಿರುತ್ತವೆ. ಒಮ್ಮೊಮ್ಮೆ ಪತಿತ ಮನೋಭಾವನೆಯಲ್ಲಿಯೂ ಇರುತ್ತವೆ. ಹೃದಯವೂ ಸಹಿತ ಇಲ್ಲಿ ಬಂಧಿಸಲ್ಪಟ್ಟಂತೆಯೇ ಇದ್ದು, ಅಲ್ಲಿನ ಕಾಮನೆಗಳು, ವಾಂಛೆಗಳು, ಕ್ರೋಧಗಳು, ತೀವ್ರಾತಿ ತೀವ್ರ ಅಥವಾ ಉಗ್ರವಾಗಿರುವ ಹೆಬ್ಬಯಕೆಗಳಿಂದ, ಕ್ಷುದ್ರ ಲಾಲಸೆಗಳಿಂದ ಮತ್ತು ಕ್ಷುಲ್ಲಕತನದ ಉದ್ದೇಶ ಹೊಂದಿರುವ, ಅಸ್ಪಷ್ಟತೆಯಿಂದ ತುಂಬಿದ ಮತ್ತು ಜೀವಶಕ್ತಿಯ ಕುಸಿತದಿಂದಾಗಿ ಹಾಗೂ ಪ್ರತಿಯೊಂದಕ್ಕೂ ಪ್ರತಿಸ್ಪಂದನಗೊಳ್ಳುತ್ತಿರುವ ಕಾರಣದಿಂದಾಗಿ, ದಾಸ್ಯತ್ವಕ್ಕೆ ಸಂದ ಹಂತದಲ್ಲಿರುತ್ತವೆ. ಹೀಗಾಗಿಯೇ ಎಲ್ಲರಿಂದಲೂ ನಿರಾಕರಿಸಲ್ಪಡುತ್ತವೆ. ಈ ಎಲ್ಲ ಸಂಗತಿಗಳಿಂದ ಮಿಶ್ರಣಗೊಂಡಿರುವ ಈ ಭಾವೋದ್ರೇಕದ ಹೃದಯದ ಹಾಗೂ ಸಂವೇದನಾಶೀಲ ಲೌಕಿಕ–ಲಾಲಸೆಯಿಂದಾಗಿ, ಮಾನವನಲ್ಲಿ ಸೃಷ್ಟಿಗೊಂಡ ಈ ಪ್ರಾಣೀಕ ವ್ಯವಸ್ಥೆಯಿಂದ, ಲಾಲಸೆಗಳೇ ಪ್ರಧಾನವಾಗಿರುವ ಒಂದು 'ಹುಸಿ ಆತ್ಮದ' ಸೃಷ್ಟಿಗೆ ಕಾರಣವಾಗುತ್ತದೆ. ಇದು ಹೇಗಿರುತ್ತದೆ ಎಂದರೆ, – ಅತ್ಯಂತ ಅಪರಿಸ್ಕೃತ ಮತ್ತು ಭಯಾವಹ ವಿಷಯವಾಗಿದ್ದು, ಅದರ ಮೂಲಕಾರಣವು ಸರಿಯಾಗಿಯೇ ಅಪನಂಬಿಕೆಗಳನ್ನು ಹಾಗೂ ಅವುಗಳನ್ನು ನಿಯಂತ್ರಿಸುವ ಅವಶ್ಯಕತೆಯನ್ನೇ ಅನುಭವಿಸುತ್ತದೆ. ಅದರ ಮೇಲೆ ನೇರವಾಗಿಯೇ ನಿಯಂತ್ರಣವನ್ನು ಹೊಂದಿದ್ದರೂ ಸಹಿತ ಇದು ಘಟಿಸುತ್ತದೆ. ಇದು ನಮ್ಮ ಅಪರಿಪೂರ್ಣ ಹಾಗೂ ಸಮರ್ಥನೀಯವಾಗಿಯೇ ಇರುವ ನಮ್ಮದೇ ಪ್ರಾಣಿಕ/ಜೈವಿಕ ಸ್ವಭಾವವು ಯಾವಾಗಲೂ ಅನಿಶ್ಚಿತತೆಯಲ್ಲಿಯೇ ಮತ್ತು ಕಪಟತನದಲ್ಲಿಯೇ ಇರುವಂತಾಗುತ್ತದೆ. ಆದರೆ ಅಲ್ಲಿ ಮಾನವನ ನೈಜ ಆತ್ಮ ಇರುವದೇ ಇಲ್ಲ. ಅದು ನೇರವಾಗಿ ಮಾನವನಲ್ಲಿ – ಅಂದರೆ ಅವನ ಹೃದಯದ ಅಂತರಾಳದಲ್ಲಿ – ಅದೃಶ್ಯರೂಪದಲ್ಲಿಯೇ ಇರುತ್ತದೆ. ಅದರಲ್ಲೂ ಪ್ರಕಾಶಮಾನವಾಗಿರುವ

ಕಾಂತಿಮಯವಾಗಿರುವ ಸ್ವಭಾವದ ಆ ಗುಹ್ಯತಾಣದಲ್ಲಿ ಸ್ಥಿತಗೊಂಡಿರುತ್ತದೆ. ಅಲ್ಲಿಯೇ ರಹಸ್ಯವಾಗಿಯೇ ಅನುಪ್ರವೇಶ ಮಾಡುವ 'ದಿವ್ಯ ಪ್ರಕಾಶ'ವೇ ನಮ್ಮ 'ಆತ್ಮ'ವಾಗಿರುತ್ತದೆ. ಇದು ಬಹುತೇಕ ಜೀವಿಗಳಲ್ಲಿ ಅತ್ಯಂತ ಪ್ರಶಾಂತಮಯ ಪ್ರದೀಪ್ತತೆಯಲ್ಲಿದ್ದು ಕೆಲವೇ ಕೆಲವರು ಮಾತ್ರ ಇದರ ಬಗೆಗೆ ಜಾಗ್ರತಿಯನ್ನು ಹೊಂದಿರುತ್ತಾರೆ. ಪ್ರತಿಯೊಬ್ಬನಿಗೂ ಆತ್ಮವಿದ್ದರೂ ಸಹಿತ, ಅದರಲ್ಲಿ ಕೆಲವೇ ಕೆಲವರು ಮಾತ್ರ ಅವರ ಆತ್ಮದ ನೈಜಸ್ಥಿತಿಯ ಕುರಿತು ಪ್ರಜ್ಞೆಯನ್ನು ಹೊಂದಿರುತ್ತಾರೆ. ಅದರೊಡನೇ ನೇರಾನೇರವಾದ ಸಂಪರ್ಕವನ್ನೂ ಸಂವಹನವನ್ನೂ ಹೊಂದಿರುತ್ತಾರೆ.

ಇಲ್ಲಿಯೇ 'ದಿವ್ಯತ್ವದ ಸೂಕ್ಷ್ಮಾತಿಸೂಕ್ಷ್ಮ ಕಿಡಿ(ಸ್ಫುಲಿಂಗ)' ಸ್ಥಿತಗೊಂಡಿರುತ್ತದೆ. ಇದೇ ನಮ್ಮ ಸ್ವಭಾವದ ಅಸ್ಪಷ್ಟ ಸಾಂದ್ರತೆಗೆ ಸಹಕಾರಿಯಾಗಿ ಮತ್ತೆ ಇಲ್ಲಿಯೇ 'ಚೈತ್ಯಾತ್ಮ'ವಾಗಿ ಪ್ರಗತಿ ಹೊಂದುತ್ತದೆ. ಈ ರೀತಿಯಲ್ಲಿ ಸಾಕಾರಗೊಂಡಿರುವ ಆತ್ಮವು ಅಥವಾ ಓರ್ವ "ನೈಜ ಮಾನವ" (ನರನು) ನಮ್ಮಂತರಂಗದಲ್ಲಿಯೇ ಇರುತ್ತಾನೆ. ಈ ಚೈತ್ಯಾತ್ಮ ಪ್ರಾಣವೇ (ಜೀವವೇ) ವಿಕಾಸಗೊಂಡು – ಪ್ರಗತಿ ಹೊಂದಿ – ಹೃದಯದ ಚಲನವಲನಗಳನ್ನು ಮತ್ತು ಸ್ಪಂದನಗಳನ್ನು, ಅದರ ಮೂಲಕ ಅದರ ಲಕ್ಷಣಗಳ ಮೂಲಕವೇ ಹಾಗೂ ನಾಡಿಸ್ಪಂದನದ ಸಹಕಾರದಿಂದ ಮಾನವನು ತನ್ನದೇ "ಆತ್ಮದ" ಬಗೆಗೆ ಮತ್ತೂ ಹೆಚ್ಚಿನ ಜಾಗೃತಿಯನ್ನು ಪಡೆದುಕೊಳ್ಳುತ್ತಾನೆ. ಪ್ರಗತಿಶೀಲವಾಗಿರುವ – ವಿಕಾಸಗೊಂಡಿರುವ ಪ್ರಾಣಿ ಎನ್ನುವ ಹಂತದಲ್ಲಿ ನಿರ್ಬಂಧಿಸಲ್ಪಟ್ಟಿದ್ದರೂ ಸಹಿತ, ಅವನ ಅಂತರಂಗದಲ್ಲಿಯೇ ಆ ಪರಮದೇವನ ಅಸ್ತಿತ್ವವಿರುವದರ ದೀಪ್ತಿಮಯ ಕಾಂತಿಗಳ ಕಿಡಿಗಳ ಬಗೆಗೆ ಜಾಗ್ರತಿಯನ್ನು, ಅರಿವನ್ನು ಪಡೆಯುತ್ತಾನೆ. ಅತ್ಯಂತ ಗಾಢವಾದ, ತಲ್ಲೀನಮಯ ಜೀವನದ ಬಗೆಗೆ ಹಾಗೂ ಚೈತನ್ಯದ ಬಗೆಗೆ ಮತ್ತೂ ಪ್ರತಿಯೊಂದೂ ಆ 'ದೈವತ್ವ'ದೊಡನೆ ಸ್ಪಂದನ ಹೊಂದಿರುವದರ ಕುರಿತು ಸಂಕೇತಗಳನ್ನು ಕಾಣುತ್ತಾನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 23/150**

### ಆಶೆಗಳನ್ನು ತ್ಯಜಿಸುವದೇ ಆತ್ಮದ ಸಂಪರ್ಕಕ್ಕೆ ಸಹಕಾರಿ

ಈ ಚೈತ್ಯಾತ್ಮ ಪುರುಷನೊಂದಿಗೆ ಅಂತರಂಗದಲ್ಲಿಯೇ ಒಂದು ಪ್ರಕಾರದ ಆಂತರಿಕ ಸಂಗಾತಿಯಂತೆಯೇ ಐಕ್ಯತೆಯೂ ಇರುತ್ತದೆ. ಯಾವಾಗ ಓರ್ವನು ಇಚ್ಛಾಪೂರ್ವಕವಾಗಿಯೇ ಆಶೆಗಳನ್ನು ತ್ಯಜಿಸುತ್ತಾನೆಯೋ, ಆಗ ಅಲ್ಲಿ ಈ

ಐಕ್ಯತೆಯು ಅವತರಿಸುತ್ತದೆ. ಹೀಗಾಗಿಯೇ ಮತ್ತೆ ಮತ್ತೆ ಮತ್ತೂ ಹೆಚ್ಚಿನ ಪ್ರಮಾಣದ ತೋಷವನ್ನು ಅವನು ಅನುಭವಿಸುವ ಕಾರಣದಿಂದಾಗಿ, ಅವನು ತನ್ನಾತ್ಮವನ್ನು ಅರಿತುಕೊಳ್ಳುವ ತನ್ನದೇ ಇಚ್ಛೆಯನ್ನು ತೃಪ್ತಿಪಡಿಸಿಕೊಳ್ಳುತ್ತಾನೆ. ಇದರ ಜೊತೆಜೊತೆಗೇ, ಅತೀ ಸರ್ವೇಸಾಮಾನ್ಯವಾಗಿ, ಯಾರನ್ನೂ ಬಿಡದಂತೆ, ಯಾವಾಗ ಓರ್ವನು ತನ್ನ ಇಚ್ಛೆಯನ್ನು ತೃಪ್ತಿಪಡಿಸಿಕೊಳ್ಳುತ್ತಾನೆಯೋ, ಆಗಲೂ ಅಲ್ಲಿ ಒಂದು ರೀತಿಯ ಕಹಿಯಾದ ಅನುಭವವು ಮಾತ್ರ ಎಲ್ಲೋ ಒಂದು ಕಡೆ ಉಳಿದುಕೊಂಡೇ ಇರುತ್ತದೆ.

ಯಾರಿಗೆ ಈ ಇಚ್ಛೆಯನ್ನು ತೃಪ್ತಿಪಡಿಸಿಕೊಳ್ಳಲು ಸಾಧ್ಯವಾಗಿಲ್ಲವೋ, ಆಗ ಅಲ್ಲಿ ಈ ತೆರನಾದ ಕಹಿಯಾದ ಅನುಭವದ ಸಂಗತಿ ಇರುವದಿಲ್ಲ. ಓರ್ವ ವ್ಯಕ್ತಿಯು ಅತ್ಯಂತ ಸಿಹಿಯಾದ ಖಾದ್ಯವನ್ನು ಹೆಚ್ಚು ಹೆಚ್ಚು ತಿನ್ನುತ್ತಾ ಹೋದಂತೆ, ಆಗ ಆ ಸಿಹಿಯ ಜೊತೆಗೇ, ಅದೇ ಸಿಹಿಯ ಜೊತೆಗೇ ಅದರ ಬಗೆಗೇ ಒಂದು ಕಹಿಯಾದ ಅನುಭವದ ಹಂತವೂ ರೂಪುಗೊಳ್ಳುತ್ತದೆ. ಇಲ್ಲಿಯೂ ಸಹಿತ ಇದೇ ರೀತಿಯ ಸಂಗತಿ ಘಟಿಸಿರುತ್ತದೆ. ಹೀಗಾಗಿ ಅತ್ಯಂತ ಪ್ರಾಮಾಣಿಕವಾಗಿಯೇ ನೀನು ಪ್ರಯತ್ನಶೀಲನಾಗು. ಆದರೆ ನೀನು ನಿನ್ನ ಇಚ್ಛೆಗಳನ್ನು, ಬಯಕೆಗಳನ್ನು ತ್ಯಜಿಸಿದಂತೆ ನಟಿಸುವದು ಮಾತ್ರ ಬೇಡವೇ ಬೇಡ. ಅದನ್ನು ಒಂದು ನಿಗದಿಗೊಳಿಸಲ್ಪಟ್ಟಿರುವ ಮೂಲೆಯಲ್ಲಿ (ಸ್ಥಾನದಲ್ಲಿ) ಇಡು. ಇದು ಅವಶ್ಯಕವಾಗಿರುವದೇಕೆಂದರೆ, ಆ ರೀತಿ ಮಾಡದಿದ್ದಲ್ಲಿ ಅವನು ಸದಾ ಕಾಲವೂ ಅಸಂತುಷ್ಟನಾಗಿಯೇ ಇರುವ ಸಂದರ್ಭವಿರುತ್ತದೆ. ಏನೇ ಆದರೂ ಇದನ್ನು ಕಡ್ಡಾಯವಾಗಿಯೇ ಅತ್ಯಂತ ಪ್ರಾಮಾಣಿಕವಾಗಿಯೇ ಅನುಷ್ಠಾನಗೊಳಿಸಿಕೊಳ್ಳಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/40**

## ಮನಸ್ಸು ಮತ್ತು ಆತ್ಮ

ಮನಸ್ಸು ಎನ್ನುವದು ಸಾರೂಪ್ಯ ಸಂರಚನೆಗೆ ಹಾಗೂ ಸಂಯೋಜನೆಗೆ ಇರುವ ಉಪಕರಣವಾಗಿದೆ. ಮತ್ತೆ ಒಂದು ವೇಳೆ ಚೈತ್ಯವು ತನ್ನನ್ನು ಬಳಸಿಕೊಳ್ಳಲು ಈ ಮನಸ್ಸು ಸಮ್ಮತಿಸಿದಲ್ಲಿ, ಅದು ಅತ್ಯಂತ ಸುಸಂಗತವಾದ ಸಂಗತಿಯೇ ಆಗಿರುತ್ತದೆ. ಆದರೆ ಚೈತ್ಯವು ಅನುಷ್ಠಾನಗೊಳ್ಳಲು ಮನಸ್ಸು ಸಹಾಯಕವಾಗಿರುವದಿಲ್ಲ ಎನ್ನುವದೂ ಮುಖ್ಯ ಸಂಗತಿ. ಇಂತಹ ಸಂದರ್ಭಗಳಲ್ಲಿ

ಪಾತ್ರಗಳು ಅದಲು–ಬದಲಾಗುತ್ತವೆ. ಚೈತ್ಯವು ತದನಂತರದಲ್ಲಿ ಅನುಷ್ಠಾನಗೊಳ್ಳಲು ಮನಸ್ಸು ಬೇಕಾದರೆ ಒಂದು ಉಪಕರಣದಂತೆ ಮಾತ್ರವೇ ಪಾತ್ರ ವಹಿಸಬಹುದಾಗಿದೆ. ಯಾವಾಗ ಬಾಹ್ಯ ಚೈತನ್ಯವನ್ನು ಈ ಚೈತ್ಯವು ಸಂಪೂರ್ಣವಾಗಿ ತನ್ನ ಸ್ವಾಧೀನಕ್ಕೆ ತೆಗೆದುಕೊಳ್ಳುತ್ತದೆಯೋ, ಆಗ ಈ ಮನಸ್ಸು ಕೇವಲ ಒಂದು ಉಪಕರಣವಾಗಿಯೇ ಕಾರ್ಯ ನಿರ್ವಹಿಸುವಂತೆ ಇರುತ್ತದೆ. ಅಪರೂಪವಾಗಿ ಒಮ್ಮೊಮ್ಮೆ ಅದಕ್ಕಿಂತಲೂ ಮೊದಲೇ ಇದ್ದರೂ ಇರಬಹುದು. ಸಾಮಾನ್ಯವಾಗಿ ಇದೊಂದು ಆಚ್ಛಾದವಾಗಿಯೇ ಇದ್ದು ಒಮ್ಮೊಮ್ಮೆ ಅಡಚಣೆಯ ರೀತಿಯಲ್ಲಿಯೂ ಇರುತ್ತದೆ. ಆದರೆ ಖಂಡಿತವಾಗಿಯೂ ಇದು ಅಲ್ಲಿ ಅನುಷ್ಠಾನಕ್ಕೆ ಯಾವುದೇ ರೀತಿಯಲ್ಲಿಯೂ ಸಹಾಯಕಾರಿಯಾಗಿರುವದಿಲ್ಲ. ಒಂದು ವೇಳೆ ಅದು ಸೂಕ್ತವಾದ ರೀತಿಯಲ್ಲಿ ಮತ್ತು ನಿಗದಿತವಾದ ನೈಜ ಸ್ಥಳದಲ್ಲಿ ಹಾಗೂ ನೈಜ ಸಂಚಲನದಿಂದ ಕ್ರಿಯೆಗೆ ತೊಡಗಿಕೊಂಡಿದ್ದಲ್ಲಿ, ಆಗ ಅದು ಸಹಾಯ ಮಾಡುತ್ತದೆ. ಮತ್ತೆ ಅದು ಸಂಪೂರ್ಣವಾಗಿ ಈ ಚೈತ್ಯದ ಪ್ರೇರೇಪಣೆಗೆ ಸಂಪೂರ್ಣವಾಗಿ ವಿಧೇಯವಾಗಿ ಆಗಮಿಸಿದ್ದಲ್ಲಿ, ಆಗ ಅದು ಜೀವನವನ್ನು ಸಂಯೋಜನೆಗೊಳಿಸಲು ಸಹಾಯಕವಾಗಿರುತ್ತದೆ. ಏಕೆಂದರೆ ಇದೇ ಅದರ ಕರ್ತವ್ಯವೂ ಆಗಿರುತ್ತದೆ. ಅಸ್ತಿತ್ವದಲ್ಲಿ ಇರಲು ಮುಖ್ಯ ಕಾರಣವೂ ಇದೇ ಆಗಿರುತ್ತದೆ. ಆದರೆ, ಪ್ರಪ್ರಥಮವಾಗಿ ಈ ಚೈತ್ಯಾತ್ಮ–ಪುರುಷನು (ಜೀವನು) ಈ ವಲಯದ ಸಾಮ್ಯತೆಯನ್ನು ಕಡ್ಡಾಯವಾಗಿಯೇ ಹೊಂದಬೇಕಾಗಿದೆ. ಅದೂ ಅಲ್ಲದೇ ಈ ವಾಸಸ್ಥಾನದ ಒಡೆಯನೂ ಆಗಿರಬೇಕಾಗಿದೆ. ತದನಂತರದಲ್ಲಿ ಮುಂದಿನ ಪ್ರತಿಯೊಂದು ಸುವ್ಯವಸ್ಥಿತವಾಗಿಯೇ ಅನುಷ್ಠಾನಿಸಲ್ಪಡುತ್ತದೆ.

ಈ ಬಾಹ್ಯ–ಜೀವಕ್ಕೆ (ಅಸ್ತಿತ್ವಕ್ಕೆ) ಒಂದೇ ಒಂದು ಮಾರ್ಗ ಮಾತ್ರ ಇರುತ್ತದೆ. ಹೀಗಾಗಿ ಮೊದಲಿಗೆ ಈ ಭೌತಿಕ–ಅಸ್ತಿತ್ವದ ವಿಷಯವನ್ನು ಗಮನಿಸಿದರೆ, – ಇದು ನಿಜವಾಗಿಯೂ ಬಡಪಾಯೀ ಭೌತಿಕ ಅಸ್ತಿತ್ವವೇ ಆಗಿದೆ. ಅದಕ್ಕೆ ಏನೇನೂ ಗೊತ್ತಿರುವದಿಲ್ಲ. ತನ್ನಷ್ಟಕ್ಕೆ ತಾನೇ ಏನನ್ನೂ ಮಾಡಲಾರದ ಸ್ಥಿತಿಯಲ್ಲಿ ಇರುತ್ತದೆ. ಅದೆಲ್ಲ ಸರಿ, ಒಟ್ಟಿನಲ್ಲಿ, ಈ ಚೈತ್ಯ ಪುರುಷನು ಅಭಿವ್ಯಕ್ತಗೊಳ್ಳಲು ಇಲ್ಲಿ ಸಮ್ಮತಿಸಿದಲ್ಲಿ ಮಾತ್ರವೇ ಇದೆಲ್ಲವೂ ಸಾಧ್ಯವಾಗುತ್ತದೆ. ಅದು ಮುಗ್ಧ ಮಗುವಿನ ನಿಷ್ಕಪಟವಾದ ಉದ್ದೀಪನದೊಂದಿಗೆ (ಉತ್ತಾಪದೊಂದಿಗೆ) ಇರುವ ಅಭೀಪ್ಸೆ–ಯಾಗಿರಬೇಕು, ಪ್ರಾರ್ಥನೆಯಾಗಿರಬೇಕು. ಕರೆಯಾಗಿರಬೇಕು. ಇಚ್ಛೆಯಾಗಿರಬೇಕು. ಅದು ಎಲ್ಲ ಸಾಮರ್ಥ್ಯದೊಂದಿಗೆ ಮಂಡಿಸಲ್ಪಟ್ಟಿರಬೇಕು. ಅಲ್ಲಿ ಯಾವುದೇ

'ಕಾರಣ'ಗಳಿಲ್ಲ. ಅಥವಾ ಅರ್ಥೈಸಿಕೊಳ್ಳಲು ಪ್ರಯತ್ನಿಸದೇ ನೇರವಾಗಿ ಅದರೊಡನೆ ಸಮ್ಮಿಲನಗೊಳ್ಳುವಂತಿರಬೇಕು. ಅಲ್ಲಿನ ಅಡೆತಡೆಯಿದ್ದಲ್ಲಿ ಅದು ಹೇಗೆ ಪ್ರಮುಖವಾದ ಕಾರಣವಾಗಿದ್ದು ಮತ್ತು ಅರ್ಥೈಸಿಕೊಳ್ಳಲು ನಡೆಸಿದ ಪ್ರಯತ್ನವು ಅಲ್ಲಿ ಅನುಭವವನ್ನು ರೂಪಿಸುತ್ತಿರುವ ವಿಷಯದ ಬಗೆಗೆ ಯಾರೇ ಆಗಲಿ ಕಲ್ಪಿಸಿಕೊಳ್ಳಲೂ ಸಾಧ್ಯವಾಗುವದಿಲ್ಲ. ನಿಗದಿಗೊಳಿಸಲ್ಪಟ್ಟ ಘಳಿಗೆಯಲ್ಲಿ ನೀನು ಯಾವಾಗ ಆ ಹಂತವನ್ನು ತಲುಪಲು ಸಾಧ್ಯವಾಗುತ್ತದೆಯೋ, ಅದೇ ಘಳಿಗೆಯಲ್ಲಿ ಅಲ್ಲಿ ಕೆಲವೊಂದು ವಿಶೇಷವು ಘಟಿಸುತ್ತದೆ. ಜೀವಿಯ ಚೈತನ್ಯದಲ್ಲಿ ಒಂದು ಕಂಪನವೊಂದು ಪ್ರಾರಂಭಗೊಂಡು ಬದಲಾವಣೆಯನ್ನು ರೂಪಿಸುತ್ತದೆ..... ನೀವೆಲ್ಲರೂ ನಿಮ್ಮ ನಿಮ್ಮ ಅಭೀಪ್ಸೆಯ ವಿಷಯಲ್ಲಿಯೇ ಒತ್ತಡದ ಸ್ಥಿತಿಯಲ್ಲಿಯೇ ಇದ್ದೀರಿ. ಅದಕ್ಕಾಗಿಯೇ ನೀವು ನಿಮ್ಮ ಅಭೀಪ್ಸೆಯನ್ನು ಮತ್ತೂ ತೀವ್ರಗೊಳಿಸಿ–ಕೊಂಡಿದ್ದೀರಿ. ಇದರ ಜೊತೆಗೇ ಪರಿಹಾರಕ್ಕಾಗಿ ನೀವು ಅಲ್ಲಿಯೇ ಕಾದು ಕೂತಿದ್ದೀರಿ. ಒಂದು ವೇಳೆ ಹತಭಾಗ್ಯಗೊಂಡ ಮನಸ್ಸು ಅಚ್ಚರಿಯಲ್ಲಿ ಕಲಮಲಗೊಂಡು, ಏನು ಘಟಿಸುತ್ತಿದೆ ಇಲ್ಲಿ? ಮತ್ತು ಏನು ಘಟಿಸಬಹುದು? ಇದು ಯಾವಾಗ ಘಟಿಸಬಹುದು? ಇದು ಯಾವ ರೀತಿಯಲ್ಲಿ ಘಟಿಸಬಹುದು? ಯಾವ ಉದ್ದೇಶಕ್ಕಾಗಿ ಘಟಿಸುತ್ತದೆ? ಅದೂ ಈ ರೀತಿಯಲ್ಲಿಯೇ ಏಕೆ ಘಟಿಸುತ್ತದೆ?... ಎಂದೆಲ್ಲಾ ಪ್ರಶ್ನೆಗಳೇ ಪ್ರಶ್ನೆಗಳು...

ಇದಿಷ್ಟೇ ಇರುವ ವಿಷಯ. ಇನ್ನು ಮೇಲೆದ್ದು ನಿನ್ನ ಕೋಣೆಯನ್ನು ಸ್ವಚ್ಛ ಮಾಡಿಕೋ. ನೀನು ಇದಕ್ಕಿಂತ ಬೇರೆ ಯಾವುದಕ್ಕೋ ಅರ್ಹನಲ್ಲ....

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/41**

## ಅಂತರಾವಲೋಕನಗೊಳಿಸಿಕೊಳ್ಳುವದರಿಂದಲೇ ಚೈತ್ಯಾತ್ಮನನ್ನು ಅನ್ವೇಷಿಸಬೇಕು

ಯಾರೇ ಆಗಲಿ ಚೈತನ್ಯದ ಪ್ರತಿಯೊಂದು ಅಂಶದಿಂದಲೂ ಈ ಚೈತ್ಯವನ್ನು ಕಂಡುಕೊಳ್ಳಬಹುದು. ಈ ಭೌತಿಕ (ಕಾಯದ) ಅಸ್ತಿತ್ವದ ಹಿನ್ನೆಲೆಯಲ್ಲಿಯೂ ಸಹಿತ ಚೈತನ್ಯವಿರುವದನ್ನು ನೀನು ಕಾಣಬಹುದು. ಭೌತಿಕ ಪ್ರಜ್ಞೆಯಿಂದಲೇ ನೀನು ನೇರವಾಗಿ ಈ ಚೈತ್ಯದ ಸಂಪರ್ಕವನ್ನೂ ಸಾಧಿಸಿಕೊಳ್ಳಬಹುದು. ಸರ್ವವ್ಯಾಪಿಯಾಗಿರುವ ಚೇತನದಿಂದಲೂ ಅದರ ಸಂಪರ್ಕ ಸಾಧಿಸಿಕೊಳ್ಳಬಹುದು. ಅದೇ ರೀತಿಯಲ್ಲಿ ಮಾನಸಿಕ ಚೇತನದಿಂದಲೂ (ಮನೋಚೇತನದಿಂದಲೂ)

ಇದನ್ನು ಸಾಧಿಸಿಕೊಳ್ಳಬಹುದಾಗಿದೆ. ಈ ಚೈತ್ಯವನ್ನು ಕಾಣಲು ನೀನು ಇವೆಲ್ಲ ಪಥದಲ್ಲಿ ಗಮಿಸಿ ಬಂದಂತೆ ಕಾಣುತ್ತಿಲ್ಲ. ನೀನು ನಿನ್ನ ಭೌತಿಕ ಪ್ರಜ್ಞೆಯನ್ನು ಬಿಟ್ಟುಕೊಡದೇ ಇದ್ದರೂ ಸಹಿತ ಈ ಚೈತ್ಯದ ಪ್ರವೇಶ ಸಾಧ್ಯವಿದೆ. ಅದು ನಿನ್ನನ್ನು ನೀನೇ ಅಂತರಾವಲೋಕನಗೊಳಿಸಿಕೊಳ್ಳುವದನ್ನು ಅವಲಂಬಿಸಿದೆ. ಏಕೆಂದರೆ ಇದೊಂದು ಆರೋಹಣವಲ್ಲ. ಅಥವಾ ವರ್ಗೀಕರಣವೂ ಅಲ್ಲ. ಇದು ಸಂಪೂರ್ಣವಾಗಿ ಅಂತರಾವಲೋಕಗೊಳ್ಳುವದಾಗಿದೆ. ಅದೂ ಅಲ್ಲದೇ ಈ ಅಂತರಾವಲೋಕನಗೊಳಿಸಿಕೊಳ್ಳುವ ಕ್ರಿಯೆಯನ್ನು ನೀನು ಈ ಮೊದಲು ಹೇಳಿರುವ ಹಂತಗಳ ಮೂಲಕ ಸಾಗಿಯೇ ಮಾಡಬೇಕೆಂದೇನೂ ಇಲ್ಲ. ನೇರಾನೇರವಾಗಿ ಅದನು ಸಾಧಿಸಿಕೊಳ್ಳಬಹುದಾಗಿದೆ. ಶ್ರೀ ಅರವಿಂದರೇ ಇದಕ್ಕೆ ಸಾಕ್ಷಿಯಾಗಿದ್ದಾರೆ.

ನೀನು (ಕೇವಲ) ಭೌತಿಕ ಪ್ರಜ್ಞೆಯ ಹಿಡಿತದಲ್ಲಿ ಇದ್ದಾಗ, ಈ ನಿನ್ನ ಭೌತಿಕ ಪ್ರಜ್ಞೆಯಿಂದ ಆ ಚೈತ್ಯದ ಚೈತನ್ಯಕ್ಕೆ ಸಾಗಲು ನಿನಗೆ ಏನೂ ಅಡೆ ತಡೆ ಇರುವದಿಲ್ಲ. ನೀನು ನಿನ್ನನ್ನು ವ್ಯಾಪ್ತಿಗೊಳ್ಳುವಂತೆ ಪ್ರಗತಿ ಹೊಂದುವದಾಗಲೀ, ಅಥವಾ ಮಾನಸಿಕವಾಗಿ ಅಥವಾ ಈ ಎಲ್ಲ ಮಾರ್ಗಗಳ ಮೂಲಕವೇ ಆ ಚೈತ್ಯದ ಸಂಪರ್ಕ ಸಾಧಿಸಲು ಮತ್ತೆ ಮರಳಿ ಬರುವ ಪ್ರಸಂಗ ಇರುವದಿಲ್ಲ. ನೀನು ನೇರವಾಗಿಯೇ ಆ ಹಂತವನ್ನು ತಲುಪಬಹುದು. ಅಲ್ಲಿ ಚೈತ್ಯವು ತನ್ನಷ್ಟಕ್ಕೆ ತಾನೇ ನೇರವಾಗಿ ಅಭಿವ್ಯಕ್ತಗೊಳಿಸಲ್ಪಟ್ಟಿರುತ್ತದೆ. ಇದೇ ಈ ವಿಷಯದ ಅಂತರಾರ್ಥವೂ ಆಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/74**

**ಪ್ರಾರಂಭದ ಹೆಜ್ಜೆ**

ಜೀವನದ ಸಂದರ್ಭಗಳ ಹಾಗೂ ದೈಹಿಕ ಸ್ಥಿತಿಯಿಂದ ಸ್ವತಂತ್ರವಾಗಿರುವದನ್ನು ನೀನು ನಿನ್ನಲ್ಲಿಯೇ ಇಚ್ಛಿಸುವ ಕ್ರಿಯೆಯೇ ಇಲ್ಲಿ **'ಪ್ರಾರಂಭದ ಹೆಜ್ಜೆ'**ಯಾಗಿರುತ್ತದೆ. ಅದು ತಾನೇ ರೂಪಿಸಿಕೊಳ್ಳುವ ಮನೋ ರೂಪಾಂತರಣದಿಂದ ಉದ್ಭವಿಸುವದಿಲ್ಲ. ಅದು ನಿನ್ನ ಭಾಷೆ, ನಿನ್ನ ಮಾತು, ನೀನು ವಾಸಿಸುತ್ತಿರುವ ವಾತಾವರಣದಿಂದ ರೂಪು ಪಡೆದಿರುವ ವಿಧಿ–ವಿಧಾನಗಳಿಂದ, ನೀನು ಜನ್ಮ ತಾಳಿರುವ ದೇಶ ಅಥವಾ ನೀನು ಯಾವ ಕಾಲಕ್ಕೆ ಸಂಬಂಧಪಟ್ಟಿರುವೆ ಎನ್ನುವದನ್ನೂ ಅವಲಂಬಿಸಿರುವದಿಲ್ಲ. ನಿನ್ನ ಅಂತರಾತ್ಮದ ಆಳದಲ್ಲಿಯೇ ಇದನ್ನು

ನೀನು ಖಂಡಿತವಾಗಿಯೂ ಅರಗಿಸಿಕೊಳ್ಳಬೇಕು. ಇದೇ ನಿನ್ನನ್ನು ವೈಶ್ವಿಕ ಸಂವೇದನೆಯತ್ತ ಕರೆದೊಯ್ಯುತ್ತದೆ. ಗಡಿಯೇ ಇರದ ವ್ಯಾಪ್ತಿತ್ವದ ಕಡೆಗೆ ಹಾಗೂ ಎಂದಿಗೂ ಅಡೆ–ತಡೆಯಿರದೇ, ಸದಾ ಪ್ರಗತಿಯತ್ತಲೇ ಕರೆದೊಯ್ಯುತ್ತದೆ.

ತದನಂತರದಲ್ಲಿ, ನೀನು ನಿನ್ನನ್ನು ವಿಕೇಂದ್ರೀಕರಣಗೊಳಿಸಿಕೊಂಡು, – ಅಂದರೆ ನಿನ್ನಲ್ಲೇ ನೀನು ಸಂಪೂರ್ಣ ಪ್ರಗತಿಗೊಂಡು – ವ್ಯಾಪ್ತನಾಗುವತ್ತ ಮುಂದುವರೆಯಬೇಕು. ನೀನು ಸರ್ವ ವಸ್ತುಗಳಲ್ಲಿಯೂ ಸರ್ವ ಪ್ರಾಣಗಳಲ್ಲಿಯೂ (ಜೀವಿಗಳಲ್ಲಿಯೂ) ಬದುಕು ಪ್ರಾರಂಭಿಸಬೇಕು. ಪರಸ್ಪರರಲ್ಲಿ ಇರಬಹುದಾದ ಒಬ್ಬರೊಬ್ಬರನ್ನು ವಿಭಾಗಿಸುವ ಎಲ್ಲ ಅಡೆ–ತಡೆಗಳನ್ನೂ ನಿವಾರಿಸಿಕೊಳ್ಳಬೇಕು. ಅವರ ಚಿಂತನಗಳಲ್ಲಿ ನಿನ್ನ ಯೋಚನೆ ಇರಬೇಕು, ಅವರ ಸಂವೇದನೆಗಳಲ್ಲಿ ನೀನು ಸ್ಪಂದಿಸಬೇಕು. ಅವರ ಅನುಭವಗಳಲ್ಲಿ ನೀನೂ ಅನುಭವ ಕಾಣಬೇಕು. ಅವರೆಲ್ಲರ/ಅವುಗಳೆಲ್ಲದರ ಜೀವನವೇ ನಿನ್ನ ಜೀವನವಾಗಿರಬೇಕು. ಯಾವುದನ್ನು ಅಂತರಂಗಿಕವಾಗಿ ದರ್ಶಿಸಲಾಗುತ್ತದೆಯೋ ಅದು ತಕ್ಷಣವೇ "ಸಂಪೂರ್ಣವಾಗಿ" ಜೀವನವಾಗಬೇಕು. ಶಿಲೆಗಳೂ ಸಹಿತ ಚಲಿಸಬೇಕು. ಸಸ್ಯ–ವೃಕ್ಷಗಳ ಸಂವೇದನೆಯನ್ನು, ಇಚ್ಛೆಯನ್ನು ಮತ್ತು ತೊಂದರೆಯನ್ನೂ ಸಹಿತ ನೀನು ಅನುಭವಿಸಬೇಕು. ಪ್ರಾಣಿಗಳು ಬಹುತೇಕವಾಗಿ ಸಂಭಾಷಿಸುವ ಭಾಷೆಯಂತೆ ಇರಬೇಕು, ಏಕೆಂದರೆ ಅವು ಅಸ್ಫುಟತೆಯಿಂದ ಇರುವ ಭಾಷೆಯಲ್ಲಿ ಸಂಭಾಷಿಸುತ್ತವೆ. ಆದರೆ ಅಲ್ಲಿಯೂ ಒಂದು ನಿಗದಿತವಾದ ಅರ್ಥವಿದ್ದೇ ಇರುತ್ತದೆ. ಅದಕ್ಕಿಂತ ಮಿಗಿಲಾಗಿ ಅಲ್ಲೊಂದು ಸ್ಪಷ್ಟವಾದ ಅರ್ಥವಿರುತ್ತದೆ. ಅದಕ್ಕಿಂತಲೂ ಸ್ಪಷ್ಟವಾದ ಅಭಿವ್ಯಕ್ತಿ ಇರುತ್ತದೆ. ಹೀಗಾಗಿ ಪ್ರತಿಯೊಂದೂ ಸಹಿತ ಚಿತ್ತಾಕರ್ಷಕವಾದ ಚೈತನ್ಯವಾಗಿದ್ದು, ಅದು ಕಾಲಾತೀತವೇ ಆಗಿರುತ್ತದೆ. ಸೀಮೆಗಳು ಇರುವದಿಲ್ಲ. ಚೈತ್ಯಾತ್ಮದ ಸಾಕ್ಷಾತ್ಕಾರವೆಂದರೆ ಇದೇ ಮುಖ್ಯ ಸಂಗತಿಯಾಗಿದೆ. ಮತ್ತೆ ಬೇರೆ ಬೇರೆ ವಿಧಾನಗಳೂ ಉಂಟು. ಹಲವಾರು ಅನುಷ್ಠಾನಗಳೂ ಇವೆ. ಎಲ್ಲವೂ ಹೇಳುತ್ತಿರುವದೇನೆಂದರೆ, ನೀನು ನಿನ್ನ ಅಹಂಕಾರವನ್ನು ತೊರೆದು, ತದುತ್ತರದ ಕಡೆಗೆ ಸಾಗುವದನ್ನೇ ತೋರಿಸುತ್ತಿವೆ. ನಿನ್ನ ಬಾಹ್ಯ ವ್ಯಕ್ತಿತ್ವದ ರೀತಿಯಲ್ಲಿ ಇರುವ ಗೋಡೆಯನ್ನು ಒಡೆದು, ನಿನ್ನ ಈ ತೆರನಾದ ಪ್ರತಿಕ್ರಿಯೆಯನ್ನು ಬಿಟ್ಟು, ಸಾಮರ್ಥ್ಯವೇ ಇರದ ನಿನ್ನ ಇಚ್ಛೆಯ ಆಚೆ ಸಾಗಲು ಆಗ ಮಾತ್ರವೇ ಸಾಧ್ಯವಾಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/32–33**

## ಕೆಲವು ಆಧಾರಭೂತ ಹಂತಗಳು

ಪ್ರಪ್ರಥಮವಾಗಿ ಅದರಲ್ಲೂ ಬಹುತೇಕವಾಗಿಯೇ, ಅತ್ಯಂತ ಪ್ರಾಮುಖ್ಯವಾಗಿರುವ ಅಂಶವೆಂದರೆ, ಈ ಅಧ್ಯಾತ್ಮಿಕ ವಿಷಯಗಳನ್ನು ನಿರ್ಣಯಿಸುವಲ್ಲಿ ಈ ಮನಸ್ಸು ಅಸಮರ್ಥವಾಗಿರುತ್ತದೆ. ಬಹುತೇಕವಾಗಿ ಈ ವಿಷಯದ ಬಗೆಗೆ ಬರೆದಿರುವ ಎಲ್ಲರ ಅಭಿಪ್ರಾಯಗಳೂ ಇದೇ ರೀತಿಯಲ್ಲಿ ಇವೆ. ಆದರೆ ಕೆಲವರು ಮಾತ್ರ ಇದನ್ನು ಸೂಕ್ತವಾಗಿ ಅನುಷ್ಠಾನಿಸಿಕೊಂಡಿದ್ದಾರೆ. ಆದಗ್ಯೂ ಸಹಿತ, ಈ ಪಥದಲ್ಲಿ ಪ್ರಯಾಣವನ್ನು ಮುಂದುವರೆಸುವದಕ್ಕಾಗಿ, ಮಾನಸಿಕ ಅಭಿಪ್ರಾಯಗಳಿಂದ ಮತ್ತು ಅದರ ಪ್ರತಿಕ್ರಿಯೆಯಿಂದ ನಿವೃತ್ತಿ ಹೊಂದುವದು ಅತ್ಯಾವಶ್ಯಕವಾಗಿದೆ. ಅದಕ್ಕಾಗಿ ಸಂಪೂರ್ಣವಾಗಿಯೇ ತೃಪ್ತಿ ಹೊಂದುವ ಸಲುವಾಗಿ, ಸುಖದಿಂದ ಇರುವ ಸಲುವಾಗಿ, ಮನೋರಂಜನೆಗಾಗಿ ಅಥವಾ ಸಂತೋಷಕ್ಕಾಗಿ ನಿನ್ನಲ್ಲಿ ಇರುವ ಎಲ್ಲ ಭಾವನೆಗಳನ್ನೂ ತ್ಯಜಿಸಿಬಿಡು. ಕೇವಲ ಪ್ರಗತಿ ಹೊಂದುವದಕ್ಕೋಸ್ಕರವೇ ಪ್ರಜ್ವಲಿಸುತ್ತಿರುವ ಅಗ್ನಿಯಂತೆ ಪರಿವರ್ತವಾಗು. ಏನೇ ಬರಲಿ, ಅದು ನಿನ್ನ ಸಹಾಯಕಾಗಿಯೇ ಬಂದಿದೆ ಬಂದಿರುತ್ತದೆ ಹಾಗೂ ಆಯಾ ಕ್ಷಣದಲ್ಲಿ ಪ್ರಗತಿಗೆ ಏನು ಅವಶ್ಯವಿರುತ್ತದೆಯೋ ಅವೆಲ್ಲವನ್ನೂ ಈಡೇರಿಸುತ್ತವೆ. ಅದಕ್ಕಾಗಿಯೇ ಆಗಮಿಸಿರುತ್ತವೆ.

ನೀನು ಕೈಕೊಂಡ ಎಲ್ಲ ಕ್ರಿಯೆಗಳಲ್ಲಿಯೂ ಸಂತೋಷವನ್ನು ಪಡೆಯಲು ಪ್ರಯತ್ನಿಸು. ಆದರೆ ಕೇವಲ ಸಂತೋಷವನ್ನು ಪಡೆಯುವದೇ ಮಾತ್ರ ಉದ್ದೇಶವಾಗಿರಬಾರದು. ಎಂದಿಗೂ ಉದ್ರೇಕಗೊಳ್ಳಬೇಡ. ಹತಾಶನಾಗಬೇಡ. ವಿರೋಧಿಯೂ ಆಗಬೇಡ. ಸದಾ ಪ್ರಶಾಂತವಾಗಿರಲು ಪ್ರಯತ್ನಿಸು. ಅದರಲ್ಲೂ ಎಂತಹದೇ ಸಂದರ್ಭದಲ್ಲಿಯೂ ಶಾಂತವಾಗಿರಲು ಯತ್ನಿಸು. ಅದೂ ಅಲ್ಲದೇ ಸದಾ ಜಾಗರೂಕನಾಗಿದ್ದುಕೊಂಡೇ, ಆ ಮೂಲಕ ಇನ್ನೂ ಇನ್ನೂ ಪ್ರಗತಿಯನ್ನು ನೀನು ಸಾಧಿಸಬೇಕಾಗಿದೆ ಎನ್ನುವದನ್ನು ಮನದಟ್ಟು ಮಾಡಿಕೊಂಡು. ಮತ್ತೆ ಅದನ್ನು ಅನುಷ್ಠಾನಿಸಲು ಹೆಚ್ಚಿನ ಸಮಯವನ್ನು ಕಳೆಯಬೇಡ.

ಭೌತಿಕ ಘಟನಾವಳಿಗಳ ಪ್ರತ್ಯಕ್ಷ ಮೌಲ್ಯಗಳನ್ನು ಎಂದಿಗೂ ಪರಿಗಣಿಸಿ ಅಲ್ಲಿಯೇ ನಿಲ್ಲಬೇಡ. ಏಕೆಂದರೆ ಆ ವಾಸ್ತವದ ಘಟನೆಗಳು ಮತ್ತು ಆ ಕ್ಷಣದ ಫಲಿತಾಂಶಗಳು ಯಾವಾಗಲೂ ಗೋಜಲು–ಗೋಜಲಾಗಿಯೇ ಇರುತ್ತವೆ. ನಮ್ಮ ಈ ರೀತಿಯ ಮೇಲ್ತೋರಿಕೆಯ ಅರ್ಥೈಸಿಕೊಳ್ಳುವಿಕೆಯಿಂದಾಗಿಯೇ ಆ ವಿಷಯದ ನೈಜತೆಯೂ ನಮ್ಮಿಂದ ನಾಶಗೊಳಿಸಲ್ಪಡುತ್ತದೆ.

ಬೇರೆ ಯಾರೊಬ್ಬರ ಬಗೆಗೂ ಎಂದಿಗೂ ಆಪಾದನೆ ಮಾಡಬೇಡ. ಅದರಲ್ಲೂ ನೀನು ಅವರ ಸ್ವಭಾವವನ್ನು ಬದಲಿಸಲು–ತಿದ್ದಲು ಸಾಮರ್ಥ್ಯ ಪಡೆಯುವವರೆಗೂ ಆಪಾದನೆ ಮಾಡಬೇಡ. ಅವನು ತನ್ನದೇ ಆದ ವಿಧಾನದಲ್ಲಿ ಕಾರ್ಯಕ್ಕಿಳಿದ ಸಂಗತಿಯನ್ನು ನೀನು ಎಂದಿಗೂ ಆಪಾದಿಸುವಂತಿಲ್ಲ. ಒಂದು ವೇಳೆ ನಿನಗೆ ಅಂತಹ ಶಕ್ತಿ ಇದೆ ಎಂದಾದಲ್ಲಿ, ಅವನನ್ನು ಆಪಾದಿಸುವದಕ್ಕಿಂತ ಅವನನ್ನು ಪರಿವರ್ತಿಸಲು ಪ್ರಯತ್ನಿಸು.

ನೀನು ಏನನ್ನೇ ಮಾಡು, ಆದರೆ ಎಂದಿಗೂ ಗಮ್ಯದ (ಗುರಿಯ) ಬಗೆಗಿನ ಲಕ್ಷ್ಯವನ್ನು ಮರೆಯಬೇಡ. ಏಕೆಂದರೆ, ಅದನ್ನು ನೀನೇ ಈಗಾಗಲೇ ನಿರ್ಧರಿಸಿ–ಕೊಂಡಿದ್ದೀಯಾ. ಒಂದೊಮ್ಮೆ ನೀನು ಆ ನಿನ್ನ ಶ್ರೇಷ್ಠವಾದ ಗುರಿಯ ಶೋಧನೆಯನ್ನು ಪ್ರಾರಂಭಿಸಿದಲ್ಲಿ, ಆಗ ನಿನ್ನ ಎದುರು ಯಾವುದು ಶ್ರೇಷ್ಠ ಯಾವುದು ಕನಿಷ್ಠ ಎನ್ನುವ ವ್ಯತ್ಯಾಸವೇ ಬರುವದಿಲ್ಲ. ಎಲ್ಲ ವಿಷಯಗಳೂ ಸಮಾನವಾಗಿಯೇ, ಮಹತ್ವದ್ದಾಗಿ, ಒಂದಾನೊಂದು ವೇಳೆ ಅವು ತಿರಸ್ಕೃತಗೊಳ್ಳಬಹುದಾದ ಹಂತದಲ್ಲಿದ್ದರೂ ಸಹಿತ, ನಿನ್ನ ನಿರ್ಧರಿತ ವಿಜಯಕ್ಕೆ ಎಂದಿಗೂ ಅಡೆ–ತಡೆ ಒಡ್ಡುವದಿಲ್ಲ.

ನೀನು ಆಹಾರವನ್ನು ಸ್ವೀಕರಿಸುವ ವೇಳೆಯಲ್ಲಿ, ಮೊದಲು ಕೆಲವು ಕ್ಷಣವಾದರೂ ನೀನು ತಿನ್ನುತ್ತಿರುವ ಆಹಾರವು ನಿನ್ನ ದೇಹಕ್ಕೆ ಪೋಷಕಾಂಶಗಳನ್ನು ಒದಗಿಸಿಕೊಡುತ್ತಿರುವ ಬಗೆಗೆ ಹಾಗೂ ಈ ನಿನ್ನ ಪ್ರಯತ್ನಕ್ಕೆ ಸುಭಧ್ರವಾದ ಆಧಾರವನ್ನು ಒದಗಿಸುವ ಎಲ್ಲ ಅಂಶಗಳನ್ನು ಹೊಂದಿರುವ ಕುರಿತು, ಹಾಗೂ ನಿನ್ನ ಪ್ರಯತ್ನಕ್ಕೆ ಅವಶ್ಯವಿರುವ ಹಾಗು ಅದನ್ನು ಸಂರಕ್ಷಿಸಿಕೊಂಡು ಬರುತ್ತಿರುವ ಅಂಶಗಳನ್ನು ನಿನ್ನ ಆಹಾರವು ಹೊಂದಿರುವ ಬಗೆಗೆ, ಅದನ್ನು ಅರಿತುಕೊಳ್ಳುವ ಬಗೆಗೆ ನಿನ್ನ ಅಭೀಪ್ಸೆ ಇರಲಿ.

ನೀನು ನಿದ್ರೆಗೆ ಹೋಗುವ ಮುನ್ನ, ದೈನಂದಿನ ಕಾರ್ಯಗಳ ಒತ್ತಡದಲ್ಲಿ ದಣಿದ ನರಗಳಿಗೆಲ್ಲ ವಿಶ್ರಾಂತಿಯನ್ನು ಒದಗಿಸುವ ಈ ನಿದ್ರೆಯ ಕುರಿತು ಕೆಲವು ಕ್ಷಣಗಳನ್ನಾದರೂ ಅರಿಯುವ ಅಭೀಪ್ಸೆ ನಿನಗಿರಲಿ. ಆ ಮೂಲಕ ಶಾಂತ ಸ್ವಭಾವವನ್ನೂ ಮತ್ತು ಪ್ರಶಾಂತತೆಯನ್ನು ನಿನ್ನ ಮಸ್ತಿಷ್ಕವು (ಮೆದುಳು) ಪಡೆದುಕೊಳ್ಳುವಂತಾಗಲಿ. ನೀನು ಎಚ್ಚರಗೊಂಡಾಗ ಆ ಶಾಂತ ಸ್ವಭಾವವು ಇರುವಂತೆಯೇ ನಿನ್ನ ಅಭೀಪ್ಸೆ ಇರಬೇಕು. ಅದರಲ್ಲೂ ಪುನರ್–ನವೀಕರಣಗೊಂಡ ಈ ಪ್ರಫುಲ್ಲತೆಯು, ನಿನ್ನ ಪ್ರಯಾಣವನ್ನು ಸೂಕ್ತವಾದ ಪಥದಲ್ಲಿಯೇ

ಶೋಧನಾತ್ಮಕವಾಗಿಯೇ ಪ್ರಾರಂಭಗೊಂಡು ಪ್ರಗತಿ ಹೊಂದುವಂತೆಯೇ ನಿತ್ಯವೂ ಇರಲಿ ಎನ್ನುವ ಅಭೀಪ್ಸೆಯೇ ನಿನಗಿರಬೇಕು.

ನೀನು ನಿನ್ನ ಕಾರ್ಯಗಳನ್ನು ಪ್ರಾರಂಭಿಸುವ ಮುನ್ನ, ನಿನ್ನ ಪ್ರತಿಯೊಂದು ಕ್ರಿಯೆಯೂ ಸಹಿತ, ನಿನ್ನ ಆ ಮಹತ್–ಶೋಧನೆಯ ಎಡೆಗೇ ಸಾಗುತ್ತಿರುವ – ಮುಂದುವರೆಯುತ್ತಿರುವ – ಪ್ರಗತಿ ಹೊಂದುತ್ತಿರುವ – ನಿನ್ನ ನಡಿಗೆಗೆ ಆ ನಿನ್ ಕ್ರಿಯೆಗಳು ಸದಾ ಸಹಕಾರಿಯಾಗಿರುವಂತೆಯೇ ಅಭೀಪ್ಸೆಯನ್ನು ಹೊಂದು.

ನೀನು ಮಾತನಾಡುತ್ತಿರುವಾಗ, ನಿನ್ನಿಂದ ಶಬ್ದವು ಉಚ್ಚರಿಸಲ್ಪಡುವ ಮುನ್ನವೇ ಆ ಶಬ್ದಗಳ ದೀರ್ಘಾವಧಿಯ ಪರಿಣಾಮಗಳ ಬಗೆಗೆ ಸಂಪೂರ್ಣ ಲಕ್ಷ್ಯವಹಿಸು. ನಿನ್ನ ಶಬ್ದಗಳನ್ನು ನೀನೇ ಪರೀಕ್ಷಿಸಿಕೊ. ಯಾವುದು ಅತ್ಯಾವಶ್ಯವಾಗಿರುತ್ತದೆಯೊ ಅಷ್ಟನ್ನು ಮಾತ್ರ ಉಚ್ಚರಿಸು. ಒಟ್ಟಿನಲ್ಲಿ ನಿನ್ನ ಆ ಮಹತ್–ಶೋಧನೆಯ ಪಥವು ಯಾವುದೇ ರೀತಿಯಲ್ಲಿ ಘಾಸಿಗೊಳ್ಳದಂತೆ ಇರುವ ಶಬ್ದಗಳನ್ನೇ ಉಚ್ಚರಿಸು.

ಒಟ್ಟಿನಲ್ಲಿ ಇವೆಲ್ಲವನ್ನೂ ಸಮಗ್ರವಾಗಿ ಹೇಳಬಹುದಾದಲ್ಲಿ, ನೀನು ನಿನ್ನ ಜೀವನದ ಗುರಿ ಹಾಗೂ ಉದ್ದೇಶವನ್ನು ಎಂದಿಗೂ ಮರೆಯಬೇಡ. ಬಿಟ್ಟು ಬಿಡಬೇಸ. ಮಹತ್–ಶೋಧನೆಯ ಸಲುವಾಗಿ ಇರುವ ನಿನ್ನ ಆ ಗುರಿಯ ಕುರಿತ ನಿನ್ನ ಇಚ್ಛೆ ಸದಾ ನಿನ್ನ ಮುಂದೆಯೇ ಇರಬೇಕು. ನಿನ್ನ ಊರ್ಧ್ವದ ಪಥದಲ್ಲಿರಲಿ, ನೀನು ಏನು ಇರುವೆಯೋ ಅಥವಾ ಏನನ್ನು ಮಾಡುತ್ತಿರುವವೆಯೋ ಅದೆಲ್ಲವುಗಳಿಗಿಂತ ಔನ್ನತ್ಯದಲ್ಲಿರಲಿ. ಆ ಊರ್ಧ್ವಾತಿ ಊರ್ಧ್ವದಲ್ಲಿ ಸದಾ ಪ್ರಕಾಶಿಸುತ್ತಿರುವ ಆ ಬೃಹತ್–ಪಕ್ಷಿಯ ಹಾಗೆ, ಸರ್ವವನ್ನೂ ನಿಯಂತ್ರಿಸುತ್ತಿರುವ ಹಾಗೂ ನಿನ್ನ ಜೀವ(ನ)ದ ಸರ್ವ ಸಂಗತಿಗಳ ಸಂಚಲನವನ್ನು ನಿಯಂತ್ರಿಸುತ್ತಿರುವ ಆ ಪರಮೋಚ್ಚ ಊರ್ಧ್ವದ ಗಮ್ಯದ ಕಡೆಗೇ ಇರಲಿ.

ಅವಿರತವಾದ ನಿರಂತರತೆಯಿ ನಿನ್ನ ಈ ಸರ್ವ ಪ್ರಯತ್ನದಿಂದಾಗಿ, ಅಲ್ಲಿ, ಆಂತರ್ಯದಲ್ಲಿ ದ್ವಾರವೊಂದು ತಂತಾನೇ ತತ್–ಕ್ಷಣಕ್ಕೇ ತೆರೆದುಕೊಳ್ಳುತ್ತದೆ. ಅಲ್ಲಿ ನೀನು ಇದ್ದಕ್ಕಿದ್ದಂತೆಯೇ ದೀಪ್ತಿಮಯವಾದ ಆ ಭೂಮಭವ್ಯತೆಯಲ್ಲಿ ಸಂಲಗ್ನಗೊಳ್ಳುತ್ತೀಯಾ. ಅದು ನಿನ್ನಲ್ಲಿ ಖಚಿತವಾಗಿಯೂ ಅಮೃತತ್ವವನ್ನು ರೂಪಿಸುತ್ತದೆ. ನೀನು ಸದಾ ಆನಂದಮಯ ಸ್ಥಿತಿಯಲ್ಲಿಯೇ ಇರುವಂತಹ ಭದ್ರವಾದ ಆಧಾರವನ್ನೂ ಒದಗಿಸುತ್ತದೆ. ನೀನು ಸದಾ ಅಲ್ಲಿಯೇ ಮುಂದೆಯೂ ಸಹಿತ ಅಲ್ಲಿ ವಾಸಿಸುವಂತೆಯೇ ರೂಪಿಗೊಂಡಿರುತ್ತದೆ. ಅಲ್ಲಿ ಕರಗಿ

ಹೋಗಿರುವದು ಕೇವಲ ಬಾಹ್ಯದಲ್ಲಿದ್ದ ರೂಪುಗಳು ಮಾತ್ರ. ಅಂದರೆ ನೀನು ನಿಜವಾಗಿಯೂ ಏನಾಗಿರುವೆಯೋ ಅದಕ್ಕೆ ಸಂಬಂಧಪಟ್ಟವುಗಳಾಗಿದ್ದ ರೂಪಗಳು ಅವು. ಅವುಗಳಿರುವದೂ ನಾವು ಧರಿಸುತ್ತಿರುವ ವಸ್ತ್ರಗಳಂತೆ. ಅವು ಹರಿದು ಹೋದ ನಂತರದಲ್ಲಿ ಅವುಗಳನ್ನು ಬಿಸುಟು ಬಿಡಲಾಗುತ್ತದೆ ತಾನೆ?

ಈ ಹಂತದಲ್ಲಿ ನೀನು ದೃಢಚಿತ್ತನಾಗಿರುತ್ತೀಯಾ. ಎಲ್ಲ ಬಂಧನಗಳಿಂದಲೂ ಮುಕ್ತನಾಗಿರುತ್ತೀಯಾ. ಪ್ರಕೃತಿಯು ವಿಧಿಸಿ ನಿನ್ನ ಮೇಲೇ ಹೇರಲ್ಪಟ್ಟಿರುವ ಎಲ್ಲ ಸಂದರ್ಭಗಳ/ವಾತಾವರಣಗಳ ಭಾರವನ್ನೂ ಹೊತ್ತು ಶ್ರಮಾಧಿಕ್ಯದಿಂದ ಪ್ರಗತಿ ಹೊಂದುವದಕ್ಕಿಂತ, ಮತ್ತೆ ಇವುಗಳ ಮಧ್ಯದಲ್ಲಿಯೇ ಸಿಲುಕಿ ಜರ್ಝರಿತ–ನಾಗಬಾರದೆಂದಿದ್ದರೆ, ನೀನು ಇವೆಲ್ಲವನ್ನೂ ಸಹಿಸಿಕೊಳ್ಳುವ ಸಾಮರ್ಥ್ಯವನ್ನು ಹೊಂದಬೇಕು. ಅವುಗಳನ್ನು ಸಮರ್ಥವಾಗಿಯೇ ನಿಭಾಯಿಸಬೇಕು. ಆಗ ಮಾತ್ರವೇ ನೀನು ಸಮರ್ಥನಾಗಿ ಮುನ್ನಡೆಯಲು ಸಾಧ್ಯವಾಗುತ್ತದೆ. ಅದೂ ನೇರಾನೇರವಾದ ಪಥದಲ್ಲಿ. ಹೀಗಾಗಿ ಸುನಿಶ್ಚಿತವಾದ, ಪ್ರಜ್ಞಾಪೂರ್ವಕವಾಗಿ ನಿನ್ನ ಗುರಿಯ ಬಗೆಗೆ ಸಂಪೂರ್ಣವಾಗಿರುವ ಅರಿವನ್ನೂ ಹೊಂದಿದ್ದಲ್ಲಿ, ಅದೇ ನಿನ್ನ ಗಮ್ಯವೂ ಆಗಿರುತ್ತದೆ. ಅದೇ ನಿನ್ನ ಗುರುವೂ ಹೌದು. ಅದೇ ನಿನ್ನ ಪ್ರಭುವೂ ಹೌದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/33–35**

## ಧ್ಯಾನಕ್ಕಾಗಿ ಒಂದು ಮೂರ್ತಿ (ರೂಪ)

ಮುಚ್ಚಿರುವ ಬಾಗಿಲನ ಕೋಣೆಯಲ್ಲಿ ಕುಳಿತುಕೊಂಡು, ಅದೂ ಅತ್ಯಂತ ಭಾರವಾದ, ಬೃಹತ್ತಾದ ಕಂಚಿನ ಬಾಗಿಲಾಗಿದ್ದು – ಅದರ ಕಡೆಗೇ ಮುಖ ಮಾಡಿಕೊಂಡು ಕುಳಿತು, ಒಂದಲ್ಲ ಒಂದು ದಿನ ಈ ಬಾಗಿಲು ತೆರಯುತ್ತದೆ, ಆಗ ಆ ದ್ವಾರದ ಮೂಲಕ ಹೋಗಲು ಅನುಕೂಲವಾಗುತ್ತದೆ ಎಂದು ಧ್ಯಾನಿಸುತ್ತಲೇ ಇದ್ದರೆ, ಆ ಧ್ಯಾನದ ತೀವ್ರತೆಯೂ ಸಹಿತ ಸಂಪೂರ್ಣವಾಗಿ ಏಕಾಗ್ರತೆಯಲ್ಲಿ ಇದ್ದುಕೊಂಡೇ ಮುಂದುವರೆಸಿದ್ದಲ್ಲಿ, ಅದು ಸಂಪೂರ್ಣವಾದ ಅಭೀಪ್ಸೆಯೇ ಆಗಿದ್ದಲ್ಲಿ, ಆಗ ಖಂಡಿತವಾಗಿಯೂ ಆ ಎಲ್ಲ ಏಕಾಗ್ರತೆಯೂ ಕೇಂದ್ರೀಕೃತಗೊಂಡು, ಒಂದು ಬೆಳಕಿನ ಶಲಾಖೆಯಂತಾಗಿ, ದ್ವಾರವನ್ನು ತೆರೆಯುತ್ತದೆ. ಅಷ್ಟೊಂದು ಬಲವತ್ತರವಾದ ಬಾಗಿಲನ್ನೂ ಸಹಿತ ತೆರೆದುಕೊಳ್ಳುವಂತೆಯೇ ಸಮರ್ಥಶಾಲಿ–ಯಾಗಿಯೇ ದ್ವಾರವನ್ನು ತೆರೆಯುವಂತೆ ತಳ್ಳುತ್ತದೆ. ಆ ಸಾಮರ್ಥ್ಯವೂ ಸಹಿತ

ಹೆಚ್ಚುತ್ತ ಹೆಚ್ಚುತ್ತಲೇ ಇರುತ್ತದೆ. ಒಂದು ನಿಗದಿತವಾದ ಕ್ಷಣದಲ್ಲಿ, ಆ ಅಭೀಪ್ಸೆಯ ಎಲ್ಲ ಬಲವೂ ಸೇರಿ ಅಲ್ಲಿ ಬಾಗಿಲು ತೆರೆಯಲ್ಪಡುತ್ತದೆ. ಇದೊಂದು ಮಹಾನ್ ಶಕ್ತಿದಾಯಕವಾದ ಪ್ರಭಾವವನ್ನೇ ತರುತ್ತದೆ. ಆಗ ಅಲ್ಲಿ ಎಲ್ಲವೂ, ಪ್ರತಿಯೊಬ್ಬನೂ ಸಹಿತ ಅಲ್ಲಿರುವ ಪ್ರಕಾಶದಲ್ಲಿ ಧುಮುಕಿರುತ್ತಾನೆ. ಅದೂ ಅಲ್ಲದೇ ಅಲ್ಲಿಯೇ ಅವನು ಆಮೂಲಾಗ್ರವಾಗಿ ಪರಿವರ್ತನೆಗೊಂಡ ಚೈತನ್ಯದ ಆ ಆನಂದವನ್ನು ಆ ಕ್ಷಣದಲ್ಲಿಯೇ ಪಡೆದುಕೊಳ್ಳುತ್ತಾನೆ. ಈ ಪ್ರದೀಪ್ತತೆಯು ಸಂಪೂರ್ಣವಾಗಿಯೇ ಆವರಿಸಿಕೊಂಡಿರುತ್ತದೆ. ಮತ್ತೆ ಈ ಎಲ್ಲ ಸಂಗತಿಗಳೂ, ಅವನು ಮತ್ತೊಂದು ವ್ಯಕ್ತಿತ್ವವನ್ನು ಹೊಂದಿದವನಂತೆ ಅನುಭಾವವನ್ನು ರೂಪಿಸುತ್ತವೆ. ಓರ್ವ ವ್ಯಕ್ತಿಯ ಚೈತ್ಯಾತ್ಮ(ಚೈತ್ಯ ಪುರುಷ)ನ ಸಂಪರ್ಕ ಸಾಧಿಸಲು ಇದು ಒಂದೇ ಅತ್ಯಂತ ಸುಭದ್ರವಾದ ಹಾಗೂ ಶಕ್ತಿಶಾಲಿಯಾದ ಪಥವಾಗಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/268**

### ಚೈತ್ಯದ ನಿಯತಿ (ಸಾಧನ)

ಇಲ್ಲಿ ಪ್ರಪ್ರಥಮವಾಗಿ ಈ 'ಚೈತ್ಯದ ನಿಯತಿ ಅಥವಾ ಸಾಧನ' ಎಂದರೆ ಏನು ಎನ್ನುವದನ್ನು ನಿರ್ಧರಿಸಬೇಕಿದೆ. ನಮ್ಮ ಅಸ್ತಿತ್ವದ ಮನೋವೈಜ್ಞಾನಿಕ ತಾಣಕ್ಕೆ (ಕೇಂದ್ರಕ್ಕೆ) ನಾವು 'ಚೈತ್ಯ' ಎಂದು ನಾಮಕರಣಗೊಳಿಸಿಕೊಂಡಿದ್ದೇವೆ. ನಮ್ಮ ಅಸ್ತಿತ್ವದ ಆ ಪರಮ ಸತ್ಯದ ಅಗ್ರಪೀಠದಲ್ಲಿ ಇದು ನಮ್ಮ ಅಂತರಂಗದಲ್ಲಿಯೇ ಇರುತ್ತದೆ. ಅದು ಈ ಸತ್ಯವನ್ನು (ವಾಸ್ತವ ಸತ್ಯವನ್ನು) ಅರಿತುಕೊಂಡು, ಅದಕ್ಕೊಂದು ಸಂಚಲನವನ್ನೂ ರೂಪಿಸುತ್ತದೆ. ಹೀಗಾಗಿ, ಈ ವಿಷಯದ ಕುರಿತಾಗಿ ಸಂಪೂರ್ಣ ಪ್ರಜ್ಞೆಯನ್ನು ಪಡೆದುಕೊಳ್ಳುವದು ಪರಮಾತಿಪರಮ ಮಹತ್ವದ ವಿಷಯವಾಗಿದೆ. ಅದರಲ್ಲೂ, ಅದರ ವಾಸ್ತವದಲ್ಲಿ (ವರ್ತಮಾನದಲ್ಲಿ) ಅದು ನಮ್ಮಲ್ಲಿಯೇ ಇರುವದರ ಬಗೆಗೆ, ಮತ್ತು ಅದರ ಈ ಹಾಜರಾತಿಯ ಬಗೆಗೆ ಅಥವಾ ಸದಾ ಜೀವಂತಿಕೆಯಿಂದಲೇ, ನಮ್ಮ ಅಂತರ್ಗತವಾಗಿರುವಂತೆಯೇ ಇದ್ದು, ನಮ್ಮನ್ನು ನಾವೇ ಅದರೊಡನೆ ಗುರುತಿಸಿಕೊಳ್ಳುವಂತೆ ಪ್ರಜ್ಞೆಯನ್ನು ಹೊಂದಬೇಕಾಗಿದೆ.

ಈ ವಿಷಯವಾಗಿ, ಹಲವಾರು ಸ್ಥಳಗಳಲ್ಲಿ, ಹಲವಾರು ವಿಧಗಳಲ್ಲಿ ಮತ್ತೆ ಹಲವಾರು ವಿಧಾನಗಳಲ್ಲಿಯೂ ಇದನ್ನು ಲಭ್ಯಗೊಳಿಸಿಕೊಳ್ಳಲು, ಜೊತೆಗೆ ಅಂತಿಮವಾಗಿ ಅದರ ಅಸ್ಮಿತೆಯನ್ನು ಸಾಧಿಸಿಕೊಳ್ಳಲು ಸಹಿತ ಪರಿಕಲ್ಪನೆಗಳನ್ನು

ರೂಪಿಸಲಾಗಿದೆ. ಅವುಗಳಲ್ಲಿ ಕೆಲವು ಮನೋವೈಜ್ಞಾನಿಕ ನೆಲೆಯಲ್ಲಿವೆ; ಕೆಲವೊಂದು ಆಧ್ಯಾತ್ಮಿಕ ನೆಲೆಯಲ್ಲಿವೆ; ಮತ್ತೆ ಕೆಲವು ಯಾಂತ್ರಿಕ ನೆಲೆಯಲ್ಲಿ ಇವೆ. ಆದರೆ ವಾಸ್ತವದಲ್ಲಿ, ಪ್ರತಿಯೊಬ್ಬನೂ ತನಗೆ ಯಾವುದು ಸೂಕ್ತವೆಂದುಕೊಳ್ಳುತ್ತಾನೆಯೋ ಅದೇ ಶ್ರೇಷ್ಠವೆಂದುಕೊಳ್ಳುತ್ತಾನೆ. ಒಂದು ವೇಳೆ ಓರ್ವನು ಉತ್ಕಟವಾದ ಹಾಗೂ ಅಚಲವಾದ ಅಭೀಪ್ಸೆಯನ್ನು ಹೊಂದಿದ್ದಲ್ಲಿ, ನಿರಂತರವಾದ ಹಾಗೂ ಊರ್ಜಸ್ವಿಯಾದ ಇಚ್ಛೆಯನ್ನು ಹೊಂದಿದ್ದಲ್ಲಿ, ಅದನ್ನು ದರ್ಶಿಸಿಯೇ ದರ್ಶಿಸುತ್ತೇನೆ ಎನ್ನುವ ವಿಷಯದಲ್ಲಿ ಖಚಿತತೆಯನ್ನೂ ಹೊಂದಿದ್ದಲ್ಲಿ, ಆಗ ಯಾವುದೋ ಒಂದು ರೀತಿಯಲ್ಲಿ – ಬಾಹ್ಯದಲ್ಲಿ ಓದಿನ ಮೂಲಕ ಹಾಗೂ ಅಧ್ಯಯನದ ಮೂಲಕ, ಅಂತರಂಗದಲ್ಲಿ ಏಕಾಗ್ರತೆಯನ್ನು ಅಧಿಕಗೊಳಿಸಿಕೊಳ್ಳುವ ಮೂಲಕ, ಧ್ಯಾನದ ಮೂಲಕ, ಅಂತರ್ಜಾನದ ಮೂಲಕ ಮತ್ತು ಅನುಭವದ ಮೂಲಕ – ಒಟ್ಟಿನಲ್ಲಿ, ಆ ಗುರಿಯನ್ನು ತಲುಪಲು ಇರುವ ಅವನ ಅವಶ್ಯಕತೆಗಳಿಗೆ ಸಹಾಯವಾಗುತ್ತದೆ.

ಶೋಧನೆಗೆ ಬೇಕಾದ ಮತ್ತು ಸಾಕ್ಷಾತ್ಕಾರಕ್ಕಾಗಿ ಇರುವ ಬಲವತ್ತರವಾದ ಇಚ್ಛೆಯೇ ಇಲ್ಲಿ ಅತ್ಯಾವಶ್ಯವಾಗಿಯೂ, ಅನಿವಾರ್ಯವಾಗಿರುವ ವಿಷಯವಾಗಿದೆ. ಈ ಶೋಧನೆ ಮತ್ತು ಸಾಕ್ಷಾತ್ಕಾರಗಳು ನಮ್ಮ ಜೀವದ (ಪ್ರಾಣದ) ಪ್ರಾಥಮಿಕ ಚಿತ್ತೈಕಾಗ್ರತೆಯಾಗಿದ್ದು, ಅತ್ಯಂತ ಮೌಲ್ಯವನ್ನು ಹೊಂದಿದ ಆಭರಣವಾಗಿದೆ. ಅದನ್ನು ಎಷ್ಟೇ ಪರಿಶ್ರಮದಿಂದಲಾದರೂ ಸರಿಯೇ, ಪಡೆದುಕೊಳ್ಳಲೇಬೇಕಾಗಿದೆ. ನೀವು ಏನನ್ನೇ ಮಾಡಿ, ನಿಮ್ಮ ವೃತ್ತಿ ಏನೇ ಆಗಿರಲಿ, ನಿಮ್ಮ ಚಟುವಟಿಕೆಗಳು ಸಹಿತ ಯಾವುದೇ ರೀತಿಯಲ್ಲಿ ಇದ್ದರೂ ಸಹಿತ, ಆ ಸತ್ಯವನ್ನು ಕಾಣುವ ನಿಮ್ಮ ಪ್ರಾಣದ/ ಜೀವದ ಇಚ್ಛೆಯು ಮತ್ತು ಅದರೊಡನೆ ಸಂಯೋಗಗೊಳ್ಳುವ ಹಾಗೂ ಅದರ ಜೊತೆಗೇ ವಾಸಿಸುವ ಮತ್ತು ನಿಮ್ಮ ಸರ್ವ ಕಾರ್ಯಗಳ ಹಿಂದೆ ಇದೆ ಸೂತ್ರವೇ ಇರುತ್ತದೆ. ಈ ಸರ್ವವನ್ನೂ ಅನುಭಾವಿಸಿ. ಅ ಸರ್ವವನ್ನೂ ಕುರಿತೇ ನಿಮ್ಮ ಚಿಂತನ ಇರಲಿ.

ಈ ಆಂತರಿಕ ಶೋಧನೆಗೆ ಅಭಿನಂದನೆಯ ಸ್ವರೂಪದಲ್ಲಿ – ಅದೂ ಕಡ್ಡಾಯವಾಗಿ – ಅದು ಯಾವ ಕಾರಣಕ್ಕೂ ಮನೋವಿಕಾಸವನ್ನು ಯಾವುದೇ ಕಾರಣಕ್ಕೂ ತಿರಸ್ಕರಿಸುವಂತೆ ಇರಬಾರದು. ಬೌದ್ಧಿಕ (ಮಾನಸಿಕ) ಉಪಕರಣಕ್ಕೆ ಅದು ಸಮಸಮನಾಗಿಯೇ ಅದು ಸಹಸ್ಪಂದಿಯಾಗಿರುತ್ತದೆ, ಇಲ್ಲವೇ ಒಮ್ಮೊಮ್ಮೆ

ಬಹು ದೊಡ್ಡ ಅಡೆ–ತಡೆಯ ಹಾಗೆಯೂ ಇರಬಹುದು, ಅಂತಹ ಸಂದರ್ಭಗಳೂ ಇರುತ್ತವೆ. ದೈನಂದಿನ ಸ್ವಭಾವದಲ್ಲಿ ಮಾನವನ ಮನಸ್ಸು ಯಾವಾಗಲೂ ತನ್ನ ದೃಷ್ಟಿ ವಿಶೇಷದಲ್ಲಿ ಸೀಮಿತವಾಗಿಯೇ ಇರುತ್ತದೆ. ಅರ್ಥೈಸಿಕೊಳ್ಳುವಲ್ಲಿಯೂ ಸಹಿತ ಅತ್ಯಂತ ಸಂಕುಚಿತವಾಗಿಯೇ ಮತ್ತು ಅವಧಾರಣೆಯಲ್ಲಂತೂ ಸಂಕೀರ್ಣ–ಮಯವಾಗಿಯೇ ಇರುತ್ತದೆ. ಹೀಗಾಗಿ ನಿರಂತರವಾದ ಪ್ರಯತ್ನವು ಇಲ್ಲಿ ಅತ್ಯಾವಶ್ಯವಾಗಿರುತ್ತದೆ. ಅಂದರೆ ಮಾತ್ರ, ಇದನ್ನು ವ್ಯಾಪ್ತಗೊಳಿಸಲು ಸಾಧ್ಯವಾಗುತ್ತದೆ. ಮತ್ತೂ ಮತ್ತೂ ಕೋಮಲಗೊಳ್ಳಲು ಹಾಗೆಯೇ ಗಂಭೀರವಾಗಿ ಇರಲೂ ಇದು ಅವಶ್ಯವಾಗಿರುತ್ತದೆ.

ಹೀಗಾಗಿಯೇ ಸಾಧ್ಯವಿರುವ ಎಲ್ಲ ವಿಧದಿಂದಲೂ, ಪ್ರತಿಯೊಂದನ್ನೂ ಪರಿಗಣಿಸುವದು ಇಲ್ಲಿ ಅವಶ್ಯಕವಾಗಿದೆ. ಈ ಹಂತದ ಬಗೆಗೆ – ಅಂದರೆ – ಈ ಗುರಿಯವರೆಗೆ, ಹೆಚ್ಚು ಹೆಚ್ಚು ಮಹತ್–ಸುನಮ್ಯತೆಗೊಳ್ಳಲು ಮತ್ತು ಉನ್ನಯನಗೊಂಡ ಚಿಂತನಗಳಿಗೆ ಇದು ಒಂದು ಅನುಷ್ಠಾನಗೊಳಿಸಿಕೊಳ್ಳಬೇಕಾದ ಅಭ್ಯಾಸವಾಗಿರುತ್ತದೆ. ಅದೇ ರೀತಿಯನ್ನೇ ಅನುಸರಿಸುತ್ತದೆ. ಅತ್ಯಂತ ಸುಸ್ಪಷ್ಟವಾಗಿ ರೂಪಿಸಲ್ಪಟ್ಟಿರುವ, ಪರಿಶೋಧಿಸಲ್ಪಟ್ಟಿರುವ ಪ್ರಬಂಧವೇ ಈ ಜೋಡಣೆಯಾಗಿರುತ್ತದೆ. ಇದು ಇದರ ವಿರೋಧಾಭಾಸದ ಪ್ರತಿಕ್ರಿಯೆಗಳನ್ನು ವಿರೋಧಿಸುತ್ತದೆ. ಅವು ಇದೇ ರೀತಿಯ ನಿಖರತೆಯಿಂದ ನಿರೂಪಿಸಲ್ಪಟ್ಟಿದ್ದರೂ ಸಹಿತ ಇದು ವಿರೋಧಿಸುತ್ತದೆ.

ಆವಾಗ ಅತ್ಯಂತ ಕಾಳಜಿಪೂರ್ವಕವಾಗಿಯೇ ಪ್ರತಿಧ್ವನಿತಗೊಳಿಸಲ್ಪಟ್ಟ ಮತ್ತು ಕಡ್ಡಾಯವಾಗಿ ವಿಸ್ತರಿಸಲ್ಪಟ್ಟ ಅಥವಾ ಒಂದು ಸಂಶ್ಲೇಷಣೆಯು ಲಭ್ಯವಾಗುವವರೆಗೂ ಭಾವಾಭೂತಗೊಳಿಸಬೇಕಾಗುತ್ತದೆ. ಈ ಕ್ರಿಯೆಯು ಎರಡೂ ವಿರೋಧಾ–ಭಾಸಗಳನ್ನೂ ವ್ಯಾಪ್ತವಾಗಿಯೇ ಸಂಯೋಜಿಸುತ್ತದೆ. ಔನ್ನತ್ಯದ ಹಾಗೂ ಹೆಚ್ಚು ಹೆಚ್ಚು ಸಮಗ್ರತೆ ಹೊಂದಿರುವ ವಿಚಾರವೂ ಇದಾಗಿರುತ್ತದೆ. ಆದರ್ಶದ ಚಿಂತನವೂ ಆಗಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/4–5**

## ಚೈತ್ಯಾತ್ಮ ಜ್ಯೋತಿಯ ಪ್ರಜ್ವಲನ

*ಓ ತಾಯಿ, ಶ್ರೀ ಅರವಿಂದರು ಹೇಳುತ್ತಿರುವದೇನೆಂದರೆ, "ಒಂದು ಚೈತ್ಯಾತ್ಮದ ಜ್ಯೋತಿಯು ಅದು ಅಂತರಂಗದಲ್ಲಿಯೇ ಬೆಳಗುತ್ತಿದ್ದು, ಅದರೊಳಗೇನೆ*

*ಅದು ಒಂದು ದೈವೀ ನಾಮವನ್ನು ಧರಿಸಿಕೊಂಡೇ – ಎಲ್ಲವನ್ನೂ – ರೂಪಿಸಿಕೊಂಡಿರುತ್ತದೆ."*

**ಶ್ರೀ ಅರವಿಂದರ 'ಯೋಗ ಸಮನ್ವಯ' (ಎಸ್‌ಎಬಿಸಿಎಲ್ 20/155)**

– ಯಾವಾಗಲೂ ಬೆಳಗುತ್ತಲೇ ಇರುವದೇ ಚೈತ್ಯಾತ್ಮ ಜ್ಯೋತಿಯಲ್ಲವೇ? ಹಾಗಿದ್ದ ಮೇಲೆ ಅದನ್ನು ಬೆಳಗುವಂತೆ ಮಾಡುವದು ಅಂದರೆ ಹೇಗೆ?

– ಅದು ಅಭೀಪ್ಸೆಯಿಂದ ಮಾತ್ರ ಸಾಧ್ಯವಾಗುತ್ತದೆ.

ಪ್ರಗತಿ ಹಾಗೂ ಇಚ್ಛೆಯನ್ನು ರೂಪಿಸಿಕೊಳ್ಳುವದರ ಮೂಲಕ, ಪರಿಪೂರ್ಣತೆಯ ಕಡೆಗೆ ಸಾಗುವ ತುಡಿತವನ್ನು ಹೊಂದಬೇಕು. ಎಲ್ಲಕ್ಕಿಂತಲೂ ಮುಖ್ಯವಾಗಿ, ಇದು ಪ್ರಗತಿ ಹೊಂದುತ್ತಲೇ ಇರುವ ಇಚ್ಛೆಯಾಗಿದ್ದು, ಜೊತೆಗೆ ಸ್ವಯಂ ಪರಿಶುದ್ಧಗೊಳ್ಳುವ ಮತ್ತು ಅದರ ಮೂಲಕವೇ ಬೆಳಗುವ ಅಗ್ನಿ ಇದಾಗಿರುತ್ತದೆ. ಯಾವಾಗಲೂ ಪ್ರಗತಿಯ ಕುರಿತೇ ಇಚ್ಛೆ ಇರಬೇಕು. ಯಾರು ಇಂತಹ ಬಲವತ್ತರವಾದ ಇಚ್ಛೆಯನ್ನು ಹೊಂದಿದ್ದಾರೋ, ಅವರು ಯಾವಾಗ ಆಧ್ಯಾತ್ಮಿಕ ಪ್ರಗತಿಯತ್ತ ಸಾಗುತ್ತಾರೆಯೋ, ಆಗ ಅವರು ತಮ್ಮಂತರಂಗದಲ್ಲಿಯೇ ನೇರವಾಗಿ ತಾನೇ ತಾನಾಗಿಯೇ ಬೆಳಗುವ ಈ ಜ್ಯೋತಿಯನ್ನು ರೂಪಿಸಿಕೊಳ್ಳುತ್ತಾರೆ.

ಇಲ್ಲಿರುವ ಪ್ರತಿಯೊಂದು ದೋಷವನ್ನೂ ಪರಿಹರಿಸಿಕೊಳ್ಳಬೇಕೆಂದು ಪ್ರತಿಯೊಬ್ಬನೂ ಬಯಸುತ್ತಾನೆ, ಇಲ್ಲವೇ ಪ್ರತಿಯೊಂದು ಪ್ರಗತಿಯನ್ನೂ ಕೈಕೊಳ್ಳಲು ಬಯಸಿದಲ್ಲಿ – ಇವೆಲ್ಲವನ್ನೂ ಆಗ ಆ 'ಅಗ್ನಿಯಲ್ಲಿ ಪಾಕ'ಗೊಳಿಸಿದರೆ, ಅಲ್ಲಿ ಅದಕ್ಕೊಂದು ಹೊಸ ರೂಪು ಬರುತ್ತದೆ. ಅದೂ ತೀವ್ರ ತುಡಿತದೊಂದಿಗೇ ಜ್ವಲಿಸುತ್ತದೆ. ಇದೊಂದು ಕೇವಲ ಚಿತ್ರ/ಕೃತಿಯಾಗಲೀ ಆಗಿರುವದಿಲ್ಲ. ಆದರೆ ಇದೊಂದು ಸೂಕ್ಷ್ಮ ಭೌತಿಕದ ವಿಷಯವಾಗಿರುತ್ತದೆ. ಆ ಜ್ವಾಲೆಯ ಉತ್ತಾಪದ ಅನುಭವವನ್ನು ಒಬ್ಬರು ಪಡೆದುಕೊಂಡರೆ, ಮತ್ತೊಬ್ಬರು ಆ ಸೂಕ್ಷ್ಮ ಜ್ವಾಲೆಯ ಮುಖಾಂತರ ಪ್ರಕಾಶವನ್ನು ಪಡೆದುಕೊಳ್ಳುತ್ತಾನೆ. ಯಾವಾಗ ಈ ದಿಸೆಯಲ್ಲಿ ಮುಂದುವರೆಯುವದನ್ನು ಕೆಲವು ವಿಷಯಗಳು ಸ್ವಭಾವತಃ ಇರುವವೋ, ಮತ್ತು ಅಗ್ನಿಯಲ್ಲಿ ಎಸೆಯಲ್ಪಡುತ್ತಾರೆಯೋ, ಆಗ ಅದು ಪ್ರಜ್ವಲಿಸಲು ಪ್ರಾರಂಭಿಸಿ, ಮತ್ತೆ ಮತ್ತೆ ಆ ಜ್ವಾಲೆಗಳು ಮತ್ತೂ ಮತ್ತೂ ಪ್ರಚಂಡತೆಯಲ್ಲಿ ಬೆಳಗುತ್ತವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/251**

ಇಲ್ಲಿ ಈ ಚೈತ್ಯದ ನಿಯತಿಯ ಮೂಲಕ ಆ ದೈವೀ ಕೃತುವು (ಸಂಕಲ್ಪವು) ಆವತರಣಗೊಳ್ಳಲು ಪ್ರಾದುರ್ಭವಗೊಳ್ಳುತ್ತದೆ. ಅದಕ್ಕೆ ತರ್ಕಯುಕ್ತತ್ವದ ಪ್ರಧಾನತೆಯ ಅಧಿಪತ್ಯವು ಅಂತಿಮ ಹಂತಕ್ಕೆ ಬರಬೇಕಾಗಿದೆ. ಬರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/103**

## ಅಭೀಪ್ಸೆ ಮತ್ತು ಚೈತ್ಯ ಪುರುಷ

ಅಭೀಪ್ಸೆ ಎನ್ನುವದು ಬಹುತೇಕವಾಗಿ ಯಾವಾಗಲೂ ಈ ಚೈತ್ಯಾತ್ಮನ ಅಭಿವ್ಯಕ್ತಿಯೇ ಆಗಿರುತ್ತದೆ. ಅದರ ಅಂಶಿಕವಾಗಿಯೇ ಅದು ಆ ದೈವೀ ನೆಲೆಯ ಕೇಂದ್ರದ ಸುತ್ತಲೇ ಸಂಘಟಿತಗೊಂಡಿರುತ್ತದೆ. ಅದೂ ಸಹಿತ ಮಾನವನಲ್ಲಿಯೇ (ಮನುಜ ಕುಲದಲ್ಲಿಯೇ) ಅಂತರಂಗದಲ್ಲಿರುವ ಅತ್ಯಂತ ಸೂಕ್ಷ್ಮವಾಗಿರುವ ದೈವೀ ಜ್ಯೋತಿಯಾಗಿರುತ್ತದೆ.

ನೀನು ಮೊದಲು ಇದನ್ನು ಗಮನಿಸು. ಈ ದೈವೀ–ಜ್ಯೋತಿಯು ಪ್ರತಿಯೊಬ್ಬನ ಅಂತರಂಗದಲ್ಲಿಯೂ ಅಸ್ತಿತ್ವದಲ್ಲಿದೆ. ಸ್ವಲ್ಪ–ಸ್ವಲ್ಪವಾಗಿಯೇ ಅಥವಾ ಸೂಕ್ಷ್ಮವಾಗಿಯೇ ಎಲ್ಲ ಅವತಾರಗಳ ಮೂಲಕ ಹಾಗೂ ಆಯಾ ಅವಧಿಯ ಕರ್ಮದ ಮೂಲಕ, ಪ್ರಾಣವು ಅದರ ಸುತ್ತಲೂ ಒಂದು ಆಕಾರವನ್ನು ಪಡೆದುಕೊಂಡು ರೂಪಿಸಿಕೊಳ್ಳುತ್ತಲೇ ಇರುತ್ತದೆ. ಅದನ್ನೇ ಥಿಯೋನಿಷ್ಟರು "ಚೈತ್ಯ ಪುರುಷ(ಚೈತ್ಯಾತ್ಮ)"ವೆಂದು ಕರೆದಿರುವರು. [ಥಿಯೋನ್ ಎನ್ನುವದು ಗ್ರೀಕ್ ಶಬ್ದವಾಗಿದೆ. ಅದನ್ನು (ದೀ ಆನ್) ಎಂದೂ ಕರೆಯಲಾಗುತ್ತಿದೆ. ಇದರ ಅರ್ಥ ದೈವತ್ವದ ಎಂದೇ ಇದೆ. ಫ್ರೆಂಚ್ ಭಾಷೆಯಲ್ಲಿಯೂ ಸಹಿತ ಈ ಶಬ್ದವಿದ್ದು ಅದರ ಅರ್ಥವೂ "ಅದಮ್ಯ" ಎಂದಿದೆ.]

ಯಾವಾಗ ಈ ಚೈತ್ಯ ಪುರುಷನು ಪರಿಪೂರ್ಣ ಪ್ರಗತಿಯನ್ನು ತಲುಪುತ್ತಾನೆಯೋ, ಆಗ ಅದು ದೇಹದ ಸ್ವರೂಪದಲ್ಲಿಯೇ ಪ್ರಕಟಗೊಳ್ಳುತ್ತದೆ. ಅಥವಾ ಯಾವುದೇ ಆತ್ಮದ ಯಾವುದೇ ಸ್ವರೂಪದ ಕವಚವಾಗಿಯೇ ಅವತರಿಸುತ್ತದೆ. ಆ ಪರಾತ್ಪರದ–ತುರೀಯದ ಅಂಶವೇ ಈ ಆತ್ಮವಾಗಿದೆ. – 'ಜೀವ' ಎನ್ನುವದು ವೈಯಕ್ತಿಕ ರೂಪದಲ್ಲಿ ಪರಮೋಚ್ಚವಾದುದು. ಅದರಲ್ಲೂ ಒಬ್ಬನೇ ಒಬ್ಬ ಪರಮಾತಿ ಪರಮದೇವನು ಇರುವುದರಿಂದಾಗಿ, ಅಲ್ಲಿ ಒಂದೇ "ಜೀವವು" ಇರುವದರಿಂದಾಗಿದ್ದರೂ, ಅದು ಲಕ್ಷಾಂತರ ಸೂಕ್ಷ್ಮಾತಿ ಸೂಕ್ಷ್ಮ ರೂಪಗಳಲ್ಲಿ ಅವತರಿಸುತ್ತದೆ.

ದೈವೀ ಕಿಡಿಯ (ಸ್ಫುಲಿಂಗ) ಮೂಲಕವೇ "ಜೀವವು" ಪ್ರಾರಂಭಗೊಳ್ಳುತ್ತದೆ. ಅದು ನಿರ್ವಿಕಲ್ಪವಾಗಿದ್ದು (ಅಚಲವೂ ಆಗಿದ್ದು), ಶಾಶ್ವತವಾಗಿದೆ. ಅನಂತವೂ ಆಗಿರುತ್ತದೆ. (ಆಯಾಮರಹಿತ ಸಂಭಾವ್ಯತೆಯೇ ಅನಂತತೆಯಾಗಿರುತ್ತದೆ). ಮತ್ತೆ ಈ ಎಲ್ಲ ಅವತಾರಗಳು, ಅವು ಏನನ್ನೇ ಸ್ವೀಕರಿಸಲಿ ಮತ್ತು ಆ ದೈವೀ ಪ್ರಭಾವದಿಂದ ಪ್ರತಿಸ್ಪಂದಗೊಂಡಿರಲಿ, ಅದು ಉತ್ತರೋತ್ತರವಾಗಿಯೇ ಜೀವದ ಸುತ್ತಲೂ ಸ್ಫಟಿಕದ ರೂಪದಲ್ಲಿ ಪರಿಣಿತ ಸ್ವರೂಪವನ್ನು ಪಡೆದುಕೊಂಡಿರುತ್ತದೆ. ಈ ಮೂಲಕ ಹೆಚ್ಚು ಹೆಚ್ಚು ಪ್ರಜ್ಞೆಯಂತಾಗಿ ಹಾಗೂ ಅದೇ ರೀತಿಯಲ್ಲಿ ಹೆಚ್ಚು ಹೆಚ್ಚು ಸುಸಂಘಟಿತವಾಗಿರುತ್ತದೆ. ಅಂತಿಮವಾಗಿ, ವೈಯಕ್ತಿಕ ಜೀವ(ಪ್ರಾಣ)ವಾಗಿ ಸಂಪೂರ್ಣ ಪ್ರಜ್ಞೆಯಾಗುತ್ತದೆ. ತನಗೆ ತಾನೇ ಪ್ರಭುತ್ವ ಹೊಂದಿರುವಷ್ಟರ ಮಟ್ಟಿಗೆ ಅದು ಪರಿಣತವಾಗಿರುತ್ತದೆ. ಮತ್ತೆ ಸಂಪೂರ್ಣವಾಗಿ ಆ ದೈವೀ ಇಚ್ಛೆ(ಕೃತುವಿನಂತೆಯೇ)ಯಂತೆಯೇ ಚಲಿಸುತ್ತದೆ.

ಒಟ್ಟಿನಲ್ಲಿ ಹೇಳುವದಾದಲ್ಲಿ, ಇದು ಆ ಪರಮೋಚ್ಚ ತುರೀಯದ ವೈಯಕ್ತಿಕ ಅಭಿವ್ಯಕ್ತಿಯಾಗಿರುತ್ತದೆ. ಇದನ್ನೇ ನಾವು "ಚೈತ್ಯ ಪುರಷ" ಅಥವಾ "ಚೈತ್ಯಾತ್ಮ" ಎಂದು ಕರೆಯುತ್ತೇವೆ.

**– ಶ್ರೀಮಾತೆ: ಶಿಷ್ಯನೊಡನೆ ಸಂವಾದ, ದಿನಾಂಕ ಜುಲೈ 25, 1962**

## ಹಿಂದಿನ ಜನ್ಮದ ಕುರುಹು

ಸಾಮಾನ್ಯವಾಗಿ ಹೇಳುವದಾದಲ್ಲಿ, ಪರಿಪೂರ್ಣ ವಿಕಾಸಗೊಂಡಿರುವ ಪದ್ಧತಿಯಲ್ಲಿಯೇ ಯೋಗವನ್ನು ಅನುಷ್ಠಾನಿಸುತ್ತಿರುವವರು ಯಾರಿರುವರೋ, ಅವರಲ್ಲಿ ಈ ಚೈತ್ಯ–ಪುರುಷನು ದೈವಿಕ ಕಾರ್ಯವನ್ನು ಮುಂದುವರೆಸುವ ಸಲುವಾಗಿ ಮತ್ತೆ ಜನ್ಮವನ್ನು ಸ್ವತಂತ್ರವಾಗಿಯೇ ಧರಿಸಿರುತ್ತಾನೆ. ಅಥವಾ ಕಳೆದ ಜನ್ಮದ ಅವತಾರದಲ್ಲಿ ಕಾಯುತ್ತಿದ್ದ ಈ ಚೈತ್ಯ ಪುರುಷನು ತನ್ನ ಪ್ರಗತಿಯನ್ನು ಪೂರ್ಣಗೊಳಿಸಿಕೊಳ್ಳಲು ಮತ್ತು ತನ್ನಷ್ಟಕ್ಕೆ ತಾನೇ ಸಾಕ್ಷಾತ್ಕಾರಗೊಳಿಸಿಕೊಳ್ಳಲು ಬಯಸುತ್ತಿದ್ದನು. ಅದಕ್ಕಾಗಿಯೇ 'ಅಭೀಪ್ಸೆ' ಎಂದರೆ ಏನು ಎಂದರೆ, ಇದೇ ಅಭೀಪ್ಸೆಯಾಗಿದೆ. ಇದೇ ಆ ಸಂಪರ್ಕವೂ ಆಗಿದೆ.

ಆದ್ದರಿಂದ, ನಿಮ್ಮ ಚೈತ್ಯಾತ್ಮದ (ಚೈತ್ಯ ಪುರುಷನ) ಬಗೆಗೆ ಪ್ರಜ್ಞಾವಂತರಾಗಿ ಎಂದು ಕೇಳಿದಲ್ಲಿ, ಅದು ಬಾಹ್ಯ ಪ್ರಕೃತಿಯಿಂದ ರೂಪುಗೊಳಿಸಲ್ಪಟ್ಟಿರುವ

ಜೀವಿಯಾಗಿದ್ದು, ಈ ದಿವ್ಯ ವಾಸ್ತವದ ಜೊತೆಗೆ ಈ ಚೈತ್ಯ ಪುರುಷನ ಜೊತೆಗೆ ಅಸ್ತಿತ್ವಗೊಳ್ಳುವದೇ ಆಗಿದೆ. ಇದಾದ ಮೇಲೆಯೇ ಈ ಚೈತ್ಯವು ಅಸ್ತಿತ್ವದಲ್ಲಿರುವ ಸರ್ವವನ್ನೂ ತನ್ನ ಸುಪರ್ದಿಗೆ ತೆಗೆದುಕೊಳ್ಳುತ್ತದೆ. ವಾಸ್ತವದಲ್ಲಿ, ಅದು ಆಂತರಿಕ ಮಾರ್ಗದರ್ಶಿಯಾಗಿದೆ..... ಹೌದು ಅದು ಆರೀತಿ ಇರುವದೇ ಒಳ್ಳೆಯದು... ಅದಕ್ಕಾಗಿಯೇ ಆಂತರಿಕ ಮಾರ್ಗದರ್ಶಿಯಾಗಿದೆ.

ನಾನು ಚಿಕ್ಕ ಮಗುವಾಗಿದ್ದಾಗ, ಈ "ವ್ಯಕ್ತಿಯು" (ಅವರೊಂದು ವ್ಯಕ್ತಿ ಮಾತ್ರವೇ ಆಗಿರಲಿಲ್ಲ, ಆದರೆ ಚೈತನ್ಯದ ಕೆಲವು ಅಂಶಗಳ ಅಭಿವ್ಯಕ್ತಿಯಾಗಿದ್ದರು. ಮತ್ತು ಇಚ್ಛೆಯೂ ಆಗಿದ್ದರು.) ಖಚಿತವಾಗಿಯೂ ಪ್ರಾಣಿಕ ಅಸ್ತಿತ್ವವನ್ನು ಹೊಂದಿದ್ದರು. ಇದರ ಹಿನ್ನಲೆಯಲ್ಲಿ ಏನೋ ವಿಶೇಷ ಇದ್ದೇ ಇರುತ್ತದೆ. ಆದರೆ ಅದೊಂದು ಅತ್ಯಪೂರ್ವದ ಸಂಗತಿಯಾಗಿತ್ತು. ನನಗೆ ಆವಾಗ ಏನು ಅನುಭವ–ವಾಗಿತ್ತೋ, ಅದು ಈಗ ಚೈತ್ಯ ಪುರುಷನಾಗಿದ್ದು, ಉದ್ದೇಶಪೂರ್ವಕವಾಗಿಯೇ ಅವತಾರಗೊಂಡಾಗ ಪ್ರತಿಯೊಬ್ಬನಲ್ಲಿಯೂ ಇದು ಘಟಿಸುತ್ತದೆ. ಈ ಚೈತ್ಯಾತ್ಮವೇ ನಮ್ಮ ಮಾರ್ಗದರ್ಶಿಯಾಗಿರುತ್ತಾನೆ. ಒಂದು ವೇಳೆ ಅದು ಮುಕ್ತವಾಗಿ ಕಾರ್ಯ ಮಾಡಲು ನೀವು ಅವಕಾಶ ಒದಗಿಸಿಕೊಟ್ಟಲ್ಲಿ, ಆಗ ಅದು ಎಂತಹ ಸಂದರ್ಭಗಳನ್ನೂ ಸಹಿತ ಸುಸಂಬದ್ಧಗೊಳಿಸುತ್ತದೆ. ಇದೇ ಅತ್ಯಂತ ಆಶ್ಚರ್ಯಕರ ಸಂಗತಿಯಾಗಿದೆ.... ನಾನು ಇದನ್ನು ಕಂಡಿದ್ದೇನೆ. ಅದು ಕೇವಲ ನನ್ನ ಸಲುವಾಗಿ ಮಾತ್ರ ಅಲ್ಲ, ಮತ್ತೆ ಹಲವು ವ್ಯಕ್ತಿಗಳ ಸಲುವಾಗಿಯೂ – ಅಂದರೆ ಯಾರು ತಮ್ಮ ಚೈತ್ಯಾತ್ಮದ ಬಗೆಗೆ ಪ್ರಜ್ಞಾಪೂರ್ವಕವಾಗಿ ಜಾಗ್ರತರಾಗಿದ್ದರೋ, ಅವರಿಗೂ ಸಹಿತ ಪ್ರತಿಯೊಂದು ಘಟನೆಯೂ ಸುಸಂಗತ ದೃಷ್ಟಿಕೋನದಿಂದಲೇ ಸುವ್ಯವಸ್ಥೆಗೊಳಿಸಲ್ಪಟ್ಟಿತ್ತು. ಆದರೆ ಯಾವುದೇ ಕಾರಣಕ್ಕೂ ನಿಮ್ಮ ವೈಯಕ್ತಿಕ ನಿಲುವಿನ ಅಹಂಕಾರದ ತೃಪ್ತಿಗಾಗಿ ಅಲ್ಲವೇ ಅಲ್ಲ. ಅದು ಘಟಿಸಿದ್ದು ನಿಮ್ಮ ಸರ್ವಾಂಗೀಣ ಪರಿಪೂರ್ಣ ಪ್ರಗತಿಗಾಗಿ ಮತ್ತು ಸಾಕ್ಷಾತ್ಕಾರಕ್ಕಾಗಿ. ಮತ್ತೆ ಜೀವನದ ಎಲ್ಲ ಸಂದರ್ಭಗಳಲ್ಲಿಯೂ ಯಾವುದನ್ನು ನೀವು 'ಅಪಾಯಕಾರಕ' ಎಂದು ಭಾವಿಸಿಕೊಂಡಿದ್ದೀರೋ, ಅದಕ್ಕೂ ಸಹಿತ, ನೀವು ಯಾವ ಗುರಿಯೆಡೆಗೆ ಸಾಗುತ್ತಿದ್ದೀರೋ ಅಲ್ಲಿಗೇ ಕರೆದೊಯ್ಯಲು ಮುಂದಾಳುವಾಗಿರುತ್ತದೆ. ಅದು ತೀವ್ರವಾಗಿಯೇ ಸಾಧ್ಯವಾಗುತ್ತದೆ.

*

## ಕೋಳಿ ಮತ್ತು ಮೊಟ್ಟೆ

ಇದೆಲ್ಲವೂ ಹೇಗೆ ಘಟಿಸುತ್ತದೆ ಎನ್ನುವದರ ಬಗೆಗೆ ನನಗೆ ಖಚಿತತೆ ಇದೆ. ಇದು ನಿಧಾನವಾಗಿಯೇ, ಸ್ವಲ್ಪಮಟ್ಟಿಗೆ ಅಗ್ರಾಹ್ಯವಾಗಿಯೇ ಇರುವ, ಮೊಟ್ಟೆಯ ಒಳಗಡೆಗೆ ಇರುವ ಕೋಳಿಯು ರೂಪುಗೊಳ್ಳುವಂತೆ ಇರುತ್ತದೆ. ನೀವು ಮೊಟ್ಟೆಯ ಕವಚವನ್ನು ನೋಡಿದ್ದೀರಿ. ಹೌದು ಆದರೆ ಅದರೊಳಗೆ ಇರುವ ಕೋಳಿಯನ್ನು ಮಾತ್ರ ಕಾಣಲಾಗುತ್ತಿಲ್ಲ. ಅದು ಕೇವಲ ಬರೀ ಮೊಟ್ಟೆಯೋ? ಅಥವಾ ಕೋಳಿಯೋ? (ಸಾಮಾನ್ಯವಾಗಿ ನನ್ನ ಅಭಿಪ್ರಾಯವೆಂದರೆ, ಒಂದು ವೇಳೆ ನೀವು ವಿಶೇಷ ಉಪಕರಣದಿಂದ ಆ ಮೊಟ್ಟೆಯ ಆಂತರ್ಯವನ್ನು ದಿಟ್ಟಿಸಿದರೂ ಸಹಿತ) ಕೊನೆಗೂ ನಿಮಗೆ ದಕ್ಕುವದು ಆ ಮೊಟ್ಟೆಯ ಒಳಗಡೆ ಇರುವ ಕೋಳಿಯ ಮರಿಯು ಕೊಕ್ಕಿನಿಂದ ಆ ಕವಚವನ್ನು ಕುಟ್ಟಿ ಕುಟ್ಟುತ್ತಿರುವ ಶಬ್ದವೇ ಮಾತ್ರ ಕೇಳುತ್ತದೆ. ಆಮೇಲೆ ಅಲ್ಲಿಂದ ಒಂದು ಕೀಚಲು ಧ್ವನಿಯೊಂದು ಕೇಳಿ ಬರುತ್ತದೆ. ಅದು ತನ್ನ ಕೋಶವನ್ನು ಕುಕ್ಕಿಕೊಂಡೇ ಹೊರಗೂ ಬರುತ್ತದೆ. ಅದೇ ರೀತಿಯಲ್ಲಿಯೇ ಮಾನವನ ಜೀವನದಲ್ಲಿಯೂ ಇದೆ. ಈ ಚೈತ್ಯಾತ್ಮನೊಂದಿಗೆ ಸಂಪರ್ಕ ಪಡೆಯಲು ಮಾನವನ ಪ್ರಯತ್ನವೂ ಸಹಿತ ಇದರಂತೆಯೇ ಇರುತ್ತದೆ. ಅದು ಕೆಲವು ತಿಂಗಳುಗಳಲ್ಲಿಯೂ ಸಾಧ್ಯವಾಗಬಹುದು ಅಥವಾ ಕೆಲವೇ ನಿಮಿಷಗಳಲ್ಲಿಯೂ ಆಗಬಹುದು. ನಿಮ್ಮ ಸುತ್ತಲೂ ಮುಚ್ಚಿದ ಬಾಗಿಲನ್ನು ಅದರ ಎದುರು ಕುಳಿತುಕೊಂಡೇ ಅದನ್ನು ಕುಕ್ಕುತ್ತಲೇ ಕುಕ್ಕುತ್ತಲೇ, ತಳ್ಳುತ್ತಲೇ ಮತ್ತೆ ಅದರ ಅನುಭವವನ್ನೂ ಅನುಭಾವಿಸುತ್ತಲೇ ಇರುತ್ತೀರಿ. ಆದರೆ ಅಲ್ಲಿ ನಿಜವಾಗಿಯೂ ಏನೂ ಇರುವದಿಲ್ಲ. ಯಾವುದೇ ಫಲಿತಾಂಶವೂ ಇರುವದಿಲ್ಲ.

ಆಮೇಲೆ ಇದ್ದಕಿದ್ದಂತೆಯೇ, ಅದು ಏಕೆ ಈ ರೀತಿಯಲ್ಲಿ ಮತ್ತು ಹೇಗೆ ಎನ್ನುವದೂ ನಿಮಗೆ ಅರಿವಿರುವದಿಲ್ಲ – ನೀವು ಕುಳಿತೇ ಇರುತ್ತೀರಾ, ಜೊತೆಗೆ ಸಾಕ್ಷಿಯೂ ಆಗಿರುತ್ತೀರಿ! – ಎಲ್ಲವೂ ವ್ಯಾಪ್ತಗೊಳ್ಳುವತ್ತಲೇ ಅರಳಿಕೊಳ್ಳುತ್ತದೆ. ಸರ್ವಸ್ವವೂ ಸಿದ್ಧಗೊಂಡಿರುತ್ತದೆ. ಪ್ರತಿಯೊಂದೂ ಘಟಿಸಲ್ಪಟ್ಟಿದೆ. ಅದಕ್ಕಿಂತ ಮುಖ್ಯವಾಗಿ ಅದೆಲ್ಲವೂ ನಿಮ್ಮದೇ ಆಗಿದೆ. ನೀವು ಸಂಪೂರ್ಣವಾಗಿ ಚೈತ್ಯದಲ್ಲಿ ಸಂಲಗ್ನಗೊಂಡಿರುತ್ತೀರಿ. ಜೊತೆಗೆ ನಿಮ್ಮದೇ ಚೈತ್ಯ ಪುರುಷನ ಜೊತೆಗೆ ಆತ್ಮೀಯರೂ ಆಗಿರುತ್ತೀರಿ. ಆಗ ಎಲ್ಲವೂ ಪರಿವರ್ತನಗೊಳ್ಳುತ್ತದೆ. ಹೌದು, ಸರ್ವಸ್ವವು ಪರಿವರ್ತನಗೊಳ್ಳುತ್ತದೆ. – ನಿಮ್ಮ ಜೀವನವೂ ಪರಿವರ್ತನವಾಗುತ್ತದೆ. ಒಟ್ಟಿನಲ್ಲಿ ಅದು ನಿಮ್ಮ ಜೀವನದ ಅಸ್ತಿತ್ವದ ಸಮಗ್ರ ಪರಿವರ್ತನವಾಗಿರುತ್ತದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂವಾದ, ದಿನಾಂಕ ಸಪ್ಟಂಬರ 5, 1962**

**ಸಾಮಾನ್ಯವಾಗಿ ನಿಜವಾಗಿಯೂ ದುಃಖದಾಯಕ ಸಂಗತಿಗಳಿಂದ ಮಾತ್ರವೇ ಮಾನವನು ತೊಂದರೆ ಒಳಗಾಗುತ್ತಿಲ್ಲ. ಹೀಗಾಗಿ ಓರ್ವ ವ್ಯಕ್ತಿಯ ಜೀವನದಲ್ಲಿ ಆತ್ಮದ ಸೋಲನ್ನು ಕುರಿತು ಅರಿತುಕೊಳ್ಳಬೇಕಾಗಿದೆ. ಅದರ ನಿಯತಿಯಂತೆ ಬದುಕು ರೂಪಿಸಿಕೊಳ್ಳಬೇಕಾಗಿದೆ. ನಿಜವಾಗಿಯೂ ಯಾವುದೇ ವ್ಯಕ್ತಿಯ ಪ್ರಜ್ಞಾಪೂರ್ವಕವಾಗಿರುವ ಆತ್ಮದ ಮೂಲಕವೇ ಈ ದುಃಖಗಳು ಬಂದಿರುವದಿಲ್ಲ. ಅದೂ ಚೈತ್ಯಾತ್ಮನಿಂದಂತೂ ಖಂಡಿತ ಬಂದಿರುವದಿಲ್ಲ. ಆದರೆ ದುಃಖಗಳು ಸಂಪೂರ್ಣವಾಗಿ ಅವನದೇ ಜೀವನದ ಮಾರ್ಗದರ್ಶಿಯಿಂದಲೂ ಘಟಿಸಿರುವದಿಲ್ಲ. ಓರ್ವ ವ್ಯಕ್ತಿಯು ಆತ್ಮವನ್ನು ಅರಿತುಕೊಳ್ಳುವ ಮುನ್ನವೇ ಸಾವು ಸಂಭವಿಸುವಂತೆ, ಮತ್ತು ಈ ರೀತಿಯ ನಿಯಮದಿಂದಲೇ ಬದುಕಿದ್ದಲ್ಲಿ, ಅದು ಖಂಡಿತವಾಗಿಯೂ ವಿಫಲತೆಯಿಂದ ಕೂಡಿದ ಜೀವನವೇ ಆಗಿರುತ್ತದೆ, ತನ್ನಲ್ಲಿಯೇ ದೈವತ್ವವನ್ನು ಸಹಜವಾಗಿಯೇ ದರ್ಶಿಸಿಕೊಂಡು ಮತ್ತು ಆ ಪರಮಾತ್ಮನ ನಿಯತಿಯಂತೆಯೇ ಬದುಕುವದನ್ನು ಅರಸಿಕೊಳ್ಳುವದೇ ನಿಜವಾಗಿಯೂ ವೈಭವಾತ್ಮಕವಾಗಿರುವ ಪ್ರಭಾಪೂರ್ಣ ಹಾಗೂ ನೈಜ ಮಹಾಕಾವ್ಯದಂತೆಯೇ ಬದುಕೂ ಇರುತ್ತದೆ.**

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/277 – ಶ್ರೀಮಾತೆ**

**ಒಂದು ವಿಧಾನ**

ಯಾವಾಗಲೂ ನೆನಪಿನಲ್ಲಿ ಇಟ್ಟುಕೊಳ್ಳಬೇಕಾದ ಅಂತಿಮ ಮಾತೆಂದರೆ, ಯಾವುದೇ ಕಾರಣಕ್ಕೂ ಚಿಂತಿಸದಿರುವದೇ ಆಗಿದೆ. ಇದೇ ಉತ್ತಮ ಮಾರ್ಗವಾಗಿದೆ. ಯಾವುದಕ್ಕೂ ಆಕ್ರೋಶಗೊಳ್ಳಬೇಡಿ. ಕೆಲಸ ಮಾಡುವದು ಮುಗಿಯಿತು ಎನ್ನಬೇಡಿ. ಅಸಹನೆ ಪಡಬೇಡಿ. ಹತಾಶರಾಗಬೇಡಿ (ಏಕೆಂದರೆ, ಈ ಹತಾಶೆಯಂತೂ ಅತ್ಯಂತ ಮಾರಕವಾಗಿರುತ್ತದೆ) – ಸದಾ ಶಾಂತಚಿತ್ತರಗಿರಬೇಕು. ಹಾಗೂ “ಅದು ಬಂದೇ ಬರುವದು.. ಅದು ಯಾವಾಗ ಬರಬೇಕಾಗಿದೆಯೋ ಆಗಲೇ ಖಂಡಿತವಾಗಿಯೂ ಬರುವದು” ಎಂದು ಸದಾ ಹೇಳಿಕೊಳ್ಳುತ್ತಿರಿ. ಆದರೆ ಯಾವುದಕ್ಕೂ ಮಣಿಯದ ಜಿದ್ದಿನಲ್ಲಿಯೇ ನೀವು ಇರಬೇಕು. ನಿಮ್ಮ ಭಾವನೆಯ ಪ್ರಕಾರ ಸೂಕ್ತವಾದುದನ್ನು ನೀವು ಕೃತಿಗಿಳಿಸಿರಿ. ಆದರೆ ಅದರೊಡನೆ ಸದಾ ನೀವೂ ಇರಬೇಕು. ಅದು ಸಂಪೂರ್ಣವಗಿ ನಿರರ್ಥಕವಾಗಿದ್ದರು ಸಹಿತ, ಆಗಲೂ ನಿಮ್ಮನ್ನು ನೀವು

ಅದರೊಡನೆ ಗುರುತಿಸಿಕೊಂಡೇ ಇರಬೇಕು. ಒಂದು ಸಮಯದಲ್ಲಿ ನಾನೂ ಇದೇ ವಿಧಾನವನ್ನೇ ಹೊಂದಿದ್ದೆ!

ಹೌದು ಇಲ್ಲಿ ಹಲವಾರು ವಿಧಾನಗಳಿವೆ. ಅದರ ಸಲುವಾಗಿಯೇ ಗ್ರಂಥಗಳೂ ಇವೆ. ಆದರೆ ಅವುಗಳಲ್ಲಿ ಯಾವುದನ್ನೂ ನಾನು ನಿಮಗೆ ಶಿಫಾರಸ್ಸು ಮಾಡುವದಿಲ್ಲ. ಅದರ ಲೇಖಕನು ಯಾವುದನ್ನು ಅವನು ಆಲಿಸಿರುತ್ತಾನೆಯೋ, ಆ ವಿಷಯವನ್ನು ಮಾತ್ರ ಅಲ್ಲಿ ಲಿಖಿಸಿದ್ದಾನೆ. ಹೀಗಾಗಿ ಪ್ರತಿಯೊಬ್ಬರೂ ತಮ್ಮದೇ ಆದ ದಾರಿಯನ್ನು ಕಂಡುಕೊಳ್ಳಬೇಕು, ಅಷ್ಟೇ ಅಲ್ಲ ಆ ದಾರಿಯಲ್ಲಿಯೇ ಸಾಗಬೇಕು. ತನ್ನದೇ ವಿಧಾನವನ್ನು ಕಂಡುಕೊಳ್ಳಬೇಕು. ಪ್ರತಿಯೊಬ್ಬನೂ ಕೆಲವೊಂದು ಸುಳಿವುಗಳನ್ನು ಪಡೆದೇ ಪಡೆಯುತ್ತಾನೆ. ಆ ಮೂಲಕ ಪ್ರತಿಯೊಬ್ಬನೂ ತನ್ನದೇ ವಿಧಾನವನ್ನು ರೂಪಿಸಿಕೊಳ್ಳಬಹುದಾಗಿದೆ.

ಆದರೆ ಇಲ್ಲಿ ಪ್ರತಿಯೊಬ್ಬನೂ ಗಮನಿಸಬೇಕಾದ ಸಂಗತಿ ಏನೆಂದರೆ, ಇದು ಜಪಕ್ಕೆ ಸರಿಸಮವಾದ ವಿಷಯವಾಗಿರುತ್ತದೆ. ನಿಮಗೆ ಜಪದ ವಿಧಾನ ತಿಳಿಸಲ್ಪಟ್ಟಿದೆ ತಾನೇ? ಹೌದಲ್ಲವೇ? ನೀವು ಅದನ್ನು (ಅದು ನಿಮಗೆ ಸೂಕ್ತವಾಗಿದೆ ಎಂದು ನಿಗದಿ ಮಾಡಿಕೊಂಡೇ ಸ್ವೀಕರಿಸುತ್ತೀರಿ. ಆದರೆ ಅದು ಕಠಿಣಮಯವಾಗಿರುವ ಸಂದರ್ಭವೇ ಹೆಚ್ಚಾಗಿದ್ದು, ಸಾಕ್ಷಾತ್ಕಾರಕ್ಕಾಗಿ ಮತ್ತೊಂದು ಹಂತವನ್ನೂ ಬಯಸುತ್ತದೆ,) ನೀವು ಜಪವನ್ನೂ ಸಹಿತ, ಅದನ್ನು ಅನುಷ್ಠಾನಿಸುವ ಶಕ್ತಿಯಿಂದಲೇ ಸ್ವೀಕರಿಸುತ್ತೀರಿ. ಆದರೆ ಅದನ್ನು ಹೇಗೆ ಅನುಷ್ಠಾನ ಮಾಡಬೇಕು ಎನ್ನುವದನ್ನು ನೀವು ಕಲಿತುಕೊಳ್ಳಬೇಕಾಗುತ್ತದೆ, ಅಲ್ಲವೇ? ಸರಿ... ಅತಿ ದೀರ್ಘಾವಧಿಯಲ್ಲಿಯೂ ಸಹಿತ ನೀವು ಪೂರ್ಣ ಸಫಲರಾಗಿರುವದಿಲ್ಲ. ಎಲ್ಲ ರೀತಿಯ ಘಟನೆಗಳೂ ಘಟಿಸುತ್ತವೆ. ಅವು ಏನೇ ಇರಲಿ, ನೀವು ಅದರ ಕೇಂದ್ರ ಸ್ಥಾನದಲ್ಲಿಯೇ ಮರೆತು ಬಿಡುತ್ತೀರಿ ಇಲ್ಲವೇ ಜಾರಿ ಬೀಳುತ್ತೀರಿ. ಅಥವಾ ನಿದ್ರೆಗೆ ಸರಿಯುತ್ತೀರಿ. ಅದೂ ಇಲ್ಲದಿದ್ದರೆ ದಣಿವಿನಿಂದ ಬಳಲುತ್ತೀರಿ. ತಲೆನೋವಿನಿಂದಲೂ ಯಾತನೆ ಅನುಭವಿಸುತ್ತೀರಿ. ಜೊತೆಗೆ ಇಂತಹದೆ ಹಲವಾರು ತೊಂದರೆಗಳಿಂದ ಬಳಲುತ್ತೀರಿ. ಅದೂ ಅಲ್ಲದೇ ಬಾಹ್ಯ ವಾತವರಣದ ಹಸ್ತಕ್ಷೇಪದಿಂದಾಗಿಯೂ ನೀವು ತೊಂದರೆಗೆ ಒಳಗಾಗುತ್ತೀರಿ.

ಸರಿ ಹಾಗಾದರೆ, ಇದೂ ಸಹಿತ ಅದೇ ರೀತಿಯಲ್ಲಿಯೇ ಇದೆ. ನೀವು ನಿಮ್ಮಲ್ಲಿ ನಿಮಗೆ ಕೇಳಿಕೊಳ್ಳಬೇಕಾದುದೇನೆಂದರೆ, – 'ನಾನು ಇದನ್ನು ಅನುಷ್ಠಾನಿಸುವೆ', ಎಂದು ಹೇಳುತ್ತಲೇ ನೀವು ಆ ಕಾರ್ಯದಲ್ಲಿ ತೊಡಗಿಕೊಳ್ಳುತ್ತೀರಿ. ಹೀಗಿದ್ದಾಗ್ಯೂ

ಸಹಿತ, ನೀವು ಇಲ್ಲಿ ಮತ್ತೆ ಕೇವಲ ಹೇಸರಗತ್ತೆಯ ಹಾಗೆಯೇ ಸಾಗಿರುತ್ತೀರಿ. ಅಲ್ಲಿ ಪ್ರತಿಯೊಂದೂ ಪಥವನ್ನು ಮುಚ್ಚಿರುತ್ತದೆ. ಆದಾಗ್ಯೂ ನೀವು ನಿಮ್ಮ ಪ್ರಯಾಣವನ್ನು ಮುಂದುವರೆಸಿಕೊಂಡೇ ಇರಬೇಕು. ನಿಮಗೆ ನೀವೇ ಹೇಳಿಕೊಳ್ಳುವಂತೆ,– ಇದನ್ನು ಮಾಡಿಯೇ ಮಾಡುತ್ತೇನೆ, ಎಂದು ಹೇಳುತ್ತಲೇ ನೀವು ಅದನ್ನು ಪೂರೈಸಿಕೊಳ್ಳುವಿರಿ. ಅಲ್ಲಿ ಒಂದು ವೇಳೆ ಫಲಿತಾಂಶವಿರದೇ ಹೋದಾಗಲೂ ಸಹಿತ ಅದಕ್ಕೆ ಲಕ್ಷ್ಯ ಕೊಡುವದಿಲ್ಲ. ಪ್ರತಿಯೊಂದೂ ನನ್ನ ವಿರುದ್ಧವಾಗಿಯೇ ಇದ್ದರೂ ಸಹಿತ, ನಾನದಕ್ಕೆ ಲಕ್ಷ್ಯ ಕೊಡುವದಿಲ್ಲ... ನಾನು ಹೇಳಿಕೊಳ್ಳುತ್ತಿರುವದೇನೆಂದರೆ, ನಾನು ಇದನ್ನು ಖಂಡಿತವಾಗಿಯೂ ಮಾಡುತ್ತೇನೆ, ಹೌದು ಖಂಡಿತವಾಗಿಯೂ ನೆರವೇರಿಸುತ್ತೇನೆ, ಈ ರೀತಿಯ ನಿಶ್ಚಯದಲ್ಲಿಯೇ ನಿಮ್ಮ ಪ್ರಯಾಣವನ್ನು ಮುಂದುವರೆಸಿರಿ.....

**– ಶ್ರೀಮಾತೆ: ಶಿಷ್ಯನೊಡನೆ ಸಂವಾದ, ದಿನಾಂಕ ಸಪ್ಟಂಬರ 5, 1962**

## ಛಲವನ್ನು ಹೊಂದು

ನೀನು ಛಲವನ್ನು ಹೊಂದಿರಬೇಕು. ಹೌದು.. ಛಲ! ಛಲ!! ಛಲ!!!. ಸಾಧಿಸಿಯೇ ಸಾಧಿಸುತ್ತೇನೆ ಎನ್ನುವ ಛಲವಾಗಿರಬೇಕು. ಪ್ರಜ್ಞಾರಹಿತ ಸ್ಥಿತಿಯ ಎಲ್ಲ ಪ್ರತಿರೋಧಗಳನ್ನೂ ಹಾಗೂ ಅಜ್ಞಾನವನ್ನೂ ನೀನು ಯಾವಾಗಲೂ ವಿರೋಧಿಸುವವನಾಗಬೇಕು. ಈ ಪ್ರಜ್ಞಾರಹಿತ ಸ್ಥಿತಿಯ ಎಲ್ಲ ಬಲಗಳ, ಶಕ್ತಿಗಳ ವಿರುದ್ಧವೂ ನೀನು ಎದ್ದು ನಿಲ್ಲಬೇಕು. ಅದೇ ರೀತಿ ಅಜ್ಞಾನದ ವಿರುದ್ಧವೂ ಸಹಿತ. ಅವುಗಳಲ್ಲಿ ಕೆಲವು ಹಠಮಾರಿತನದಿಂದ ಕೂಡಿದ್ದರೆ, ಮತ್ತೆ ಕೆಲವು ಅನಿಯಂತ್ರಿತ ಸ್ಥಿತಿಯಲ್ಲಿಯೇ ಇರುತ್ತವೆ. ನೀನು ಅವುಗಳನ್ನೂ ಎದುರಿಸಬೇಕಾಗಿದೆ.

ಬಂಡೆಯೊಂದರ ಮೇಲೆ ಸದಾ ಬೀಳುತ್ತಿರುವ ನೀರಿನ ಹನಿಯ ಕಥೆಯ ಹಾಗೆ ನಿನ್ನ ಪ್ರಯತ್ನವಿರಬೇಕು. ಇದೆಲ್ಲವೂ ಕೇವಲ ಕೆಲವೇ ಕೆಲವು ಸಮಯದ ಘಟನೆಯಾಗಿರುತ್ತದೆ, ಹರಿಯುವ ನೀರೂ ಸಹಿತ, ಬಂಡೆಗಲ್ಲು ಎದುರಾದಾಗ, ಸಂದರ್ಭಾನುಸಾರವಾಗಿ ತನ್ನದೇ ಪಥವನ್ನು ಅರಸಿಕೊಳ್ಳುತ್ತದೆ. ಅದಕ್ಕೆ ಸುದೀರ್ಘಾವಧಿಯ ಕಾಲವೂ ಬೇಕಾಗಬಹುದು. ಆದರೆ ಖಂಡಿತವಾಗಿಯೂ ವಿಜಯವಂತೂ ಇದ್ದೇ ಇರುತ್ತದೆ. ಆದರೆ ಆ ಹರಿವು ಮಾತ್ರ ನಿರಂತರವಾಗಿ ಇರಲೇಬೇಕಾಗುತ್ತದೆ. ನಿರಂತರವಾಗಿ ತೊಟ್ಟಿಕ್ಕುತ್ತ ತೊಟ್ಟಿಕ್ಕುತ್ತಲೇ, ಪ್ರವಹಿಸುತ್ತಲೇ ಇದ್ದಲ್ಲಿ ಮಾತ್ರ ವಿಜಯ ಸಾಧ್ಯವಾಗುತ್ತದೆ. ಮೊದಲ ಬಾರಿ ಬಂಡೆಯ ಮೇಲೆ ಬಿದ್ದಾಗ ಜಾರಿ ಹೋಗಿ ಬಿಡಬಹುದು. ಆದರೆ ಕ್ರಮೇಣ ಅದು ತಾನು ಬೀಳುವ

ಸ್ಥಳದಲ್ಲಿ ರಂಧ್ರವೊಂದನ್ನು ಸೃಷ್ಟಿಸಿಕೊಳ್ಳುತ್ತದೆ. ಅಲ್ಲಿಂದ ಮುಂದೆ ವಿಶಾಲವಾದ ಧಾರೆಯಾಗುವ ಹಾಗೆ ವಿಸ್ತಾರಗೊಳ್ಳುತ್ತದೆ. ಅಲ್ಲಿಂದ ಧುಮ್ಮುಕ್ಕುವದನ್ನು ಕಾಣಬಹುದು. ಪ್ರಕೃತಿಯು ನಮಗೆ ಇಂತಹ ಅತ್ಯುತ್ತಮವಾದ ದೃಷ್ಟಾಂತಗಳನ್ನು ಒದಗಿಸಿದೆ. ನಾವು ಅದನ್ನು ಅನುಸರಿಸಲೆಂದೇ ಇದನ್ನು ನೀಡಿದೆ. ಇದು ಇಷ್ಟೇ ಇರುವ ವಿಷಯ. ನಾವೆಲ್ಲರೂ ಆ ಬಂಡೆಯ ಮೇಲೆ ಬೀಳುತ್ತಿರುವ ಆ ನೀರ ಹನಿಯಂತೆ ಇರಬೇಕು.

**– ಶ್ರೀಮಾತೆ: ಶಿಷ್ಯನೊಡನೆ ಸಂವಾದ, ದಿನಾಂಕ ಸಪ್ಟಂಬರ 5, 1962**

## ಆ ದಿವ್ಯತ್ವದೆಡೆಗೆ ಅವಿಚಲವಾದ ಆಕರ್ಷಣೆ

ಚೈತ್ಯದ ಸಂಚಲನ ಹಾಗೂ ಭಾವನಾತ್ಮಕವಾದ ಪ್ರತಿಸ್ಪಂದಗಳನ್ನು ಬಲವತ್ತರವಾಗಿಯೇ ಹೊಂದಿ ಬೌದ್ಧಿಕ ಸಾಮರ್ಥ್ಯಕ್ಕಿಂತಲೂ ಬಲವನ್ನು ಹೊಂದಿರುವ ಕೆಲವು ವ್ಯಕ್ತಿಗಳು ಇದ್ದಾರೆ. ಅವರೆಲ್ಲರೂ ಈ ದೈವತ್ವದ ಎಡೆಗೆ ಅವಿಚಲವಾದ ಆಕರ್ಷಣೆಯನ್ನು ಹೊಂದಿದ್ದಾರೆ. ಅದು ಅವರಿಗೇ ಅರಿವಿಲ್ಲದಂತೆಯೇ ಇರುವ ಆಕರ್ಷಣೆಯಾಗಿರುತ್ತದೆ. ಅದು ಏನಿರಬಹುದು ಎನ್ನುವ ಕುರಿತೂ ಕೊಂಚವೂ ವಿಚಾರಿಸದೇ ಅದಕ್ಕೆ ಸಹಜವಾಗಿಯೇ ಆಕರ್ಷಿತಾಗಿರುತ್ತಾರೆ. ಅದು ಏನಿರಬಹುದು? ಏನಿರಬಹುದು? ಅದು ಏನನ್ನು ಪ್ರತಿನಿಧಿಸುತ್ತಿದೆ? ಅದು ಏಕೆ ಹೀಗೆ ಇದೆ? – ಯಾವುದೂ ಇಲ್ಲ – ಯಾವುದೂ ಗೊತ್ತಿಲ್ಲ. ಯಾವುದೇ ಬೌದ್ಧಿಕ ಅಭಿಪ್ರಾಯವಿಲ್ಲದಿದ್ದರೂ, ಅಲ್ಲಿ ಒಂದು ರೀತಿಯ ಸಂವೇಗವಿರುತ್ತದೆ. ಆಕರ್ಷಣೆ ಇರುತ್ತದೆ. ಒಂದು ಅವಶ್ಯಕತೆಯೂ ಇರುತ್ತದೆ. ಇದನ್ನು ತಪ್ಪಿಸಿಕೊಳ್ಳಲೂ ಸಾಧ್ಯವಿಲ್ಲದ ಅವಶ್ಯಕತೆ ಇದಾಗಿರುತ್ತದೆ.

ಯಾರು ಇಂತಹ ಸ್ಥಿತಿಯನ್ನು ಹೊಂದಿದ್ದಾರೆಯೋ, ಒಂದು ವೇಳೆ, ನಾನು ಇದನ್ನು ಆ ದೇವಕೃಪೆಯ ಪರಿಣಾಮವೆಂದು ಹೇಳಿದರೂ, ಅವರು ಎಂದಿಗೂ ತಮಗೆ ತೊಂದರೆ ಕೊಡುವ ಮನಸ್ಸನ್ನು ಮಾತ್ರ ಹೊಂದುವದಿಲ್ಲ. ಯಾವುದನ್ನೂ ಪ್ರಶ್ನಿಸುವದಿಲ್ಲ, ಚರ್ಚಿಸುವದೂ ಇಲ್ಲ. ಅದೂ ಅಲ್ಲದೇ ಅತ್ಯಂತ ತೀವ್ರವಾಗಿ ಚಲಿಸಲೂ ಸಿದ್ಧರಾಗಿರುತ್ತಾರೆ.

ಆಮೇಲೆ ಮತ್ತೆ, ಜನಸಾಮಾನ್ಯರ ವಿಚಾರಗಳ ಪ್ರಕಾರ, ಕೇವಲ ಚಮತ್ಕಾರ–ಪೂರ್ಣವಾಗಿರುವದೆಂದರೆ, ಯಾವಾಗ ಅವರು ಈ ಏಕಾಗ್ರತೆಯ ನಿಗದಿತ ಹಂತವನ್ನು ತಲುಪುತ್ತಾರೆಯೋ, ಅಂದರೆ, ತಮ್ಮ ದೇವ ಸ್ವರೂಪದಲ್ಲಿ ಇರುವ

ಚೈತ್ಯ ಪುರುಷನ ಸಂಗಡ ತಮಗಿರುವ ಸಂಪರ್ಕವನ್ನು ಅನುಭಾವಿಸುತ್ತಾರೆಯೋ, ಆ ಕ್ಷಣವೇ ಅವರು ಅವರ ಸ್ವಭಾವಕ್ಕೆ ಸಂಪೂರ್ಣವಾಗಿ ಅಪರಿಚಿತವಾಗಿರುವ ಅಭಿವ್ಯಕ್ತಿಯನ್ನೂ ಸಹಿತ ಅರ್ಥೈಸಿಕೊಳ್ಳುವಲ್ಲಿ ಸಾಮರ್ಥ್ಯ ಸಂಪನ್ನತೆಯನ್ನು ಪಡೆದುಕೊಳ್ಳುತ್ತಾರೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/394**

**ಎರಡು ಶಕ್ತಿಶಾಲಿ ಸನ್ನೆಗೋಲುಗಳು**

ಇಲ್ಲಿ ಎರಡು ಪ್ರಮುಖ ಸಂಗತಿಗಳಿವೆ. ಯಾವುದೇ ವ್ಯಕ್ತಿಯೂ ಅವನಲ್ಲಿರುವ ಬಲವತ್ತರವಾಗಿರುವ ಅಥವಾ ಅಲ್ಪ ಪ್ರಮಾಣದ ನೈಜತೆಯಿಂದ ತನ್ನಷ್ಟಕ್ಕೆ ತಾನೇ ಹೊರಬಂದು, ಯಾವುದು ತನ್ನನ್ನು ಉತ್ತೇಜಿತಗೊಳಿಸುತ್ತಿರುವದೋ ಅ ಮೂಲಕ ಅವನು ಮುಂದೆ ಸಾಗುವ ಸಾಮರ್ಥ್ಯವನ್ನು ಹೊಂದುವದು ಒಂದು.

ಉದಾಹರಣೆಗೆ, ಒಬ್ಬ ಕಲಾವಿದನು ತನ್ನ ಕಲೆಯ ಅಭಿವ್ಯಕ್ತಿಗೆ, ಓರ್ವ ವಿಜ್ಞಾನಿಯು ತನ್ನ ವಿಜ್ಞಾನದ ಶೋಧನೆಗೆ ಹೇಗೆ ಸದಾ ಕಾಲವೂ ಎಲ್ಲವನ್ನೂ ಎದುರಿಸಿ ಮುನ್ನಡೆಯುತ್ತಿರುತ್ತಾರೆಯೋ, ಆ ರೀತಿಯಲ್ಲಿ ಇದೆ. ಒಟ್ಟಿನಲ್ಲಿ ಸಾಮಾನ್ಯವಾಗಿ, ಯಾರು ಸೃಷ್ಟಿಸಬಲ್ಲರೋ ಅಥವಾ ರಚಿಸಬಲ್ಲರೋ ಅವರಿಗೆ ಪ್ರಾರಂಭವೊಂದು ಇದ್ದೇ ಇರುತ್ತದೆ. ಅದೂ ವಿಶೇಷವಾದ ಸಂಕಾಯವೇ ಆಗಿರುತ್ತದೆ. ವಿಶೇಷವಾಗಿರುವ ಸಾಧ್ಯತೆಗಳನ್ನೂ ಇದು ಹೊಂದಿರುತ್ತದೆ. ಈ ಮೂಲಕ ಅವನಲ್ಲಿ ಉತ್ಸಾಹವನ್ನೂ ತುಂಬುತ್ತದೆ. ಯಾವಾಗ ಇದು ಚಾಲನೆಯಲ್ಲಿ ಇರುವದೋ, ಆಗ ಆ 'ಪ್ರಾಣದಲ್ಲಿ' ವಿಶೇಷವೊಂದು ಜಾಗ್ರತಿಗೊಳ್ಳುತ್ತದೆ. ಮತ್ತೆ ಅಲ್ಲಿ ಘಟಿಸುತ್ತಿರುವುದರ ಹಿನ್ನೆಲೆಯಲ್ಲಿ 'ಜೀವದ' ಸಂಪೂರ್ಣ ಭಾಗವಹಿಸುವಿಕೆಯೂ ಇರುತ್ತದೆ.

ಅಲ್ಲಿರುವ ವಿಷಯವೂ ಇದೇ ಆಗಿದೆ. ಇದಾದ ಮೇಲೆ, ಜನ್ಮಜಾತವಾಗಿರುವ, ಉಪಕೃತಗೊಂಡಿರುವ ಇಂತಹ ಶಕ್ತಿ ಸಂಚಯವನ್ನು ಹೊಂದಿರುವ ಕೆಲವರು ಅಲ್ಲಿರುತ್ತಾರೆ. ಅದಕ್ಕೆ ಪ್ರತಿಸ್ಪಂದಗೊಳ್ಳಲು ಉತ್ಕಟವಾದ ಅಭಿಲಾಷೆಯನ್ನು ಹೊಂದಿದವರು ಅವರಾಗಿದ್ದು, ಅವರೂ ಅಷ್ಟೇ ನಮ್ರರಾಗಿಯೇ, ತೋಷವನ್ನು ತುಂಬಿಕೊಂಡೇ, ಭಕ್ತಿಪೂರ್ವಕವಾಗಿಯೇ ಅದರೊಡನೆ ವ್ಯವಹರಿಸುತ್ತಾರೆ. ಅವರು ಜೀವನದ ಎಲ್ಲ ಘಟನೆಗಳ ಹಿನ್ನೆಲೆಯಲ್ಲಿ ಇಂತಹ ಅದ್ಭುತವೊಂದು ಅಂತರ್ಗತವಾಗಿರುವದನ್ನು ಅನುಭವದಿಂದ ಕಂಡುಕೊಳ್ಳುತ್ತಾರೆ. ಪ್ರತಿಯೊಂದೂ

ಅತ್ಯಂತ ಚಿಕ್ಕ ಚಿಕ್ಕ ಅಂಶಗಳಲ್ಲಿಯೂ ಸಹಿತ, ಅದು ಜೀವನದ ಎಷ್ಟೇ ಅಲ್ಪ ಪ್ರಮಾಣದ ಅಂಶದಲ್ಲಿದ್ದರೂ ಸಹಿತ, ಅವರು ಈ ಸಾರ್ವಭೌಮಿಕ ಸೌಂದರ್ಯವನ್ನು ಅಥವಾ ಅನಂತಾನಂತವಾಗಿರುವ ಕೃಪೆಯನ್ನು ಪ್ರತಿಯೊಂದು ವಸ್ತು–ವಿಷಯದಲ್ಲಿಯೂ, ಅಸ್ತಿತ್ವದಲ್ಲಿ ಇರುವದನ್ನು ಅನುಭಾವಿಸುತ್ತಾರೆ.

ಯಾವುದೇ ಜ್ಞಾನವೂ ಇರದ ಜನರನ್ನೂ ನಾನು ನೋಡಿದ್ದೇನೆ. ಅದಕ್ಕಾಗಿ ಇಲ್ಲಿ ಹೇಳಲೇಬೇಕಾಗಿರುವ ಸಂಗತಿ ಎಂದರೆ, ಯಾವುದೇ ವಿಷಯವಿರಲಿ, ಯಾರು ಕೇವಲ ಶಿಕ್ಷಣವನ್ನು ಮಾತ್ರ ಪಡೆದುಕೊಂಡಿದ್ದಾರೆಯೋ, ಯಾರ ಮನಸ್ಸು ಸದಾ ಜೀವನದ ಅತೀ ಸಾಮಾನ್ಯ ಅಂಶಗಳಿಗೂ ಅಂಟಿಕೊಂಡೇ ಇರುತ್ತದೆಯೋ, ಅವರಲ್ಲಿ ಮೊದಲು ಆ ಉಪಕಾರ (ಔದಾರ್ಯದ) ಸಾಮರ್ಥ್ಯವು ಈ ಮೊದಲು ಇತ್ತೇ, ಆ ಆರ್ದಭಾವದ ಸ್ಪರ್ಶ ಅವರಿಗೆ ಇತ್ತೇ ಎನ್ನುವದನ್ನು ಗಮನಿಸಲೇಬೇಕಾಗಿದೆ. ಅದು ತನ್ನಷ್ಟಕ್ಕೆ ತಾನೇ ದತ್ತವಾಗಿದ್ದರೂ, ಅದನ್ನು ಅರ್ಥೈಸಿಕೊಳ್ಳುವಂತಿದ್ದರೂ, ಅದನ್ನು ಅರಿಯದೇ ಬದುಕುತ್ತಿರುವವರನ್ನು ನಾನು ಬಲ್ಲೆ.

ಇದೆಲ್ಲವೂ ಸರಿ, ಅವರಿಗೆ ಆ ಚೈತ್ಯದ ಜೊತೆಗೆ ಬರುವ ಸಂಪರ್ಕ ಕೇವಲ ಅಪರೂಪಕ್ಕೆ ಎನ್ನುವಂತಿತ್ತು. ಬಹುತೇಕವಾಗಿ ಸ್ಥಿರವಾಗಿದ್ದರೂ ಸಹಿತ, ಮತ್ತೆ ಅವರು ಅದಕ್ಕೆ ಅರ್ಹರಾಗಿರುವ ಸಾಮರ್ಥ್ಯ ಹೊಂದಿದ್ದರೂ ಸಹಿತ, ಪ್ರಜ್ಞಾವಂತರಾಗಿದ್ದರೂ ಸಹಿತ, – ಅಂದರೆ ಸಂಪೂರ್ಣ ಪ್ರಜ್ಞೆಯಲ್ಲ, ಕೊಂಚ ಪ್ರಜ್ಞೆಯನ್ನು ಹೊಂದಿದ್ದರೂ ಆಗಲೂ ಸಹಿತ ಅವರು ಸಹಾಯ ಪಡೆದುಕೊಳ್ಳುತ್ತಿದ್ದೇನೆ, ಉನ್ನತೀಕರಣಗೊಳಿಸಲ್ಪಡುತ್ತಿದ್ದೇನೆ ಅದಕ್ಕಾಗಿಯೇ ಮುಂದೆ ಸಾಗುತ್ತಿದ್ದೇನೆ ಎಂದು ಭಾವಿಸದೇ, – ಅದು ತನ್ನಷ್ಟಕ್ಕೆ ತಾನೇ ನಡೆಯುತ್ತಿದೆ ಅದಕ್ಕಾಗಿ ನಾನು ಇದೆಲ್ಲವನ್ನೂ ಮಾಡುತ್ತಿದ್ದೇನೆ ಎಂದುಕೊಳ್ಳುತ್ತಾರೆ.

ಹೆಚ್ಚಿನ ಜನಸಮುದಾಯವು ಈ ಸಂಗತಿಗಳಿಗೇ ಸಿದ್ಧಗೊಂಡಿರುತ್ತಾರೆ. ಅವರು ಯಾವುದೋ ಒಂದನ್ನು ಅಥವಾ ಮತ್ತೊಂದನ್ನೋ ಆಯ್ಕೆ ಮಾಡಿಕೊಂಡೇ ಜನಿಸಿರುತ್ತಾರೆ. ಒಂದು ವೇಳೆ ಅವರು ಶ್ರಮಪಟ್ಟಲ್ಲಿ, ಆ ಶಕ್ತಿಯು ಕ್ರಮೇಣ ಅವರಲ್ಲಿ ಪ್ರಗತಿ ಹೊಂದುತ್ತಾ ಹೋಗುತ್ತದೆ.

ನಾನು ಹೇಳುವದಿಷ್ಟೇ – ಉತ್ಸಾಹಕ್ಕಾಗಿ ಇರುವ ಸಾಮರ್ಥ್ಯ, ಯಾವುದು ನಿಮ್ಮನ್ನು ಈ ದುಃಖದಾಯಕ ಸಂಗತಿಗಳಿಂದ ದೂರ ಮಾಡುತ್ತದೆಯೋ ಹಾಗೂ ಅಲ್ಲಿರುವ ಅಲ್ಪ ಪ್ರಮಾಣದ ಅಹಂಕಾರವನ್ನೂ ತೆಗೆದು ಹಾಕುತ್ತದೆಯೋ, ಮತ್ತೆ ಉಪಕಾರದ ಉದಾರತೆಯಿಂದಾಗಲೀ, ಕೃತಜ್ಞತೆಯ ಔದಾರ್ಯವಾಗಲಿ, ಇವೂ

ಸಹಿತ ಉಪಕಾರ ಸ್ಮರಣೆಯ ಮೂಲಕವೇ ನಿಮ್ಮಲ್ಲಿರುವ ಅಲ್ಪ–ಸ್ವಲ್ಪವಾಗಿರುವ ಅಹಂಕಾರವನ್ನು ಕಿತ್ತೆಸೆಯುತ್ತವೆ.

ಇವು ಎರಡೂ ಅತ್ಯಂತ ಶಕ್ತಿಯುತವಾದ ಸನ್ನೆಗೋಲುಗಳಾಗಿದ್ದು, ಇವುಗಳ ಮೂಲಕವೇ ಚೈತ್ಯ ಪುರುಷನ ಮೂಲಕ ದಿವ್ಯತ್ವದ ಜೊತೆಗೆ ಸಂಪರ್ಕ ಸಾಧಿಸಿಕೊಳ್ಳಬಹುದಾಗಿದೆ. ಇದು ಚೈತ್ಯ ಪುರುಷನ ಸಂಗಡ ಸಂಪರ್ಕ ಜೋಡಿಸುವ ಒಂದು ಖಚಿತವಾದ ಕೊಂಡಿಯೂ ಆಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/418–19**

## ಚೈತ್ಯದ ವಿಕಸನಕ್ಕೆ ಅವಶ್ಯವಿರುವ ನಿಬಂಧನೆಗಳು

ಅದರೊಡನೆ ಇರುವ ಸಂಪರ್ಕವನ್ನು ಬಲವತ್ತರಗೊಳಿಸಿಕೊಳ್ಳಲು ಮತ್ತೂ ಮತ್ತೂ ಅದರ ಸಹಾಯವನ್ನು ಪಡೆದುಕೊಳ್ಳಲು ಒಂದೊಮ್ಮೆ ಸಾಧ್ಯವಾದಲ್ಲಿ, ಈ ಚೈತ್ಯದ ಪ್ರಜ್ಞಾವಂತಿಕೆಯ ವ್ಯಕ್ತಿತ್ವವನ್ನು ಪ್ರಗತಿಗೊಳಿಸಿಕೊಳ್ಳಲು, ಪ್ರತಿಯೊಬ್ಬರೂ ಕಡ್ಡಾಯವಾಗಿಯೇ – ಅದರಲ್ಲೂ ಏಕಾಗ್ರತೆಯನ್ನು ಸಾಧಿಸಿಕೊಳ್ಳುತ್ತಿರುವಾಗ, ಅದರೆಡೆಗೆ ತಮ್ಮ ಲಕ್ಷ್ಯವನ್ನೂ ನೀಡುತ್ತಿರುವ, ಅದನ್ನು ಅರಿತುಕೊಳ್ಳಲು ಅಭೀಪ್ಸೆ ಹೊಂದಿದಾಗ, ಅದನ್ನು ಅನುಭಾವಿಸಿದಾಗ, ಅದರಿಂದ ಆಗಮಿಸುವ ಪ್ರಭಾವವನ್ನು ಸ್ವೀಕರಿಸಲು ತನ್ನಲ್ಲಿ ತಾನೇ ಮುಕ್ತಗೊಳ್ಳಬೇಕಾಗಿದೆ. ಅಲ್ಲಿ ಅತ್ಯಂತ ಮುಖ್ಯವಾಗಿ ಹೆಚ್ಚಿನ ಕಾಳಜಿಯನ್ನು ತೆಗೆದುಕೊಳ್ಳಬೇಕಾಗಿದೆ. ಪ್ರತಿ ಬಾರಿಯೂ – ಅದು ಯಾರೇ ಆಗಿರಲಿ ಅದರಿಂದ ಸಂಕೇತವನ್ನು ಸ್ವೀಕರಿಸಿದಾಗ, ಅದನ್ನು ಅನುಸರಿಸುವ ಸಲುವಾಗಿ ಸರಳಾತಿಸರಳವಾಗಿರಬೇಕು ಹಾಗೂ ಪ್ರಾಮಾಣಿಕರೂ ಆಗಿರಬೇಕು.

ಇಂತಹ ಮಹತ್ತರವಾದ ಅಭೀಪ್ಸೆಯೊಂದಿಗೆ ಜೀವಿಸಲು, ಮೊದಲು ಅಂತರಂಗಿಕವಾಗಿ ಪ್ರಶಾಂತಗೊಳ್ಳುವದರ ಬಗೆಗೆ ಕಾಳಜಿ ವಹಿಸಬೇಕು. ಅದೂ ಅಲ್ಲದೇ ಅದೇ ಮನೋಭಾವನೆಯಲ್ಲಿಯೇ ಎಷ್ಟು ಕಾಲ ಇರಲು ಸಾಧ್ಯವೋ ಅಷ್ಟು ಕಾಲವೂ ಇರಲು ಯತ್ನಿಸಬೇಕು. ಪರಿಪೂರ್ಣ ಪ್ರಾಮಾಣಿಕತೆಯನ್ನು ರೂಢಿಸಿಕೊಳ್ಳಬೇಕು. ಅದು ಎಲ್ಲ ಚಟುವಟಿಕೆಗಳಲ್ಲಿಯೂ – ಅಂದರೆ ಈ ಜೀವಿಯ ಎಲ್ಲ ಅಭಿವ್ಯಕ್ತಿಗಳಲ್ಲಿಯೂ ಪ್ರಕಟಗೊಳ್ಳುವಂತಿರಬೇಕು. ಇವೇ ಈ ಚೈತ್ಯ ಪುರುಷನ ಪ್ರಗತಿಗೆ ಅತ್ಯಾವಶ್ಯವಾಗಿರುವ ನಿಬಂಧನೆಗಳಾಗಿವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/222**

**ಪೂರ್ಣ–ಅರಿವಿನ ಇಚ್ಛೆಯನ್ನು ಬಳಸಿಕೊಳ್ಳಿ**

ಈ ಚೈತ್ಯ ಪುರುಷನು ಪ್ರಗತಿಶೀಲನೂ ಅಮರನೂ ಆಗಿದ್ದಾನೆ.

ಸ್ವಯಂ ಜ್ಞಾನದ, ಸ್ವನಿಯಂತ್ರಣದ ಹಾಗೂ ಸ್ವಸಾಮರ್ಥ್ಯದಲ್ಲಿ ಗಳಿಸಿದ ಪ್ರಭುತ್ವದಿಂದ ರೂಪಿಸಿಕೊಂಡ ಎಲ್ಲ ವಿಧಾನಗಳೂ ಉತ್ತಮವೇ ಆಗಿರುತ್ತವೆ. ನೀವು ನಿಮಗೆ ಅತ್ಯಂತ ಸುಲಭವಾಗಿ ಹಾಗೂ ಅತ್ಯಂತ ಸ್ವಾಭಾವಿಕವಾಗಿ ನಿಮ್ಮ ಬಳಿಗೆ ಬರುವ ಹಾಗೂ ನಿಮ್ಮ ಸ್ವಭಾವದೊಂದಿಗೆ ಸ್ಪಂದಿಸುವದನ್ನೇ ಆಯ್ಕೆ ಮಾಡಿಕೊಳ್ಳಬೇಕು. ಆಗ ನೀವು ನಿಮ್ಮ ಪೂರ್ಣ ಅರಿವಿನ ಇಚ್ಛೆಯನ್ನು ಎಂದಿಗೂ ವಿಫಲಗೊಳಿಸಿಕೊಳ್ಳದ ಹಾಗೆ ಸಂರಕ್ಷಣೆಯಲ್ಲಿ ಇರಿಸಿಕೊಳ್ಳಲು ಸಾಧ್ಯವಾಗುತ್ತದೆ. ಮತ್ತೆ ಅದು ಎಂದಿಗೂ ಉಡುಗಿ ಹೋಗದ ಹಾಗೆ, ಯಾವುದೇ ಅಡೆ–ತಡೆಗೆ ಸಿಲುಕಿ ಕುಂಠಿತಗೊಳ್ಳದ ಹಾಗೆ ಉಪಯೋಗಿಸಬೇಕಾಗುತ್ತದೆ.

ಇದು ದೀರ್ಘಾವಧಿಯನ್ನು ಬಯಸುವದೂ ಹೌದು. ಅಲ್ಲದೇ ತಕ್ಷಣದಲ್ಲಿಯೇ ಘಟಿಸುವ ಹಾಗೆಯೂ ಇರಬಹುದು. ಆದರೆ ಅತ್ಯಂತ ಪ್ರಾಮಾಣಿಕತೆಯಿಂದ ಹಾಗೂ ಅವರಿತವಾದ ಕ್ರಿಯೆಯಿಂದ ಮತ್ತು ಪ್ರಾಮಾಣಿಕತೆಯನ್ನು ಮತ್ತೂ ಮತ್ತೂ ಘನಿಷ್ಠಗೊಳಿಸುತ್ತ ಸಾಗುವದರ ಮೂಲಕ, ಸೂಕ್ಷ್ಮಗೊಳಿಸುವ ಮೂಲಕ ಸಮಗ್ರಗೊಳಿಸಿಕೊಳ್ಳಬೇಕು.

ಇದಕ್ಕಾಗಿ ಅತ್ಯಂತ ಸುಲಭವಾದ ಮಾರ್ಗಗಳು ಎಲ್ಲಿಯೂ ರೂಪಿಸಲ್ಪಟ್ಟಿಲ್ಲ.

*

ಒಂದು ದುಷ್ಟ ಜೀವನ ಹಾಗೂ ಒಂದೇ ಒಂದು ನೆಲೆಯ ಮಾತ್ರ ಈ ರೀತಿಯಲ್ಲಿ ಬಾಹ್ಯದ ಬದುಕಿಗೆ ಅಂಟಿಕೊಂಡಿರುವ ಜೀವಿಯು (ಜೀವನವು) ಆ ಚೈತ್ಯಾತ್ಮನಿಂದ ವಿಭಜನೆಗೊಂಡು ದೂರವೇ ಉಳಿಯುತ್ತದೆ. ಚೈತನ್ಯದ ಆ ಔನ್ನತ್ಯದ ಹಂತದಲ್ಲಿ ಈ ಬಾಹ್ಯ–ಜೀವನವು ತನ್ನ ಗತಿಯಿಂದ ದೂರವಾಗಿ ಬಿಡುತ್ತದೆ. ಅದರ ಆಳವನ್ನು ಅರ್ಥೈಸಿಕೊಳ್ಳುವ ಸಾಮರ್ಥ್ಯವನ್ನು ಕಳೆದುಕೊಂಡು, ನಿವೃತ್ತಿ ಹೊಂದುತ್ತದೆ. ಒಮ್ಮೊಮ್ಮೆ ದೇಹದೊಡನೆ ಇರುವ ಎಲ್ಲ ಸಂಪರ್ಕವನ್ನೂ ಕತ್ತರಿಸಿಕೊಂಡು ಬಿಡುತ್ತದೆ, ಅಂತಹ ಸಮಯದಲ್ಲಿಯೇ ಅಲ್ಲಿ ದುಷ್ಟತನದ ಅಥವಾ ರಾಕ್ಷಸೀಯ–ಅಸುರೀಯ ಗುಣವು ತನ್ನ ಸ್ವಾಧೀನಕ್ಕೆ ಎಲ್ಲವನ್ನೂ ತೆಗೆದುಕೊಂಡು ಬಿಡುತ್ತದೆ.

ಇಂತಹ ಅವನತಿಗೊಳ್ಳುವ ಎಲ್ಲ ಹಂತದಿಂದಲೂ ಸಹಿತ ಈ ಚೈತ್ಯಾತ್ಮವು ಸದಾ ಊರ್ಧ್ವದಲ್ಲಿಯೇ ಇರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/246–47**

"ಅಭೀಪ್ಸೆ, ನಿರಂತರತೆ, ಸ್ಥಿರತೆ ಮತ್ತು ಪ್ರಾಮಾಣಿಕತೆ ಜೊತೆಗೆ ದೈವತ್ವದೆಡೆಗೇ ಗಮನಸವಿರಿಸಿ ಸದಾ ಸಾಗುತ್ತಿರುವದೇ ಇಲ್ಲಿ ಪ್ರಮುಖವಾಗಿರುವ ಮಾರ್ಗಗಳಾಗಿವೆ. ಈ ಮೂಲಕವೇ ಚೈತ್ಯವನ್ನು ವಿಕಾಸಗೊಳಿಸಬಹುದಾಗಿದೆ."

ಅದಕ್ಕಾಗಿ ಪ್ರತಿದಿನದಲ್ಲಿಯೂ ನೀವು ಯಾವಾಗ ಒತ್ತಡದಿಂದ ಬಿಡುಗಡೆ ಹೊಂದಿರುತ್ತೀರೋ, ಹಾಗೂ ದೈನಂದಿನ ಯಾವುದೇ ಚಟುವಟಿಕೆಗಳ ಕಾರಣದಿಂದಾಗಿ ಅಸ್ತವ್ಯಸ್ತವಾಗದಂತೆ ಇರುವ ಒಂದು ನಿಗದಿತವಾದ ಸಮಯವನ್ನು ಗುರುತಿಸಿಕೊಳ್ಳಿ. ನಿರ್ಧರಿಸಿಕೊಳ್ಳಿ. ಅತ್ಯಂತ ಆರಾಮವಾಗಿರುವ ಭಂಗಿಯಲ್ಲಿಯೇ ಕುಳಿತುಕೊಳ್ಳಿ. ನಿಮ್ಮ ಚೈತ್ಯಾತ್ಮದ ಕುರಿತು ಚಿಂತನ ಪ್ರಾರಂಭಿಸಿ. ಅದೂ ಈ ಚೈತ್ಯಾತ್ಮದೊಂದಿಗೆ ಸಂಪರ್ಕ ಸಾಧಿಸುವ ಅಭೀಪ್ಸೆಯಾಗಿರುವ ಹಾಗೆ ನಿಮ್ಮ ಚಿಂತನಗಳು ಇರಲಿ.

ಒಂದೊಮ್ಮೆ ನೀವು ತಕ್ಷಣವೇ ವಿಜಯ ಸಾಧಿಸದೇ ಇದ್ದರೂ, ಯಾವುದೇ ಕಾರಣಕ್ಕೂ ಅಧೈರ್ಯಗೊಳ್ಳಬೇಡಿ. ನೀವು ಒಂದಲ್ಲ ಒಂದು ದಿನ ಈ ವಿಜಯವನ್ನು ಸಾಧಿಸುವದು ಶತಃಸಿದ್ಧವಾಗಿದೆ.

ನಾನು ಕೇಳಿಕೊಳ್ಳುವದು ಇಷ್ಟೇ, – ನೀವು ನಿಮ್ಮ ಸಲುವಾಗಿ ಯಾವ ಸಮಯವನ್ನು ನಿಗದಿ ಪಡಿಸಿಕೊಳ್ಳುತ್ತೀರೋ ಎನ್ನುವದು ನನಗೂ ತಿಳಿದಿರಲಿ. ಆಗ ಮಾತ್ರ ನಾನು ಇನ್ನೂ ಹೆಚ್ಚಿನ ಪ್ರಜ್ಞೆಯ ಸ್ಪಂದನದೊಂದಿಗೆ ನಿಮಗೆ ಸಹಾಯ ಮಾಡಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 17/363 – ಶ್ರೀಮಾತೆ**

ಅಹಂಕಾರ ಕೇಂದ್ರದ ಮನೋಭಾವವು ಹೆಚ್ಚಿನ ಪ್ರಮಾಣದಲ್ಲಿ ನಿಯಂತ್ರಿತಗೊಂಡು ನಶಿಸಿಹೋಗುವದೋ, ಅದು ಕರಗಿಹೋಗುತ್ತದೆಯೋ, ಮತ್ತು ಅದೇ ಸಮಯಕ್ಕೆ ಶ್ರೀಮಾತೆಯ ವಿಷಯದಲ್ಲಿ ಭಕ್ತಿಯೂ ಸಹಿತ ಬಲವತ್ತರವಾಗುತ್ತ ಪ್ರಗತಿ ಹೊಂದುತ್ತದೆಯೋ, ಆಗ ಅದೇ ಈ ಚೈತ್ಯಾತ್ಮನ ಕೇಂದ್ರವನ್ನು ನೇರವಾಗಿ

ಪ್ರಕಾಶನಗೊಳಿಸಿಕೊಳ್ಳಬಹುದು. ಇಲ್ಲಿ ಆಧ್ಯಾತ್ಮಿಕ ನಮ್ರತೆ, ಶರಣಾಗತಿಯ ಭಾವ ಹಾಗೂ ಅವಲಂಬನಗಳು ಅತ್ಯಾವಶ್ಯಕವಾಗಿರುತ್ತವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/163**

ಚೈತ್ಯವನ್ನು ಎಷ್ಟು ಪ್ರಗತಿಗೊಳಿಸಿಕೊಳ್ಳುತ್ತೀರೋ, ಆ ಕೃಪೆಯ ಲೀಲೆ ಅಭಿವ್ಯಕ್ತಗೊಳ್ಳಲು ಅಲ್ಲಿಯೇ ಹೆಚ್ಚಿನ ಅವಕಾಶವಿರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/166** – ಶ್ರೀ ಅರವಿಂದರು



ಈ ಚೈತ್ಯ ಪುರುಷನನ್ನು ಎಲ್ಲ ಗವಸುಗಳಿಂದಲೂ ಹೊರ ತಂದು, ಮುಕ್ತಗೊಳಿಸಿದಾಗ ಅದೇ ಆ ಪೂರ್ಣಯೋಗದ ನಿರ್ಣಾಯಕ ಘಳಿಗೆಯಾಗಿರುತ್ತದೆ. ಆಗ ಅಲ್ಲಿ ದಿವ್ಯತ್ವದ ಧಾರೆ–ಧಾರೆಗಳು ಪ್ರವಾಹೋಪಾದಿಯಲ್ಲಿ ಆಗಮಿಸುತ್ತವೆ. ಅಲ್ಲಿ ದಿವ್ಯತ್ವವು ಸದಾ ಪ್ರವಹಿಸುತ್ತಲೇ ಇರುತ್ತದೆ. ಮನಸ್ಸು, ಜೀವನ ಮತ್ತು ದೇಹದ ಪ್ರತಿಯೊಂದೂ ಸ್ಪಂದನವನ್ನೂ ಹಾಗೂ ದರ್ಶನವನ್ನೂ ಕಾಣಬಹುದು. ಈ ಮೂಲಕ ಈ ಭೂ–ಬದುಕಿನ ಸ್ವಭಾವದಲ್ಲಿ ಊರ್ಧ್ವಮುಖೀ ಪ್ರಗತಿಗೆ ಸಿದ್ಧಗೊಳ್ಳುವದು ಪ್ರಾರಂಭಗೊಳ್ಳುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/150 – ಶ್ರೀ ಅರವಿಂದರು**

# ಚೈತ್ಯದ ಉಗಮ

– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ

**ಸಾಧನೆಯ ಎರಡು ಪ್ರಮುಖ ಅಡಿಪಾಯಗಳು**

ಸಾಧನೆಯ ಅಡಿಪಾಯಗಳನ್ನಾಗಿ ಎರಡು ಪ್ರಮುಖ ವಿಷಯಗಳನ್ನು ಹೊಂದಬೇಕಾಗಿದೆ – ಒಂದು, ಚೈತ್ಯ ಪುರುಷನ ತೆರೆದುಕೊಳ್ಳುವಿಕೆ ಮತ್ತು ಎರಡು, ಮೇಲಿರುವ ಆತ್ಮನನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದು. ಚೈತ್ಯ ಪುರುಷನ ತೆರೆದುಕೊಳ್ಳುವಿಕೆಗೆ ಇರುವ ನೇರ ಮಾರ್ಗಗಳೆಂದರೆ, ಶ್ರೀಮಾತೆಯವರ ಮೇಲೆ ಏಕಾಗ್ರತೆ ಮತ್ತು ಅವರಿಗೆ ಅರ್ಪಿಸಿಕೊಳ್ಳವುದು. ನೀವು ಅನುಭವಿಸುವ ಭಕ್ತಿಯ ಬೆಳವಣಿಗೆಯು 'ಚೈತ್ಯ' ನ ವಿಕಸನದ ಪ್ರಥಮ ಲಕ್ಷಣ. ಶ್ರೀಮಾತೆಯವರ ಉಪಸ್ಥಿತಿಯ ಅಥವಾ ಅವರ ಪ್ರಭಾವದ ಭಾವನೆ ಅಥವಾ ನಿಮ್ಮನ್ನು ಅವರು ಬೆಂಬಲಿಸುವ ಮತ್ತು ಬಲಪಡಿಸುವಿಕೆಯ ಸ್ಮರಣೆಯು ಮುಂದಿನ ಲಕ್ಷಣ. ಪರಿಣಾಮವಾಗಿ, ಮನಸ್ಸನ್ನು ಸರಿಯಾದ ಯೋಚನೆಗಳೆಡೆಗೆ, ಪ್ರಾಣವನ್ನು ಸರಿಯಾದ ಚಲನೆಗಳೆಡೆಗೆ ಮತ್ತು ಅನಿಸಿಕೆಗಳೆಡೆಗೆ ಮಾರ್ಗದರ್ಶನ ಮಾಡುತ್ತ ಯಾವುದೆಲ್ಲವನ್ನು ದೂರವಿಡಬೇಕೊ ಅದನ್ನು ತೋರಿಸುತ್ತ ಮತ್ತು ತಿರಸ್ಕರಿಸುತ್ತ ಮತ್ತು ಅಖಂಡ ಜೀವಿಯನ್ನು (ಅಸ್ತಿತ್ವವನ್ನು) ದೇವರೆಡೆಗೆ ಮಾತ್ರ ತಿರುಗಿಸುತ್ತ ಅಂತರಾತ್ಮನು ಆಕಾಂಕ್ಷೆಯಲ್ಲಿ ಮತ್ತು 'ಚೈತ್ಯ'ನ ಅರಿವಿನಲ್ಲಿ ಕ್ರಿಯಾಶೀಲನಾಗಲು ಪ್ರಾರಂಭಿಸುತ್ತಾನೆ. ಸಾಕ್ಷಾತ್ಕಾರಕ್ಕಾಗಿ ಬೇಕಾದ ಪ್ರಥಮ ನಿಯಮಗಳೆಂದರೆ, ಮನಸ್ಸಿನ ಶಾಂತತೆ ಮತ್ತು ಮೌನ. ನಂತರದಲ್ಲಿ, ದಿವ್ಯತೆಯೊಂದಿಗೆ ಒಂದಾಗಿ ಅಥವಾ ಒಟ್ಟಾಗಿ, ಎಲ್ಲೆಡೆಯಲ್ಲೂ ಮತ್ತು ಎಲ್ಲದರಲ್ಲೂ ಅಸ್ತಿತ್ವದಲ್ಲಿರುತ್ತ, ಯಾವುದರಿಂದಲೂ ಅಥವಾ ಎಲ್ಲ ವಿಷಯಗಳಿಂದಲೂ ಸ್ಪರ್ಶವಿಲ್ಲದೆ, ಪ್ರಜ್ಞೆಯ ಶಾಂತತೆಯಲ್ಲಿ, ಮೌನದಲ್ಲಿ ಇರುವುದಕ್ಕಾಗಿ ಬಿಡುಗಡೆಯನ್ನು, ಸ್ವಾತಂತ್ರತೆಯನ್ನು, ವಿಶಾಲತೆಯನ್ನು ಅನುಭವಿಸಲು ಪ್ರಾರಂಭಿಸುತ್ತಾನೆ. ಅಂತರ್‌ದೃಷ್ಟಿಯ ಅರಳುವಿಕೆ, ಒಳಗಡೆ ಪ್ರಭಾವವು ಕೆಲಸ ಮಾಡುವ ಅನುಭವ ಮತ್ತು ಚಟುವಟಿಕೆಗಳ ವಿವಿಧ ಚಲನೆಗಳು ಹಾಗೂ ವೈವಿಧ್ಯಗಳು ಮತ್ತು ಇತ್ಯಾದಿಗಳಂತಹ ಅನುಭವಗಳು ಪಥದಲ್ಲಿ ಬರುತ್ತವೆ ಅಥವಾ ಬರಬಹುದು. ಪ್ರಜ್ಞೆಯ ಆರೋಹಣಗಳ ಮತ್ತು ಮೇಲಿನಿಂದ ಪ್ರಭಾವದ, ಶಾಂತಿಯ, ಆನಂದದ ಅಥವಾ ಬೆಳಕಿನ ಅವರೋಹಣಗಳ ಅರಿವು ಕೂಡ ಆಗಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/320**

## ಪ್ರಾಮಾಣಿಕ ಸ್ವಯಂ–ಕೊಡುವಿಕೆ

ಸಾಧಕನು ತನ್ನ ಸಾಧನೆಯಿಂದ ಪ್ರೇರಣೆಗಳ ಮಿಶ್ರಣದಿಂದ ವಿಮುಕ್ತಿ ಹೊಂದಿದ ಮೇಲೆಯೇ ಚೈತ್ಯ ಪುರುಷನು ಪೂರ್ಣವಾಗಿ ತೆರೆದುಕೊಳ್ಳುತ್ತಾನೆ ಮತ್ತು ಶ್ರೀಮಾತೆಯವರಿಗೆ ಸರಳವಾಗಿ ಹಾಗೂ ಪ್ರಾಮಾಣಿಕವಾಗಿ ತನ್ನನ್ನು ಅರ್ಪಿಸಿಕೊಳ್ಳಲು ಶಕ್ತನಾಗುತ್ತಾನೆ. ಒಂದು ವೇಳೆ ಅಲ್ಲಿ ಯಾವುದೇ ಪ್ರಕಾರದ ಅಹಂಕಾರಿಕ ಬದಲಾವಣೆ ಅಥವಾ ಪ್ರೇರಣೆಯ ಅಪ್ರಾಮಾಣಿಕತೆ ಇದ್ದರೆ, ಒಂದು ವೇಳೆ ಪ್ರಾಮಾಣಿಕ ಬೇಡಿಕೆಗಳ ಒತ್ತಡದಲ್ಲಿ ಅಥವಾ ಕೆಲ ಆಧ್ಯಾತ್ಮಿಕ ಅಥವಾ ಬೇರೆ ಆಕಾಂಕ್ಷೆ, ಅಭಿಮಾನ, ಪ್ರತಿಷ್ಠೆಗಳನ್ನು ಭಾಗಶಃ ಇಲ್ಲವೆ ಪೂರ್ಣವಾಗಿ ತೃಪ್ತಿಪಡಿಸುವುದಕ್ಕಾಗಿ, ಅಥವಾ ಅಧಿಕಾರ, ಸ್ಥಾನಮಾನ ಹೊಂದಲು ಅಥವಾ ಬೇರೆಯವರ ಮೇಲೆ ಪ್ರಭಾವ ಬೀರಲು ಯೋಗವನ್ನು ಮಾಡಿದರೆ ಅಥವಾ ಯೋಗದ ಶಕ್ತಿಯ ಸಹಾಯದಿಂದ ಪ್ರಾಣದ ಕಾಮನೆಗಳನ್ನು ತೃಪ್ತಿಪಡಿಸುವ ಹೆಬ್ಬಯಕೆ ಇದ್ದರೆ ಆಗ ಚೈತ್ಯನು ತೆರೆದುಕೊಳ್ಳುವುದಿಲ್ಲ, ಅಥವಾ ಭಾಗಶಃ ತೆರೆದುಕೊಳ್ಳುತ್ತಾನೆ ಅಥವಾ ಕೆಲಸಮಯ ತೆರೆದುಕೊಂಡು ಮತ್ತೆ ಮುಚ್ಚುತ್ತದೆ, ಕಾರಣವೇನೆಂದರೆ, ಅದು ಪ್ರಾಣಿಕ ಚಟುವಟಿಕೆಗಳಿಂದ ಮರೆ ಮಾಡಲ್ಪಟ್ಟಿದೆ; ಚೈತ್ಯನು, ಅಗ್ನಿಯು ದಮನಮಾಡುವ ಪ್ರಾಣದ ಧೂಮದಲ್ಲಿ ವಿಫಲನಾಗುತ್ತಾನೆ. ಒಂದು ವೇಳೆ ಮನಸ್ಸು ಯೋಗದಲ್ಲಿ ನಿರ್ದೇಶಿಸುವ ಪಾತ್ರವನ್ನು ಹೊಂದಿದರೆ ಮತ್ತು ಅಂತರಾತ್ಮನನ್ನು ಹಿನ್ನೆಲೆಯಲ್ಲಿ ಇಟ್ಟರೆ ಅಥವಾ ಒಂದು ವೇಳೆ ಭಕ್ತಿಯ ಅಥವಾ ಸಾಧನೆಯ ಇತರೆ ಚಲನೆಗಳು ಚೈತ್ಯ ರೂಪಕ್ಕಿಂತ ಹೆಚ್ಚು ಪ್ರಾಣದ ರೂಪವನ್ನು ಪಡೆದರೆ, ಆಗಲೂ ಸಹ ಅದೇ ಅಸಾಮರ್ಥ್ಯ ಇರುತ್ತದೆ. ಶುದ್ಧತೆ, ಸರಳ ಪ್ರಾಮಾಣಿಕತೆ ಮತ್ತು ಬೆರಕೆಯಾಗದ, ಅಹಂಕಾರರಹಿತ ಸಾಮರ್ಥ್ಯದಿಂದ ಆಡಂಬರವಿಲ್ಲದ ಅಥವಾ ಬೇಡಿಕೆ ಇಲ್ಲದ ಸ್ವಯಂ ಸಮರ್ಪಣೆ ಚೈತ್ಯ ಪುರುಷನ ಸಂಪೂರ್ಣ ಅರಳುವಿಕೆಗೆ ಬೇಕಾದ ಷರತ್ತುಗಳು.

*

ಚೈತ್ಯ ಪುರುಷನನ್ನು ಮುನ್ನೆಡೆಗೆ ತರುವುದಕ್ಕಾಗಿ ಯಾವುದೇ ಅನುಮೋದಿತ ವಿಧಾನವಿಲ್ಲ. ಅದು ಅಭೀಪ್ಸೆ, ನಂಬಿಕೆಯ ಬೆಳವಣಿಗೆ ಮತ್ತು ಭಕ್ತಿಯ ಮೇಲೆ, ಮಾನಸಿಕ ಮತ್ತು ಪ್ರಾಣಿಕ ಅಹಂಗಳ ಕುಂದುವಿಕೆಯ ಮೇಲೆ ಮತ್ತು ಅವುಗಳ ಚಲನೆಗಳ ಮೇಲೆ ಅವಲಂಬಿತವಾಗಿದೆ. ಈ ಬೆಳವಣಿಗೆಯಲ್ಲಿ ಒಂದು ನಿರ್ದಿಷ್ಟ ಬಿಂದುವಿನಲ್ಲಿ ಚೈತ್ಯನ ಮತ್ತು ಉಳಿದ ಪ್ರಕೃತಿಯ ಮಧ್ಯದ ಪರದೆ ತೆಳುವಾಗಿ

ಹರಿಯಲು ಪ್ರಾರಂಭಿಸುತ್ತದೆ, ಚೈತ್ಯನು ಆಗ ಹೆಚ್ಚು ಹೆಚ್ಚು ಗೋಚರಿಸುತ್ತಾನೆ ಮತ್ತು ಸಕ್ರಿಯನಾಗುತ್ತಾನೆ, ಕೊನೆಗೆ ಅಧಿಕಾರವನ್ನು ವಶಕ್ಕೆ ತೆಗೆದುಕೊಳ್ಳುತ್ತಾನೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/349, 360**

*ಒಂದು ವೇಳೆ ಕಾಮನೆಯನ್ನು ತಿರಸ್ಕರಿಸಿದರೆ ಮತ್ತು ಅದು ವಿಚಾರಗಳ, ಅನಿಸಿಕೆಗಳ ಹಾಗೂ ಕ್ರಿಯೆಗಳ ಮೇಲೆ ಪ್ರಭಾವ ಬೀರದಿದ್ದರೆ, ಮತ್ತು ಸಂಪೂರ್ಣ ಸಮರ್ಪಣೆಗಾಗಿ ಹಂಬಲವಿದ್ದರೆ, ಒಂದು ಸಮಯದ ನಂತರ ಚೈತ್ಯನು ಸ್ವಯಂ ಆಗಿ ತೆರೆದುಕೊಳ್ಳುತ್ತಾನೆ.*

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/349 – ಶ್ರೀ ಅರವಿಂದರು**

**ನಿಸ್ವಾರ್ಥ, ಲೆಕ್ಕಾಚಾರವಿಲ್ಲದ ಚಲನೆ (ಚಟುವಟಿಕೆ)**

ವಿಶ್ವದಲ್ಲಿ, ನಿಸ್ವಾರ್ಥ, ಲೆಕ್ಕಾಚಾರವಿಲ್ಲದ ಚಲನೆಯು ಅತ್ಯಂತ ಸುಂದರವಾದ ಚೈತ್ಯ ಪ್ರಜ್ಞೆಯ ಸ್ವರೂಪಗಳಲ್ಲಿ ಒಂದು. ಆದರೆ, ಮಾನಸಿಕ ಚಟುವಟಿಕೆಗಳ ಶ್ರೇಣಿಯಲ್ಲಿ ಮೇಲೇರಿದರೆ ಅದು ದುರ್ಲಭವಾಗುತ್ತದೆ. ಬುದ್ಧಿವಂತಿಕೆಯಿಂದ ಎಲ್ಲ ಕೌಶಲ್ಯ ಮತ್ತು ಚತುರತೆ ಮತ್ತು ಭ್ರಷ್ಟಾಚಾರತನ, ಲೆಕ್ಕಾಚಾರ ಬರುತ್ತದೆ. ಉದಾಹರಣೆಗಾಗಿ, ಒಂದು ಗುಲಾಬಿಯು ಅರಳಿದಾಗ, ತಾನು ಸುಂದರವಾಗಿರುವ ಸಂತಸದಿಂದ ತನ್ನ ಪರಿಮಳವನ್ನು ಬೀರುತ್ತ, ತನ್ನ ಇರುವಿಕೆಯ ಎಲ್ಲ ಆನಂದವನ್ನು ವ್ಯಕ್ತಮಾಡುತ್ತ ಸ್ವಾಭಾವಿಕವಾಗಿ ಅರಳುತ್ತದೆ, ಮತ್ತು ಅದು ಲೆಕ್ಕಹಾಕುವುದಿಲ್ಲ, ಅದರಿಂದ ಅದು ಪಡೆದುಕೊಳ್ಳಬೇಕಾದ್ದು ಏನೂ ಇಲ್ಲ ತನ್ನ ಇರುವಿಕೆಯ ಮತ್ತು ಅಸ್ತಿತ್ವದ ಆನಂದದಲ್ಲಿ ಅದು ಸ್ವಾಭಾವಿಕವಾಗಿ ತನ್ನ ಕೆಲಸವನ್ನು ಮಾಡುತ್ತದೆ. ಮಾನವ ಜೀವಿಯನ್ನು ತೆಗೆದುಕೊಳ್ಳೋಣ, ಕೆಲವೊಂದನ್ನು ಹೊರತುಪಡಿಸಿದರೆ, ಅವನ ಮನಸ್ಸು ಕ್ರಿಯಾಶೀಲವಾದ ಕ್ಷಣದಿಂದ ಅವನು ತನ್ನ ಜಾಣತನದಿಂದ ಮತ್ತು ಸೌಂದರ್ಯದಿಂದ ಕೆಲವು ಅನುಕೂಲಗಳನ್ನು ಪಡೆದುಕೊಳ್ಳಲು ಪ್ರಯತ್ನಿಸುತ್ತಾನೆ; ಅದು, ಅವನಿಗಾಗಿ ಏನನ್ನಾದರೂ ತರಬೇಕೆಂದು ಬಯಸುತ್ತಾನೆ, ಪುರುಷರ ಮೆಚ್ಚುಗೆ ಇಲ್ಲವೆ ಇನ್ನೂ ಹೆಚ್ಚಿನ ಜಿಪುಣತನದ ಲಾಭಗಳು ಕೂಡ. ಪರಿಣಾಮವಾಗಿ, ಚೈತ್ಯನ ದೃಷ್ಟಿಕೋನದಿಂದ ಗುಲಾಬಿಯು ಮನುಷ್ಯನಿಗಿಂತ ಉತ್ತಮವೆನಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/240**

**ಚೈತ್ಯಾವಸ್ಥೆ**

ಪೃಥ್ವಿಯ ಮೇಲಿನ ಕಾರ್ಯಕ್ಕಾಗಿ ದೈವಿಕವು ಸ್ವಯಂ ಆಗಿ ಪ್ರಕಟಗೊಳ್ಳುತ್ತಿರುವಂತೆ, ಮಾನವರು ಮಾಡಿದಂತೆ ವರ್ತಿಸುವ ಹಾಗೆ ತೋರುತ್ತದೆ. ಆದರೆ ನಿಜವಾಗಿ ಹಾಗಾಗುವುದಿಲ್ಲ. ಸ್ಪಷ್ಟವಾದ ಮತ್ತು ಕಣ್ಣಿಗೆ ಕಾಣುವಂಥ ಮಾನದಂಡಗಳಿಂದ ಅದನ್ನು ಮೌಲ್ಯಮಾಪನ ಮಾಡಲು ಸಾಧ್ಯವಿಲ್ಲ. ಆದರೆ, ಮನುಷ್ಯರು ತಮ್ಮ ಸ್ವಂತ ಕೀಳುತನದೊಂದಿಗೆ ಸಂಪೂರ್ಣವಾಗಿ ಪ್ರೀತಿಯಿಂದ ಇದ್ದಾರೆ ಮತ್ತು ಅವರು ಉನ್ನತ ಸತ್ಯಕ್ಕೆ ಶರಣಾಗತಿಯನ್ನು ಸಹಿಸಿಕೊಳ್ಳುವುದಿಲ್ಲ ಅಥವಾ ಒಪ್ಪಿಕೊಳ್ಳುವುದಿಲ್ಲ. ತಪ್ಪುಗಳನ್ನು ಕಂಡುಹಿಡಿಯುವ ಈ ಬಯಕೆ, ತನ್ನಲ್ಲಿರುವ ಏನೋ ಒಂದನ್ನು ವಿಮರ್ಶಿಸುವ ಮತ್ತು ಅನುಮಾನಿಸುವ ಈ ದೋಷಪೂರ್ಣ ಉತ್ಸಾಹವು ಉನ್ನತ ಸತ್ಯವಾಗಿದೆ, ಮಾನವತೆಯ ಮುದ್ರೆಯಾಗಿದೆ – ಅದು ಬರೀ ಮನುಷ್ಯನನ್ನು ಗುರುತಿಸುತ್ತದೆ. ಮತ್ತೊಂದೆಡೆ, ಎಲ್ಲಿಯಾದರೂ ಸಹಜವಾಗಿ ಸತ್ಯಕ್ಕಾಗಿ, ಸೌಂದರ್ಯಕ್ಕಾಗಿ, ಶ್ರೇಷ್ಠತೆಗಾಗಿ ಮೆಚ್ಚುಗೆ ಇದ್ದರೆ ಅಲ್ಲಿ ಒಂದು ಸ್ವಲ್ಪ ದೈವಿಕವು ವ್ಯಕ್ತವಾಗುತ್ತದೆ. ನಿಮ್ಮಲ್ಲಿರುವ ಆತ್ಮವು ನಿಮ್ಮ ಭೌತಿಕ ಪ್ರಜ್ಞೆಯೊಂದಿಗೆ ಸಂಪರ್ಕಕ್ಕೆ ಬಂದಾಗ, ಯಾವಾಗ ನಿಮ್ಮ ಹೃದಯವು ನೀವು ಯಾವುದನ್ನು ಮೂಲದೈವವೆಂದು ಭಾವಿಸಿ ಅದನ್ನು ಪೂಜಿಸಲು ಮತ್ತು ಹೊಗಳಲು ಹೊರ ಚಿಮ್ಮುತ್ತದೆಯೋ, ಆಗ ಅದು ನಿಶ್ಚಿತವಾಗಿಯೂ ಚೈತ್ಯ ಪುರುಷನೆಂದು ನೀವು ತಿಳಿದುಕೊಳ್ಳಬೇಕು.

ನೀನು ಏನಾಗಬೇಕೆಂದು ಬಯಸಿದ್ದೆಯೋ, ಅದರ ಮುಂದೆ ನಿಂತ ಕ್ಷಣದಲ್ಲಿ ನೀನು ಆನಂದದಿಂದ ಅಳಲೇಬೇಕು. ಆಲೋಚನೆ ಮಾಡುವುದನ್ನು ಯಾವುದು ನಿಲ್ಲಿಸುತ್ತದೆಯೋ, ಅದು ಕ್ಷುದ್ರ ಜೀವಿ. "ಹೌದು, ಅದೊಂದು ಶ್ರೇಷ್ಠ, ಆದರೆ ಒಂದು ವೇಳೆ ಅದು ನನ್ನ ತಂಡದಲ್ಲಿ (ಗುಂಪಿನಲ್ಲಿ) ಬಿದ್ದರೆ, ಒಂದು ವೇಳೆ ಇಂತಹ ವಿಶಿಷ್ಟ ಗುಣದ ಸಂತುಷ್ಟ ಯಜಮಾನ ನಾನಾಗಿದ್ದರೆ, ಈ ಉತ್ಕೃಷ್ಟ ಅಭಿವ್ಯಕ್ತಿಯ ಉಪಕರಣವಾಗಿದ್ದರೆ ಅದು ಮೆಚ್ಚುಗೆಗೆ ಅರ್ಹತೆವುಳ್ಳದ್ದಾಗಿರುತ್ತದೆ". ದೈವಿಕವು ತನ್ನನ್ನು ತಾನು ಎಲ್ಲೆಲ್ಲಿ ಬೇಕೋ ಅಲ್ಲಿ ಮತ್ತು ಯಾವ ಬಗೆಯಲ್ಲಿ ಅಭಿವ್ಯಕ್ತಪಡಿಸಿಕೊಳ್ಳಬೇಕೆಂಬುದೇ ಪ್ರಮುಖ ಕಳಕಳಿ ಇರುವಾಗ ಅಹಮಿಕೆಯ ಬಗ್ಗೆ ನೀನೇಕೆ ಗಲಾಟೆ ಮಾಡಬೇಕು? ಅದು ಅಭಿವ್ಯಕ್ತವಾದಾಗ ನೀನು ಸಂತೃಪ್ತ ಭಾವ ಹೊಂದಬೇಕು, ನಿನ್ನ ದೀನ ವ್ಯಕ್ತಿತ್ವದ ಸಂಕುಚಿತ ಬಂಧನಗಳನ್ನು ಕಡಿಯಲು (ಕತ್ತರಿಸಲು) ಶಕ್ತನಾಗಬೇಕು ಮತ್ತು ನಿಸ್ವಾರ್ಥ ಆನಂದದಲ್ಲಿ ಮೇಲಕ್ಕೇರಬೇಕು. ಈ

ಆನಂದವು, ನಿನ್ನ ಅತ್ಮವು ಜಾಗೃತವಾಗಿರುವ ಮತ್ತು ಸತ್ಯವನ್ನು ಗ್ರಹಿಸಿರುವ ನಿಜ ಸಂಕೇತ. ಆಗಲೇ ನೀನು ಅವರೋಹಿಸುವ ಸತ್ಯದ ಪ್ರಭಾವಕ್ಕೆ ತೆರೆದುಕೊಳ್ಳಬಹುದು ಮತ್ತು ಅದರಿಂದ ಉತ್ತಮ ಸ್ಥಿತಿಯನ್ನು ಪಡೆಯಬಹುದು. ಮಕ್ಕಳು ಹಾಗು ಹಸುಳೆಗಳು ಸಹ ಸರಳ ಹಾಗೂ ಅತ್ಯಂತ ದೈವೀ ಸೌಂದರ್ಯದಂತಹ ಏನಾದರೊಂದನ್ನು ಮಾಡಿದ್ದನ್ನು ನೋಡಿದಾಗ ನಾನು ಗದ್ಗದಿತಳಾದ ಸಂದರ್ಭಗಳನ್ನು ನೆನೆಪಿಸಿಕೊಳ್ಳುತ್ತೇನೆ. ಆ ಆನಂದವನ್ನು ನೀನು ಅನುಭವಿಸು, ಆಗ ನಿನ್ನ ಮಧ್ಯದಲ್ಲಿರುವ ದೈವೀ ಉಪಸ್ಥಿತಿಯ ಲಾಭವನ್ನು ಪಡೆಯಲು ಸಾಧ್ಯ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/158–59**

## ಯಾತನೆಯ ಮೇಲ್ಗಡೆ ಇರುವಿಕೆ

ಎರಡು ವಸ್ತುಗಳು (ಸನ್ನಿವೇಶಗಳು) ಒಟ್ಟಿಗೆ ಇರುವಂಥ ಮಾನವ ಪ್ರಜ್ಞೆಯೊಂದಿದೆ (ಅದು ಇನ್ನೂ ಅತಿಮಾನವನಲ್ಲ, ಅದು ನಿಜವಾಗಿ ಮಾನವ). ಯಾತನೆಗಳಿರಬಹುದು ಮತ್ತು ಅವುಗಳ ಅಸ್ತಿತ್ವವೆ ಇಲ್ಲವೆಂಬಂತೆ ಅವುಗಳನ್ನು ಅನುಭವಿಸದ ಒಬ್ಬರಿರಬಹುದು. ಅದೊಂದು ದುರಾದೃಷ್ಟ, ಒಂದು “ಸಂಕಟ”ವು ಬಾಹ್ಯ ಪ್ರಜ್ಞೆಯನ್ನು, ಭೌತಿಕವನ್ನು, ಮಾನಸಿಕವನ್ನು, ಪ್ರಾಣವನ್ನು ಮಾತ್ರ ಸ್ಪರ್ಶ ಮಾಡಬಹುದು, ಆದರೆ ಚೈತ್ಯನು – ವಾಸ್ತವದಲ್ಲಿ ಚೈತ್ಯನು ಎಲ್ಲ ಯಾತನೆಗಳಿಗಿಂತ ಮೇಲಿದ್ದಾನೆ. ಒಂದು ಸರಳವಾದ ಉದಾಹರಣೆಯನ್ನು ತೆಗೆದುಕೊಳ್ಳೋಣ: ಅನಾರೋಗ್ಯ. ಒಂದು ಭೌತಿಕ ಅಸ್ವಸ್ಥತೆಯು ಯಾತನೆಯನ್ನು ತರುತ್ತದೆ, ಕೆಲವೊಮ್ಮೆ ಅತಿ ಹೆಚ್ಚು ಯಾತನೆ, ಆದರೆ ಒಂದು ಪ್ರಜ್ಞೆಯಲ್ಲಿ ಇರುವಂಥ ಜನರಿಗೆ ಭೌತಿಕ ಯಾತನೆಯು ಇರುವುದಿಲ್ಲ, ಅವು ಅವರಿಗೆ ಸತ್ಯವಲ್ಲ. ಇದೇ ವಿಷಯ ಅಗಲಿಕೆಗೂ ಅನ್ವಯಿಸುತ್ತದೆ: ನೀವು ಯಾರನ್ನಾದರೂ ಪ್ರೀತಿಸುತ್ತಿದ್ದರೆ ಮತ್ತು ಆ ವ್ಯಕ್ತಿಯಿಂದ ಬೇರೆಯಾದರೆ, ನೀವು ಸಂಕಟ ಪಡುವಿರಿ – ಯಾತನೆಗಳಲ್ಲಿ ಇದು ಅತ್ಯಂತ ಸಾಮಾನ್ಯವಾದದ್ದು, ಇಲ್ಲಿ ಬಂಧನಗಳು ಭಗ್ನವಾಗುತ್ತವೆ, ಒಂದು ನಿಶ್ಚಿತವಾದ ಪ್ರಜ್ಞೆಯಲ್ಲಿ ಎರಡು ಜೀವಗಳ ನಡುವಿನ ನಿಜವಾದ ಬಂಧನವನ್ನು ಮುರಿಯಲಾಗದು. ಯಾಕೆಂದರೆ, ವಸ್ತುಗಳು ಮುರಿಯುವ ವ್ಯಾಪ್ತಿಗೆ ಇದು ಸೇರುವುದಿಲ್ಲ. ಆದ್ದರಿಂದ, ಏನು ಘಟಿಸಬಹುದೋ ಅದರ ಮೇಲ್ಗಡೆ ಅವನಿದ್ದಾನೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/45–46**

## ಜೀವನವ ನಿರ್ದೇಶಿಸುವ ಚೈತ್ಯ

*ಚೈತ್ಯ ಪುರುಷನು ಮುಮ್ಮುಖವಾಗಿರುವನೋ ಇಲ್ಲವೋ ಎನ್ನುವುದು ಹೇಗೆ ತಿಳಿಯುತ್ತದೆ?*

ಯಾರು? ತನಗೇ?... ಅದನ್ನು ಅನುಭವಿಸುವುದಿಲ್ಲ, ಅಲ್ಲವೇ? ನೀನು ಅದನ್ನು ಅನುಭವಿಸುವುದಿಲ್ಲ? ನಾನು ಚಿಕ್ಕ ಮಗುವಿನ ಬಗ್ಗೆ ಮಾತನಾಡುತ್ತಿಲ್ಲ, ಅದಕ್ಕೆ ನಿಯಂತ್ರಣ ಮತ್ತು ಗಮನಿಸುವ ಯಾವುದೇ ಉಪಾಯ ಇಲ್ಲದಿರುವುದರಿಂದ ಅದಕ್ಕೆ ಗಮನಿಸುವ ಸಾಮರ್ಥ್ಯದ ಅಭಾವವಿದೆ. ಯಾವಾಗ ಯಾರೊಬ್ಬರು ಹಿಂದೆ ಹಸುಳೆಯೇ ಇಲ್ಲದಿದ್ದಾಗ, ಅದನ್ನು ಅನುಭವಿಸಲಿಲ್ಲ, ಆದರೆ ನಂತರ? ಇದು ವ್ಯತ್ಯಾಸವನ್ನುಂಟುಮಾಡುವುದಿಲ್ಲವೇ?... *(ಮಗುವು ಒಪ್ಪಿಗೆಯಲ್ಲಿ ಗೋಣು ಹಾಕಿತು.)* ಆಹಾ!... ಯಾವಾಗ ಚೈತ್ಯನು ಅಲ್ಲಿದ್ದಾಗ, ಯಾವಾಗ ಒಬ್ಬನು ತನ್ನಷ್ಟಕ್ಕೆ ಅಂತರಂಗದಲ್ಲಿ ಉತ್ತಮವಾದದ್ದನ್ನು ಅನುಭವಿಸಿದಾಗ, ಯಾವಾಗ ಒಬ್ಬನು ಪೂರ್ಣ ತೇಜಸ್ಸು, ಭರವಸೆ, ಸದ್ಭಾವನೆ, ಉದಾರತೆ, ಜಗತ್ತಿಗಾಗಿ ಅನುಕಂಪದಿಂದ ಇದ್ದಾಗ ನಿಮ್ಮಲ್ಲಿಯ ಯಾರೊಬ್ಬರೂ ಅದು ಯಾವ ವ್ಯತ್ಯಾಸವನ್ನು ಮಾಡುವುದಿಲ್ಲವೆಂದು ನನಗೆ ಹೇಳುವ ಧೈರ್ಯ ಮಾಡುವುದಿಲ್ಲ ಮತ್ತು ಜೀವನವನ್ನು ಕಾರ್ಯದ ಅಭಿವೃದ್ಧಿಯ, ಸಿದ್ಧಿಯ ಕ್ಷೇತ್ರವನ್ನಾಗಿ ನೋಡುತ್ತಾನೆ. ಯಾವಾಗ ಒಬ್ಬನು ಬೇಸರ ಮಾಡಿಕೊಂಡ, ಗೊಣಗುಟ್ಟುತ್ತಿದ್ದ, ಯಾವಾಗ ಎಲ್ಲವೂ ವಿಕಾರವಾಗಿ, ಅಹಿತಕಾರಿಯಾಗಿ, ಕೆಟ್ಟದಾಗಿ ತೋರಿದ, ಯಾವಾಗ ಒಬ್ಬನು ಯಾರನ್ನೂ ಪ್ರೀತಿಸದ, ಎಲ್ಲವನ್ನೂ ಮುರಿಯಬೇಕೆಂದುಕೊಂಡ, ಬಲವಿಲ್ಲದ, ಶಕ್ತಿರಹಿತ, ಆನಂದರಹಿತ ದಿನಗಳಿಂದ ಒಂದು ವ್ಯತ್ಯಾಸವನ್ನೂ ಅದು ಮಾಡಿಲ್ಲವೆ? ಅದು ವ್ಯತ್ಯಾಸವನ್ನು ಮಾಡುತ್ತದೆ, ಮಾಡುತ್ತದಲ್ಲವೆ?

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/6**

*ಅತಿಮಾನಸ ಸತ್ಯವು ಸಿದ್ಧಿಸುವವರೆಗೆ ಈ ಪಥದಲ್ಲಿ ಗಟ್ಟಿಯಾಗಿರಲು ಸರಿಯಾದ ನಿಲುವು ಯಾವುದು?*

ಅಲ್ಲಿ ಚೈತ್ಯ ನಿಯಮ ಮತ್ತು ಪ್ರಾಮಾಣಿಕತೆ ಮತ್ತು ಶ್ರೀಮಾತೆಯವರಿಗೆ ನಿಷ್ಠೆ ಇದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/120 – ಶ್ರೀಮಾತೆ**

**ಚೈತ್ಯನು ಮತ್ತೊಮ್ಮೆ ಹಿಂದೆ ಸರಿಯಬಹುದೆ:**

*ಒಂದು ಸಂದರ್ಭದಲ್ಲಿ ಚೈತ್ಯನು ಮುಂದೆ ಬಂದಿದ್ದಾಗ, ಅದು ಮತ್ತೊಮ್ಮೆ ಹಿಂದೆ ಸರಿಯಬಹುದೆ?*

ಹೌದು, ಸಾಮಾನ್ಯವಾಗಿ ಗುರುತು ಹಿಡಿಯುವ ಅನುಭವಗಳ ಕ್ರಮ ಒಬ್ಬರಲ್ಲಿರುತ್ತದೆ, ಪ್ರಾರಂಭದಲ್ಲಿ ಅತ್ಯಂತ ತೀವ್ರವಾಗಿರುತ್ತದೆ, ನಂತರ ನಿಧಾನವಾಗಿ ಕ್ಷೀಣಿಸುತ್ತದೆ, ಮತ್ತು ಒಂದು ದಿನ ಅವು ಮರೆಯಾಗಿದ್ದನ್ನು ನೀನು ಕಂಡುಕೊಳ್ಳುತ್ತೀ, ಆದರೂ, ಅದೊಂದು ಅತಿ ಸಾಮಾನ್ಯ ವಿದ್ಯಾಮಾನವಾಗಿರುವುದರಿಂದ ನೀನು ಗೊಂದಲಕ್ಕೀಡಾಗಬಾರದು. ಆದರೆ, ಮುಂದಿನ ಸಲ – ಎರಡನೆ ಸಲ – ಸ್ಪರ್ಶವು ಸುಲಭವಾಗಿ ಒದಗುತ್ತದೆ. ಮತ್ತೆ ಯಾವಾಗ ಒಬ್ಬನು ಎಷ್ಟು ಶೀಘ್ರವಾಗಿ ಕೇಂದ್ರೀಕರಿಸುತ್ತಾನೆ ಮತ್ತು ಆಕಾಂಕ್ಷಿಯಾಗಿರುತ್ತಾನೋ ಆಗ ಹೆಚ್ಚೇನೂ ದೂರವಿಲ್ಲದ ಒಂದು ಕಾಲ ಬರುತ್ತದೆ ಮತ್ತು ಸ್ಪರ್ಶವನ್ನು ಪಡೆಯುತ್ತಾನೆ. ಅದನ್ನು ಎಲ್ಲ ಸಮಯದಲ್ಲೂ ಇಟ್ಟುಕೊಳ್ಳುವ ಸಾಮರ್ಥ್ಯ ಇರಲಿಕ್ಕಿಲ್ಲ, ಆದರೆ ಒಬ್ಬನು ಬಯಸಿದಾಗ ಅದನ್ನು ಪಡೆಯಬಹುದು. ಆಮೇಲೆ, ಆ ಕ್ಷಣದಿಂದ ವಿಷಯಗಳು ಅತ್ಯಂತ ಸುಲಭವಾಗುತ್ತವೆ. ಯಾವಾಗ ಒಂದು ತೊಂದರೆಯ ಅನುಭವವಾಗುತ್ತದೆಯೋ, ಅಥವಾ ಅಲ್ಲೊಂದು ಪರಿಹರಿಸಬೇಕಾದ ಸಮಸ್ಯೆ ಇದೆಯೋ, ಯಾವಾಗ ಪ್ರಗತಿಯನ್ನು ಮಾಡುವ ಬಯಕೆಯಾಗುತ್ತದೆಯೋ, ಅಥವಾ ಅಲ್ಲೊಂದು ಕೇವಲ ನಿಗ್ರಹಿಸಬೇಕಾದ ವಿಷಾದವಿದೆಯೋ, ಅಥವಾ ಜಯಿಸಬೇಕಾದ ಒಂದು ಅಡಚಣೆವಿದೆಯೋ, ಇಲ್ಲವೆ ಬರೀ ಗುರುತಿಸಿಕೊಳ್ಳುವ ಆನಂದಕ್ಕಾಗಿ (ಅದು ಒಂದು ನಿಶ್ಚಿತವಾದ ಆನಂದವನ್ನು ಕೊಡುವ ಅನುಭವವಾದ್ದರಿಂದ, ಗುರುತಿಸಿಕೊಳ್ಳುವ ಸಂದರ್ಭದಲ್ಲಿ ನಿಜವಾಗಿಯು ಅತ್ಯಂತ ಶ್ರೇಷ್ಠವಾದ ಆನಂದವನ್ನು ಅನುಭವಿಸುತ್ತಾನೆ), ಯಾವುದಾದರೂ ಒಂದು ಸಂದರ್ಭದಲ್ಲಿ, ಒಬ್ಬನು ವಿರಮಿಸಬಹುದು, ಕೆಲಸಮಯ ಕೇಂದ್ರೀಕರಿಸಬಹುದು ಮತ್ತು ಹಂಬಲಿಸಬಹುದು, ಮತ್ತು ನಿಜಕ್ಕೂ ಸ್ವಾಭಾವಿಕವಾಗಿಯೇ ಸ್ಪರ್ಶವು ಅಧೀಷ್ಠಿತವಾಗಿ ಯಾವ ಸಮಸ್ಯೆಗಳು ಪರಿಹಾರವಾಗಬೇಕೋ ಅವೆಲ್ಲವೂ ಪರಿಹಾರವಾಗುತ್ತವೆ. ಕೇಂದ್ರೀಕರಿಸಬೇಕಾದರೆ – ಕುಳಿತುಕೊಳ್ಳಲು ಮತ್ತು ಕೇಂದ್ರೀಕರಿಸಲು – ಈ ರೀತಿ ಹಂಬಲಿಸಲು, ಮತ್ತು ಹೇಳಬೇಕೆಂದರೆ, ಕ್ಷಣಾರ್ಧದಲ್ಲಿ ಸ್ಪರ್ಶವು ರೂಪಿತವಾಗುತ್ತದೆ.

ನಾನು ಹೇಳಿದ ಹಾಗೆ, ಒಂದು ಸಮಯ ಬರುತ್ತದೆ, ಇದು ನಿನ್ನನ್ನು ಬಿಡದೇ ಇದ್ದಾಗ ಅದು ಪ್ರಜ್ಞೆಯ ಆಳದಲ್ಲಿರುತ್ತದೆ ಮತ್ತು ನೀನು ಮಾಡುವುದೆಲ್ಲವನ್ನೂ ಬೆಂಬಲಿಸುತ್ತದೆ ಮತ್ತು ನೀನು ಎಂದೆಂದಿಗೂ ಸ್ಪರ್ಶವನ್ನು ಕಳೆದುಕೊಳ್ಳುವುದಿಲ್ಲ. ಆವಾಗ ಬಹಳಷ್ಟು ವಿಷಯಗಳು ಮರೆಯಾಗುತ್ತವೆ. ಉದಾಹರಣೆಗೆ, ಖಿನ್ನತೆಯು ಈ ವಿಷಯಗಳಲ್ಲಿ ಒಂದು, ಅಸಮಾಧಾನ, ಬಂಡಾಯ, ಆಯಾಸ, ಖಿನ್ನತೆ ಈ ಎಲ್ಲ ತೊಂದರೆಗಳು. ನಾವು ಹೇಳಿದಂತೆ, ಒಬ್ಬರ ಪ್ರಜ್ಞೆಯಲ್ಲಿ ಮತ್ತು ಪರದೆಯ ಮೇಲೆ ಒಬ್ಬರ ಚೈತ್ಯ ಪ್ರಜ್ಞೆಯನ್ನು ನೋಡಿ ಎಲ್ಲ ಸನ್ನಿವೇಶಗಳನ್ನು, ಎಲ್ಲ ಘಟನೆಗಳನ್ನು, ಎಲ್ಲ ಕಲ್ಪನೆಗಳನ್ನು ಎಲ್ಲ ಜ್ಞಾನವನ್ನು, ಪ್ರತಿಯೊಂದನ್ನು ನೋಡಿ – ಒಂದು ವೇಳೆ ಹಿಂದೆ ಸರಿಯುವ ಅಭ್ಯಾಸ ಮಾಡಿಕೊಂಡರೆ, ಆ ಕ್ಷಣದಲ್ಲಿ ಒಬ್ಬನು ಅದನ್ನು ಕಾಣುತ್ತಾನೆ, ಮತ್ತು ಒಬ್ಬನು ಮಾಡುವ ಎಲ್ಲವುಗಳಿಗೆ ಒಟ್ಟಿನಲ್ಲಿ ಒಬ್ಬ ಮಾರ್ಗದರ್ಶಿ ಇದ್ದಾನೆ. ಆದರೆ ಇದು ಬರಬೇಕಾದರೆ ಬಹಳ ಸಮಯ ತೆಗೆದುಕೊಳ್ಳುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/33–34**

ಒಬ್ಬರು ದಿಗ್ಭ್ರಾಂತರಾದಾಗ, ಒಂದು ಆಯ್ಕೆಯನ್ನು ಮಾಡಿಕೊಳ್ಳಬೇಕಾದಾಗ, ಸರಿಯಾಗಿ ಮಾಡಬೇಕಾದ ಕಾರ್ಯ ಯಾವುದೆಂದು ತಿಳಿಯದಿದ್ದಾಗ – ಆಗ ಅವರು ಎರಡು ಅಥವಾ ಮೂರು ಅಥವಾ ಸಾಧ್ಯವಿರುವ ನಾಲ್ಕು ನಿರ್ಣಯಗಳಲ್ಲಿ ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ ಮತ್ತು ಯಾವುದು ಸರಿಯೆಂದು ಗೊತ್ತಿಲ್ಲದಿದ್ದಾಗ ನಾವು ಸಾಧ್ಯವಿದ್ದ ಮಟ್ಟಿಗೆ ನಮ್ಮನ್ನು ನಾವು ಚೈತ್ಯ ಪುರುಷನಲ್ಲಿ ಮತ್ತು ನಮ್ಮಲ್ಲಿಯ ದೈವೀ ಇರುವಿಕೆಯಲ್ಲಿ ಸ್ಪರ್ಶವನ್ನು ಇಟ್ಟುಕೊಳ್ಳಬೇಕು, ಈ ಚೈತ್ಯ ಪ್ರಜ್ಞೆಯ ಮುಂದೆ ಸಮಸ್ಯೆಯನ್ನು ನಿವೇದಿಸಿ ಮತ್ತು ನಿಜವಾದ ಬೆಳಕನ್ನು, ದೈವೀ ಇಚ್ಛಾನುಸಾರಕ್ಕಿರುವ ನಿಜ ನಿರ್ಧಾರವನ್ನು ಕೇಳಿಕೊಳ್ಳಿ, ಮತ್ತು ಆಲಿಸುವ ಪ್ರಯತ್ನ ಮಾಡಿ ಸ್ಫೂರ್ತಿಯನ್ನು ಪಡೆದುಕೊಳ್ಳಿ.

ಪ್ರತಿ ವಿಷಯದಲ್ಲಿ ಅದು ಸರಿಯಾದ ನಿಲುವು ಎನ್ನುವುದನ್ನು ನೀವು ಕಾಣುವಿರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/340–341**

ಮೂಲಭೂತವಾಗಿ, ಚೈತ್ಯ ಪುರುಷನ ಇಂತಹ ಆಂತರಿಕ ಇಚ್ಛೆ ಇರದೆ, ಮನುಷ್ಯರು ಕೊಂಚ ಮಂಕುಕವಿದವರಾಗಿ, ಹುರುಪಿಲ್ಲದವರಾಗಿ ಆಗುತ್ತಾರೆ, ಒಟ್ಟಿನಲ್ಲಿ ಅವರು ಒಂದು ಪ್ರಾಣಿಯ ಜೀವನವನ್ನು ಹೊಂದುತ್ತಾರೆ. ಸ್ಫೂರ್ತಿಯ ಪ್ರತಿ ಹೊಳಪು ಯಾವಾಗಲೂ ಚೈತ್ಯ ಪ್ರಭಾವದ ಅಭಿವ್ಯಕ್ತಿಯಾಗಿರುತ್ತದೆ. ಚೈತ್ಯನ ಅಸ್ತಿತ್ವವಿಲ್ಲದೆ, ಚೈತ್ಯನ ಪ್ರಭಾವವಿಲ್ಲದೆ, ಅಲ್ಲಿ ಪ್ರಗತಿಯ ಅಥವಾ ಪ್ರಗತಿಯ ಇಚ್ಛೆಯ ಭಾವನೆ ಇರಲು ಸಾಧ್ಯವಿಲ್ಲ.

*

ಚೈತ್ಯ ಜಗತ್ತಿನ ತತ್ವವು ತನ್ನ ಸ್ವಂತ ಚೈತ್ಯ ಗುಣ ವಿಶೇಷಗಳಿಂದ ಅದಕ್ಕೆ ಸಮರ್ಪಕವಾದ ತತ್ವವಾಗಿದೆ: ಒಂದು ಅಮರತ್ವದ ಭಾವನೆ, ಒಂದು ದೈವೀ ಪ್ರಭಾವದ ಪೂರ್ಣ ಗ್ರಹಿಕೆ, ಸಂಪೂರ್ಣವಾಗಿ ವ್ಯಾಪಿಸಿರುವ ಈ ಪ್ರಭಾವಕ್ಕೆ ಪೂರ್ಣ ಶರಣಾಗತಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/165, 228 – ಶ್ರೀಮಾತೆ**

**ಅಂತರಾತ್ಮಿಕ ಭಾವ**

– ಅನುವಾದ: ಡಾ॥ ಬಲಭೀಮ ಭೀಡ, ರಾಯಚೂರು

ಉದಾಹರಣೆಗಾಗಿ ಹೇಳುತ್ತೇನೆ, ಇಂಥ ಸ್ಥಿತಿಯ ಅನುಭವ ಸಾಧ್ಯ. ಅತಿ ಸ್ಪಷ್ಟವಾದ, ನಿರ್ಮಲವಾದ, ಶುದ್ಧವಾದ ಅಂತರಾತ್ಮಿಕ ಸಂಚಲನೆ. ಹೌದು ಅತಿ ಶುದ್ಧವಾಗಿ ಅಂತರಾತ್ಮಿಕವು ದ್ರವಿಸಿ ಹೋಗುವಂಥ ಸ್ಥಿತಿಯಲ್ಲಿ ನೀವಿದ್ದೀರಿ ಎಂದುಕೊಳ್ಳಿ – ಇದು ಆಗಾಗ ಸಂಭವಿಸುವುದುಂಟು – ಭಾವಾವೇಶ ಆಗ ಎಷ್ಟು ತೀವ್ರವಾಗಿರುತ್ತದೆಂದರೆ ನಿಮ್ಮ ಕಣ್ಣುಗಳಲ್ಲಿ ನೀರು ಜಿನುಗತೊಡಗುತ್ತದೆ. ನೀವೇನೂ ದುಃಖಿತರಾಗಿರುವುದಿಲ್ಲ, ಸಂತೋಷಿತರೂ ಆಗಿರುವುದಿಲ್ಲ – ಅದೂ ಇಲ್ಲ ಇದೂ ಇಲ್ಲ. – ನಿಶ್ಚಿತವಾಗಿ ಇಂಥದೇ ಎಂದು ಹೇಳಬಹುದಾದಂಥ ಯಾವ ಭಾವವೂ ಇರುವುದಿಲ್ಲ. ಆದರೆ ಭಾವಾವೇಶ ಅಷ್ಟು ತೀವ್ರವಾಗಿರುತ್ತದೆ, ಪ್ರಬಲವಾಗಿರುತ್ತದೆ. ಅದು ನಿಶ್ಚಿತವಾಗಿಯೂ ಸ್ಪಷ್ಟವಾಗಿಯೂ ಅಂತರಾತ್ಮಿಕವೇ ಆಗಿರುತ್ತದೆ. ಅಂತರಾತ್ಮದಿಂದಲೇ ಬಂದಿರುತ್ತದೆ. ಅದು ನಿಮ್ಮೊಳಗೇನೇ ಆಗಿರಬಹುದು, – ಹೆಚ್ಚಾಗಿ ಅದು ಬೇರೆಯವರ ಸಂಬಂಧದಲ್ಲಿ, ಬೇರೆಯವರ

ಬಗ್ಗೆ ಮಾತನಾಡುವಾಗ ಆಗುವ ಸಂಭವ ಅಧಿಕ. ಅಂತರಾತ್ಮಿಕಕ್ಕೆ ಸಂಬಂಧಪಟ್ಟಂತೆ ಯಾವುದಾದರೊಂದು ಕೃತಿ, ಸಂಚಲನೆ ಅಥವಾ ಅಭಿವ್ಯಕ್ತಿಯ ಸಂಪರ್ಕ ಬಂದಾಗ ಹಠಾತ್ತಾಗಿ ನಿಮ್ಮ ಕಣ್ಣು ತುಂಬಿ ಬಂದಂತಾಗಿ, ನೀರು ಹನಿಯತೊಡಗುತ್ತದೆ. ನೀವು ಅದನ್ನು ಭಾವಾವೇಶ ಅಂತ ಕರೆಯುತ್ತೀರೇನೋ ಹೌದು ಅದು ಭಾವಾವೇಶವಂತೂ ಖಂಡಿತ ಹೌದು. ಆದರೆ ಅದು ಸಾಮಾನ್ಯವಾಗಿ ಈ ಅಂಶದಿಂದ ಬರುತ್ತದೆ. – ಭೌತಿಕಕ್ಕೆ ಅದರ ನೇರವಾದ ಸರಿಯಾದ ಅರಿವು ಇಲ್ಲ. ಆದರೂ ಕೂಡ ಅದರಲ್ಲಿ ಅಂತರಾತ್ಮಿಕ ಬದುಕಿನ ಬಗ್ಗೆ ತೀವ್ರವಾದ, ಅಂತರಾತ್ಮಿಕ ಪ್ರಾಣದ ಬಗ್ಗೆ ಪ್ರಬಲವಾದ ಹಂಬಲ ಇದೆ. ಅಂತರಾತ್ಮಿಕ ಸತ್ತೆಯ ಜೊತೆ ಸಂಪರ್ಕ ಇಲ್ಲದಿರುವಾಗ ಅದು ತೀರ ನಿರಾಶೆಯನ್ನು, ಖಿನ್ನತೆಯನ್ನು, ಏಕಾಂತತೆಯನ್ನು ಅಥವಾ ಪರಿತ್ಯಕ್ತ ಭಾವನೆಯನ್ನು ಅನುಭವಿಸುತ್ತದೆ. ಸಾವಿರಾರು ಭೌತಿಕ ಸತ್ತೆಗಳಲ್ಲಿ ಒಂದಕ್ಕೂ ಇದರ ಬಗ್ಗೆ ಅರಿವಿರುವುದಿಲ್ಲ. ಆದರೆ ಈ ರೀತಿಯ ಭಾವನೆ ಅಥವಾ ಸ್ಥಿತಿ, ಅಂದರೆ ಸಂಪೂರ್ಣ ಕಳೆದು ಹೋಗಿರುವಂಥ, ತ್ರಿಶಂಕು ಸ್ಥಿತಿಯಲ್ಲಿರುವಂಥ, ಅಸಹಾಯಕವಾಗಿರುವಂಥ, ಅನಾಥವಾಗಿರುವಂಥ, ಏನೋ ಕೊರತೆ ಇದೆ, ಆದರೆ ಯಾವ ಕೊರತೆ ಎಂದು ಗೊತ್ತಿಲ್ಲದಿರುವಂಥ, ಏನೋ ಇಲ್ಲ ಆದರೆ ಏನಿಲ್ಲ ಎಂಬುದೇ ಗೊತ್ತಿಲ್ಲದಂಥ ಅಸಹಾಯಕ ಸ್ಥಿತಿಯ ಅನುಭವ – ಸಾಮಾನ್ಯವಾಗಿ ಇಂಥ ಸ್ಥಿತಿ ನಾವು ವಿಚಾರ ಮಾಡುವುದಕ್ಕಿಂತ ಎಷ್ಟೋ ಪಟ್ಟು ಹೆಚ್ಚು ಸಲ ಬರುತ್ತದೆ; ಆದರೆ ಇಂಥ ಅನುಭವ ಏಕೆ ಆಗುತ್ತದೆ ಮತ್ತು ಅದೇನು ಎಂಬುದು ಜನರಿಗೆ ಗೊತ್ತಾಗುವುದಿಲ್ಲ. ಆದರೆ ಒಮ್ಮೆಲೇ, ಯಾವ ಕಾರಣದಿಂದಲೋ ಏನೋ ಇಂಥ ಪ್ರಜ್ಞೆ ಅಂತರಾತ್ಮಿಕ ಸಂಗತಿಯ ಸಂಪರ್ಕದಲ್ಲಿ ಬಂದುಬಿಟ್ಟರೆ, ಅಂತರಾತ್ಮಿಕ ಶಕ್ತಿಗಳ, ಅಂತರಾತ್ಮಿಕ ಕಂಪನಗಳ ಸಂಪರ್ಕದಲ್ಲಿ ಬಂದುಬಿಟ್ಟರೆ ಶರೀರಕ್ಕೆ ಅದನ್ನು ತಡೆದುಕೊಳ್ಳುವುದು ಸಾಧ್ಯವಾಗದೇ ಹೋಗುವುದು. ಭಾವಾವೇಶ ಅಷ್ಟು ತೀವ್ರವಾಗಿರುತ್ತದೆ. ಅತಿ ಮಹತ್ತರವಾದ, ಎಲ್ಲ ದಿಕ್ಕುಗಳಲ್ಲಿಯೂ ಹರಡುವ, ನಿಮಗೆ ಸಹಿಸಲಾಗದಷ್ಟು ತೀವ್ರವಾಗಿರುವ, ನಿಮ್ಮನ್ನು ನೀವೇ ಸಂಭಾಳಿಸಿಕೊಳ್ಳಲಾಗದಂಥ ಅಪಾರ ಆನಂದದ ತೆರನಾದ ಸ್ಥಿತಿ ಅದು. ಅಂಥ ಅಪೂರ್ವ ಸ್ಥಿತಿ ಅದು. ಅಂಥ ಕ್ಷಣದಲ್ಲಿ ಒಮ್ಮೆಲೆ ಸಾಕ್ಷಾತ್ಕಾರದಂಥ ಅನುಭವ ಆಗಿಬಿಡುತ್ತದೆ. ಅದೇನೋ ಅಷ್ಟು ಬುದ್ಧಿಗ್ರಾಹ್ಯ ಹಾಗೂ ಅರಿವು ಆಗುವಂಥದಲ್ಲ. ಅದನ್ನು ನೀವು ಶಬ್ದಗಳಲ್ಲಿ ವರ್ಣಿಸಲಾರಿರಿ ಕೂಡ. ಅದೊಂದು ತೆರನಾದ ಸಾಕ್ಷಾತ್ಕಾರ ಹೌದು ನನಗಿದು ಬೇಕಾಗಿತ್ತು, ನನಗೆ ಇದು ಅವಶ್ಯವಾಗಿ ಬೇಕು ಎಂಬಂಥ ಜ್ಞಾನದ ಅನುಭವ ಅದು.

ಇಂಥ ಭಾವತೀವ್ರತೆ ಎಷ್ಟು ಪ್ರಬಲವಾಗಿರುತ್ತದೆ, ಪ್ರಕೃಷ್ಟವಾಗಿರುತ್ತದೆ ಅಂದರೆ ಅದರಿಂದ ನೀವು ಭಾವಪರವಶರಾಗಿ ಬಿಡುತ್ತೀರಿ. ಅದರಲ್ಲಿ ಅನೇಕ ಅಂಶಗಳು ಕೂಡಿರುತ್ತವೆ. ಅವೆಲ್ಲವನ್ನು ನೀವು ಇದಮಿತ್ಥಂ ಎಂದು ಹೇಳಲಾರಿರಿ. ಇಂಥ ಭಾವತೀವ್ರತೆಯು ಪ್ರಾಮಾಣಿಕದಿಂದ ಬರುವುದಿಲ್ಲ.

ಪ್ರಾಣಿಕ ಭಾವಾವೇಶಗಳ ಸ್ವಭಾವ ಬೇರೆ ಆಗಿರುತ್ತದೆ – ಅವು ಸ್ಪಷ್ಟವಾಗಿರುತ್ತವೆ, ನಿಖರವಾಗಿರುತ್ತವೆ. ಅವುಗಳನ್ನು ನೀವು ಸ್ಪಷ್ಟವಾಗಿ ವ್ಯಕ್ತಪಡಿಸಬಲ್ಲಿರಿ. ಅವು ತುಸು ಉಗ್ರವಾಗಿರುತ್ತವೆ. ಅವು ನಿಮ್ಮೊಳಗೆ ತೀವ್ರತೆಯನ್ನು ತುಂಬುತ್ತವೆ. ಒಂದು ರೀತಿಯ ತಳಮಳವನ್ನು, ಅಥವಾ ಕೆಲ ಸಲ ತುಂಬ ಸಂತೃಪ್ತಿಯನ್ನು ತುಂಬುತ್ತವೆ. ಆನಂತರ ಅಷ್ಟೇ ಪ್ರಬಲವಾಗಿ ಅದರ ತೀರ ವಿರುದ್ಧ ಸ್ಥಿತಿ ಕೂಡ ಬರುತ್ತದೆ. ಆದ್ದರಿಂದ ಜನರು, ಸಾಮಾನ್ಯವಾಗಿ ಎಲ್ಲರೂ – ನಾವಿದನ್ನು ಅನೇಕ ಬಾರಿ ಹೇಳಿ ಆಗಿದೆ. ಇಂಥ ಸ್ಥಿತಿಯಲ್ಲಿರುವಾಗ ತಾವು ಪ್ರೀತಿಯನ್ನು ಅನುಭವಿಸಿರುವುದಾಗಿ ಹೇಳುತ್ತಾರೆ. ಪ್ರೀತಿಯು ಪ್ರಾಣಿಕದಲ್ಲಿರುವಾಗ, ಅದು ಎಲ್ಲ ರೀತಿಯ ಪ್ರಾಣಿಕ ಸಂಚಲನೆ, ಎಲ್ಲ ತೀವ್ರತೆ, ಉಗ್ರತೆ, ಹಠ, ಖಚಿತತೆ, ಮೋಹಕತೆಯಿಂದ ಕೂಡಿರುತ್ತದೆ. ಅದಿಲ್ಲದಿರುವಾಗ ಜನರು "ಓಹ್ ಇದು ಪ್ರೇಮ ಅಲ್ಲ" ಎಂದು ಗೊಣಗುತ್ತಾರೆ.

ಪ್ರೀತಿಯು ಯಾವಾಗಲೂ ಹೀಗೆಯೇ ವಿಕೃತವಾಗುತ್ತಿರುತ್ತದೆ. ಮೊದಲೇ ಅದು ಪ್ರೀತಿ ಆಗಿರುವುದಿಲ್ಲ. ಒಂದು ಆವೇಶದಿಂದ ಆರಂಭವಾಗಿರುತ್ತದೆ. ಇದು ಸಾಮಾನ್ಯವಾಗಿ ಎಲ್ಲ ಜನರು – ಸಾಮಾನ್ಯವಾಗಿ ಎಲ್ಲ ಮಾನವರು ಮಾಡುವ ಲೌಕಿಕ ತಪ್ಪು ಎಂದು ಹೇಳಬಹುದು.

ಕೆಲವರಲ್ಲಿ ಮಾತ್ರ ಅತಿ ಶುದ್ಧವಾದ, ಅತ್ಯುನ್ನತವಾದ, ನಿಃಸ್ವಾರ್ಥ, ನಿರ್ಮಲ ಅಂತರಾತ್ಮಿಕ ಪ್ರೇಮ ಇರುವುದುಂಟು. ಆದರೂ ಅವರಿಗದರ ಅರಿವು ಇರುವುದಿಲ್ಲ. ತಾವು ಜಡಭಾವದವರೆಂದೋ, ಭಾವನೆ ಇಲ್ಲದವರೆಂದೋ, ಶುಷ್ಕರೆಂದೋ ಭಾವಿಸುತ್ತಾರೆ. ಏಕೆಂದರೆ ಅದರಲ್ಲಿ ಪ್ರಾಣಿಕದ ಕಂಪನ ಇರುವುದಿಲ್ಲ. ಅಂಥವರಿಗೆ ಪ್ರೀತಿ ಅಂದರೆ ಇಂಥ ಕಂಪನದಿಂದ ಆರಂಭವಾಗುತ್ತದೆ. ಇಂಥ ಕಂಪನದೊಂದಿಗೇ ಮುಗಿದುಬಿಡುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/323–24**

## ಅಂತರಾತ್ಮಿಕ ಪ್ರೇಮ

ಅಂತರಾತ್ಮಿಕ ಪ್ರೇಮವು ಕೂಡ ಪ್ರಾಣಿಕದಷ್ಟೇ ಅಥವಾ ಅದಕ್ಕಿಂತಲೂ ತೀವ್ರವಾಗಿರುವ ಬಿಸುಪು (ಉತ್ತಾಪ) ಹಾಗೂ ಜ್ಯೋತಿಯನ್ನು ಹೊಂದಿರಬಹುದು. ಆದರೆ ಇಷ್ಟೇ ಅದು ಪರಿಶುದ್ಧವಾದ ಅಗ್ನಿ. ಅದು ಅಹಂ–ಹಂಬಲದ ತೃಪ್ತಿಯ ಮೇಲೆ ಅವಲಂಬಿತವಾಗಿರುವುದಿಲ್ಲ ಹಾಗೂ ತನ್ನ ಸಮಿತ್ತನ್ನು ಅಂದರೆ ಇಂಧನವನ್ನು ತಾನೇ ಸಂಪೂರ್ಣ ನಾಶ ಮಾಡಿಬಿಡುವುದಿಲ್ಲ. ಅದು ಶ್ವೇತ ಜ್ಯೋತಿಯೇ ಹೊರತು ಕೆಂಪು ವರ್ಣದ್ದಲ್ಲ. ಶ್ವೇತ ಉಷ್ಣತೆಯು ತೀವ್ರತೆಯಲ್ಲಿ ಕೆಂಪು ವರ್ಣದಕ್ಕಿಂತ ಕಡಿಮೆಯದೇನಲ್ಲ. ಅಂತರಾತ್ಮಿಕ ಪ್ರೇಮವು ಮಾನವ ಸಂಬಂಧಗಳಲ್ಲಾಗಲಿ, ಮಾನವ ಸ್ವಭಾವದಲ್ಲಾಗಲಿ ಸಂಪೂರ್ಣವಾಗಿ ವ್ಯಕ್ತವಾಗುವುದಿಲ್ಲವೆಂಬುದೇನೋ ನಿಜವೇ. ತನ್ನ ತೀವ್ರತೆ, ಉತ್ಸಾಹ, ಆನಂದ ಎಲ್ಲವನ್ನು ಸಂಪೂರ್ಣವಾಗಿ ವ್ಯಕ್ತಪಡಿಸುವುದು ಅದು ಭಗವಂತನೆಡೆಗೆ ಉತ್ಥಿತವಾದಾಗ ಮಾತ್ರವೇ! ಮಾನವ ಸಂಬಂಧಗಳ ನೆಲೆಯಲ್ಲಿ ಅಂತರಾತ್ಮಿಕ ಪ್ರೇಮವು ಇತರ ಬೇರೆ ಬೇರೆ ಅಂಶಗಳಿಂದ ಕೂಡಿಕೊಂಡು ಬಿಡುತ್ತದೆ. ಅವು ಇದನ್ನು ಉಪಯೋಗಿಸಿಕೊಂಡು ಇದನ್ನೇ ಮೀರಿ ನಿಂತುಬಿಡುತ್ತವೆ. ಅಂತರಾತ್ಮಿಕ ಪ್ರೇಮವು ಕೇವಲ ಕೆಲವೇ ಕೆಲ ಅಪರೂಪದ ಕ್ಷಣಗಳಲ್ಲಿ ಮಾತ್ರ ತನ್ನ ಪೂರ್ಣ ತೀವ್ರತೆಯೊಂದಿಗೆ ಅಭಿವ್ಯಕ್ತವಾಗುವ ಅವಕಾಶವನ್ನು ಕಂಡುಕೊಳ್ಳುವುದು. ಅನ್ಯಥಾ ಅದೂ ಸಹ ಒಂದು ಭಾವಾಭಿವ್ಯಕ್ತಿಯ ಅಂಶವೆಂಬಂತೆ ಬಂದು ಹೋಗುವುದು. ಅಷ್ಟೇ ಅಲ್ಲ ಅಂಥ ಸಂದರ್ಭಗಳಲ್ಲಿ ಕೂಡ ತನ್ನೆಲ್ಲ ಉನ್ನತ ಅಂಶಗಳನ್ನು – ಮಾಧುರ್ಯ, ಮಾರ್ದವತೆ, ವಿಶ್ವಾಸ, ಆತ್ಮನಿವೇದನೆ, ಆತ್ಮ ಸಮರ್ಪಣೆ, ಒಂದು ಆತ್ಮ ಇನ್ನೊಂದು ಆತ್ಮದ ಜೊತೆ ಸಂವಹನ ನಡೆಸುವುದು, ಮಾನವೀಯ ಪ್ರೇಮವನ್ನು ಅದರ ಮಿತಿಯನ್ನು ಮೀರಿಹೋಗುವಂತೆ ಮಾಡಿ, ಅದರಲ್ಲಿ ಅಂತರಾತ್ಮಿಕ ಅಂಶ ಸೇರಿಕೊಳ್ಳುವಂತೆ ಮಾಡುವುದು ಹೀಗೆ ಎಲ್ಲವನ್ನೂ ಪ್ರಾಣಿಕ ಪ್ರಭುತ್ವದ ಪ್ರೇಮದಲ್ಲಿಯೇ ಸೇರಿಸಿಬಿಡುತ್ತದೆ. ಬದಲಾಗಿ ಅದೇ ಎಲ್ಲ ಅಂಶಗಳನ್ನು, ಮಾನಸಿಕ, ಪ್ರಾಣಿಕ, ಭೌತಿಕ, ಮಾನವ ಪ್ರೇಮ ಮುಂತಾದವುಗಳ ಮೇಲೆ ಪ್ರಭುತ್ವ ಸಾಧಿಸಿ ಅವುಗಳನ್ನು ನಿಯಂತ್ರಿಸಲು, ರೂಪಾಂತರಿಸಲು ಆರಂಭ ಮಾಡಿದರೆ ಆಗ ಪ್ರೇಮವೆಂಬುದು ಈ ಭೂಮಿಯ ಮೇಲೆ ನಿಜವಾದ ಸದ್ವಸ್ತುವಿನ ಪ್ರತಿಬಿಂಬವೋ, ಸಿದ್ಧತೆಯೋ ಆಗಿ ತೋರಿ ಬರುವುದು. ಆತ್ಮ ಮತ್ತು ಅದರ ಉಪಕರಣಗಳನ್ನು ಈ ದ್ವಂದ್ವಗಳ ಜಗತ್ತಿನಲ್ಲಿ ಸಮಗ್ರವಾಗಿ ಬೆಸೆಯುವ ಏಕೈಕ ತತ್ವವಾಗಿರುವುದು. ಆದರೆ

ಇಂಥ ಪ್ರೇಮದ ಅಪರಿಪೂರ್ಣ ಅಭಿವ್ಯಕ್ತಿ ಕೂಡ ಅತ್ಯಂತ ಅಪರೂಪದ ವಿಷಯವೇ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/307–08**

ಯಾವುದೇ ಬಯಕೆ ಇಲ್ಲ, ಯಾವ ಬೇಡಿಕೆಯೂ ಇಲ್ಲ. ಕೇವಲ ಪರಿಶುದ್ಧವಾದ ಪ್ರೀತಿ, ಆತ್ಮನಿವೇದನೆಗಳಿರುವುದು ಮಾತ್ರ ಅಂತರಾತ್ಮಿಕ ಪ್ರೇಮವಾಗಿದೆ.

*

ಅಂತರಾತ್ಮಿಕ ಪ್ರೇಮವು ಅತ್ಯಂತ ತೃಪ್ತಿದಾಯಕವಾಗಿರುತ್ತದೆ. ಅದು ಪ್ರಾಣಿಕ ಪ್ರೇಮವನ್ನು ಕೂಡ ಹಿರಿದಾದ, ಉನ್ನತವಾದ, ಸುಂದರವಾದುದನ್ನಾಗಿ ಪರಿವರ್ತಿಸಬಲ್ಲದು.

*

ಅಂತರಾತ್ಮಿಕ ಪ್ರೇಮವು ಪರಿಶುದ್ಧ, ಪ್ರತಿಫಲ ಅನಾಸಕ್ತ, ಆತ್ಮನಿವೇದನೆಯ ವಿಷಯ ಬಂದಾಗ ಅತ್ಯಂತ ಶ್ರದ್ಧಾಪೂರ್ಣವಾಗಿರುವಂಥದು. ಆದರೆ ಅದು ಸಾಮಾನ್ಯವಾಗಿ ಪರಿಶುದ್ಧವಾಗಿ ಉಳಿಯುವುದಿಲ್ಲ. ಮಾನವರು ಇತರರೆಡೆಗೆ ಆಕರ್ಷಿತವಾಗುವ ಸಮಯದಲ್ಲಿ ಅದು ವಿಕೃತ ಅಥವಾ ದೂಷಿತವಾಗುವುದುಂಟು. ಸಾಧನೆ ಮಾಡುತ್ತಿರುವ ಸಮಯದಲ್ಲಿ ಸಾಧಕನಾದವನು ಈ ಅಂತರಾತ್ಮಿಕ ಪ್ರೇಮದ ವಿಷಯದ ಬಗ್ಗೆ ತುಂಬ ಜಾಗರೂಕನಾಗಿರಬೇಕು – ಏಕೆಂದರೆ ಪ್ರಾಣಿಕವು ಬೇರೆ ರೂಪ ಧರಿಸಿ ತನ್ನನ್ನು ಸಮರ್ಥನೆ ಮಾಡಿಕೊಳ್ಳುವ ಸ್ವಭಾವದ್ದಿರುತ್ತದೆ, ಆದ್ದರಿಂದ ಪ್ರಾಣಿಕದ ಆಕರ್ಷಣೆಗೆ ಹಾಗೂ ಅವುಗಳ ನಿರಂತರ ಸಹವಾಸಕ್ಕೆ ಮೋಸಹೋಗುವ ಸಂಭವ ಇರುತ್ತದೆ.

ವಿಶ್ವಾತ್ಮಕ ಪ್ರೇಮವು ಆಧ್ಯಾತ್ಮಿಕವಾಗಿರುತ್ತದೆ. ಅದು ಏಕತೆ ಮತ್ತು ಪರಮಾತ್ಮನ ಸರ್ವವ್ಯಾಪಕತೆಯ ಅನುಭಾವದ ಮೇಲೆ ಆಧಾರಿತವಾಗಿರುತ್ತದೆ, ವೈಯಕ್ತಿಕತೆಯನ್ನು ಮೀರಿ ಎಲ್ಲ ಬಗೆಯ ಲೋಲುಪತೆ ಹಾಗೂ ಅಜ್ಞಾನವನ್ನು ಮೀರಿ ವಿಶಾಲವಾದ ವಿಶ್ವಾತ್ಮಕ ಪ್ರಜ್ಞೆಯ ಮೇಲೆ ಅವಲಂಬಿತವಾಗಿರುತ್ತದೆ.

ದೈವೀ ಪ್ರೇಮವು ಎರಡು ಬಗೆಯದಾಗಿರುತ್ತದೆ, ಸೃಷ್ಟಿ ಮತ್ತು ತನ್ನದೇ ಭಾಗಗಳಾದ ಜೀವಾತ್ಮಗಳ ಬಗೆಗೆ ಇರುವ ಪ್ರೀತಿ ಮತ್ತು ಸಾಧಕನಾದವನಲ್ಲಿರುವ

ಪ್ರೇಮ ಹಾಗೂ ಅವನಿಗೆ ಭಗವಂತನ ಬಗೆಗೆ ಇರುವ ಪ್ರೀತಿ. ತನ್ನ ದೈವೀ ಪ್ರಿಯಕರನ ಬಗೆಗೆ ಇರುವ ಪ್ರೀತಿ. ಅದರಲ್ಲಿ ಎರಡೂ ಬಗೆಯ ಅಂಶಗಳಿರುತ್ತವೆ. ವೈಯಕ್ತಿಕ ಮತ್ತು ನಿರ್ವೈಯಕ್ತಿಕ. ಆದರೆ ಇಲ್ಲಿನ ವೈಯಕ್ತಿಕ ಪ್ರೇಮದಲ್ಲಿ ಕೂಡ ಯಾವ ನಿಮ್ನ ಸ್ತರದ ಅಂಶಗಳೂ, ಪ್ರಾಣಿಕದ ಬಂಧನಗಳೂ ಹಾಗೂ ಭೌತಿಕದ ಸಹಜ ಪ್ರವೃತ್ತಿಗಳೂ ಇರುವುದಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/336–346**

ನಿಜವಾದ ಆನಂದವು ಯಾವದೇ ರೀತಿಯ ಬಾಹ್ಯ ಪರಿಸ್ಥಿತಿಗಳ ಮೇಲೆ ಅವಲಂಬಿಸಿರುವುದಿಲ್ಲ. ಅಂಥ ನಿಜವಾದ ಆನಂದವನ್ನು ಅರ್ಜಿಸಿ ನಿರಂತರ ಕಾಯ್ದುಕೊಳ್ಳಬೇಕಾದರೆ ಸಾಧಕನಾದವನು ತನ್ನ ಅಂತರಾತ್ಮನನ್ನು ಕಂಡುಹಿಡಿದು ಅದರ ಜೊತೆಗೆ ಒಂದಾಗಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/289**

ಈ ನಿನ್ನ ಅಂತರಾತ್ಮ ಅಥವಾ ಚೈತ್ಯ ಪುರುಷ, ಉಳಿದೆಲ್ಲ ಅಂತರಾತ್ಮಗಳಂತೆ ನನ್ನನ್ನು ಪ್ರೀತಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 17/106 – ಶ್ರೀಮಾತೆ**

**ಅಂತರಾತ್ಮಿಕ ಭಾವ**

ಮೊದಲು ಈ ಅಂತರಾತ್ಮನ ಸಾನ್ನಿಧ್ಯದ ಅರಿವು ಆಗಲೇಬೇಕು. ಆನಂತರ ಶ್ರೀಮಾತೆಯ ಸಾನ್ನಿಧ್ಯದ ಅನುಭವ ಆಗಬೇಕೆಂಬ ನಿಯಮವೇನಿಲ್ಲ ಹಾಗೆಯೇ ಆಗಲೇಬೇಕೆಂಬ ಅವಶ್ಯಕತೆಯೂ ಇಲ್ಲ. ಅನೇಕ ಸಲ ಶ್ರೀಮಾತೆಯವರ ಸಾನಿಧ್ಯದ ಸಂವೇದನೆಯ ತೀವ್ರತೆಯೇ ಅಂತರಾತ್ಮನ ಅರಿವು ಮೂಡಿಸುವುದುಂಟು. ಏಕೆಂದರೆ ಆ ಸಂವೇದನೆ ಅಥವಾ ಅನಿಸಿಕೆ ಬರುವುದೇ ಅಂತರಾತ್ಮಿಕ ಪ್ರಜ್ಞೆಯಿಂದ ಮತ್ತು ಈ ಅಂತರಾತ್ಮಿಕ ಪ್ರಜ್ಞೆ ಬೆಳೆಯುತ್ತ ಹೋದಂತೆಲ್ಲ ಅಂತರಾತ್ಮನ ನಿರಂತರ ಇರುವಿಕೆ, ಸಾನ್ನಿಧ್ಯವನ್ನು ಸಾಧ್ಯವಾಗಿಸುತ್ತ ಹೋಗುವುದು. ಸಂವೇದನೆ ಅಥವಾ ಅನಿಸಿಕೆ ಅಂತರಾತ್ಮದಿಂದಲೇ ಬರುವುದು ಮತ್ತು ಅದು ಅಂತಃಸತ್ತೆಯ ಸತ್ಯವೂ

ಹೌದು – ಅದು ಸಂಪೂರ್ಣವಾಗಿ ಇನ್ನೂ ಪಾಲ್ಗೊಂಡಿಲ್ಲವೆನ್ನುವುದು ನಿಜವಾದರೂ ಇದೇನೊ ಕೇವಲ ಕಲ್ಪನೆ ಅಲ್ಲ. ಬದಲಾಗಿ, ಹೆಚ್ಚು ಹೆಚ್ಚು ಬೆಳೆದಂತೆಲ್ಲ ಇಡೀ ಸತ್ತೆಯು ಈ ಸತ್ಯವನ್ನು ಅಭಿವ್ಯಕ್ತಗೊಳಿಸುವುದು. ಅಂತರಂಗದ ಭಾವವು ಹೆಚ್ಚು ಹೆಚ್ಚಾಗಿ ಬಾಹ್ಯ ಪ್ರಜ್ಞೆಯನ್ನು ಆಕ್ರಮಿಸುತ್ತ ಹೋಗುವುದು ಹಾಗೂ ಆ ಬಾಹ್ಯ ಪ್ರಜ್ಞೆಯನ್ನು ಕೂಡ ಸತ್ಯದ ಪ್ರಕಾರವೇ ಬದಲಾಯಿಸುತ್ತ ಹೋಗುವುದು. ಯೌಗಿಕ ಪರಿವರ್ತನೆಯಲ್ಲಿ ಈ ತತ್ವವೇ ಸದಾ ಕೆಲಸ ಮಾಡುವುದು – ಯಾವುದು ಆಂತರ್ಯದಲ್ಲಿ ಸತ್ಯವಾಗಿದೆಯೋ ಅದೇ ಹೊರಬರುವುದು. ಮನಸ್ಸು, ಹೃದಯ ಮತ್ತು ಸಂಕಲ್ಪಗಳನ್ನು ತನ್ನ ಸುಪರ್ದಿಗೆ ತೆಗೆದುಕೊಳ್ಳುವುದು ಮತ್ತು ಅವುಗಳ ಮೂಲಕ ಬಾಹ್ಯದ ಅಜ್ಞಾನದ ಭಾಗಗಳ ಮೇಲೆ ಕೆಲಸ ಮಾಡುತ್ತ ಅವುಗಳಲ್ಲಿಯೂ ಅಂತರಂಗದ ಸತ್ಯವನ್ನು ಪ್ರಕಟ ಮಾಡುವುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/174**

**ಸದೈವ ಶ್ರೀಮಾತೆಯ ಸಾನ್ನಿಧ್ಯವನ್ನು ಅನುಭವಿಸುವುದು**

ನೀನು ಹೆಚ್ಚು ಹೆಚ್ಚು ಅಂತರಾತ್ಮಿಕ ಪ್ರಜ್ಞೆಯಲ್ಲಿ, ನಿನ್ನೊಳಗೆ ಆಳಕ್ಕೆ ಇಳಿಯುತ್ತಿರುವಿ. ಯಾವಾಗ ಅಂತರಾತ್ಮಿಕದಲ್ಲಿ ಇರಲು ಸಾಧ್ಯವಾಗುವುದೋ ಆಗ ಶ್ರೀಮಾತೆಯ ಸಾನ್ನಿಧ್ಯದ ನಿರಂತರತೆಯ ಅರಿವು ಆಗುವುದು. ಇದು ಮೇಲಿಂದ ಮೇಲೆ ಆಗುತ್ತ, ನಿರಂತರವಾಗಿ ಆಗುತ್ತ, ವೈವಿಧ್ಯಮಯವೂ ನೈಜವೂ ಆಗುತ್ತ ಹೋಗುವುದು. ಅಂತರಾತ್ಮ ತನ್ನ ಶಕ್ತಿಯನ್ನು ಬೆಳೆಸಿಕೊಂಡಾಗ ಇದು ಸಾಧ್ಯವಾಗುವುದು. ಶ್ರೀಮಾತೆಯ ಸಾನ್ನಿಧ್ಯವು ಬೇರೆ ಬೇರೆ ಸಾಧಕರಿಗೆ ಬೇರೆ ಬೇರೆ ರೀತಿಯಲ್ಲಿಯೇ ಆಗುವುದು. ಆದರೆ ಅದು ಸಾಧನೆಯ ನಿಜವಾದ ಅನುಭವವೇ. ಶ್ರೀಮಾತೆಯವರನ್ನು ಹೃದಯದಲ್ಲಿ ಅಥವಾ ಅಂತರಂಗದಲ್ಲಿ ಕಾಣಬೇಕೆಂದು ನಾವು ಹೇಳಿರುವುದು ಇದೇ ಅರ್ಥದಲ್ಲಿ. ಏಕೆಂದರೆ ಆಕೆ ಅಲ್ಲಿ ಸದಾ ಇದ್ದಾರೆ, ಅವರ ಸಾನ್ನಿಧ್ಯವು ಮನಸ್ಸಿನ, ಪ್ರಾಣಿಕದ ಹಾಗೂ ಭೌತಿಕದ ಸಾಮಾನ್ಯ ಚಲನೆಗಳಿಂದಾಗಿ ಮರೆಯಾಗಿದೆ, ಕಾಣದಂತಾಗಿದೆ. ಯಾವಾಗ ಇವೆಲ್ಲ ಶಾಂತವಾಗುವುವೋ, ಅಂತರಾತ್ಮವು ಹೊರಬಂದು ಪ್ರಕಟವಾಗುವುದೋ ಆಗ ತನ್ನೊಳಗಿರುವ ದೈವೀ ಸಾನ್ನಿಧ್ಯದ ಅನುಭವ ಸಾಧಕನಿಗೆ ಆಗುವುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/187**

## ಅಂತರಾತ್ಮಿಕ ಆರಾಧನೆ

ಎರಡೂ ಅಂದರೆ, ನೀನು ಅತಿ ಪ್ರಬಲ ಎಂದು ಗುರುತಿಸುವ, ಹೇಳುವ, ಶ್ರೀಮಾತೆಯವರ ಬಗ್ಗೆ ನಿನಗಿರುವ ಪ್ರೀತಿ ಹಾಗೂ ನೀನು ಯಾರ ಜೊತೆಗೆ ಇರುವಿಯೋ, ಯಾರ ಜೊತೆಗೆ ಕೆಲಸ ಮಾಡುವಿಯೋ ಅವರೆಲ್ಲರ ಜೊತೆಗೆ ನಿನಗಿರುವ ಸಾಮರಸ್ಯ, ಪ್ರೀತಿ, ವಾತ್ಸಲ್ಯ ಇವೆಲ್ಲ ಬರುವುದು ಅಂತರಾತ್ಮಿಕ ಸತ್ತೆಯಿಂದಲೇ. ಅಂತರಾತ್ಮವು ತನ್ನ ಪ್ರಭಾವದ ತೀವ್ರತೆಯನ್ನು ಅಧಿಕಗೊಳಿಸಿದರೆ, ಶ್ರೀಮಾತೆಯವರ ಬಗ್ಗೆ ಇರುವ ನಿನ್ನ ಪ್ರೇಮ ಹೆಚ್ಚಾಗುವುದು ಮತ್ತು ಪ್ರಕೃತಿಯನ್ನು ಸಂಚಾಲಿತಗೊಳಿಸುವ ಮುಖ್ಯ ಉಪಕರಣವಾಗುವುದು. ನಿನ್ನೊಳಗೆ ಇನ್ನೊಂದು ಸಂವೇದನೆ ಇದೆಯಲ್ಲ, ಸದಿಚ್ಛೆ, ಸಾಮರಸ್ಯ, ಬೇರೆಯವರ ಬಗ್ಗೆ ಇರುವ ಅನುಕಂಪ, ದಯೆ ಮತ್ತು ಪ್ರೀತಿ ಅದೂ ಕೂಡ ಮೇಲ್ಮೈಗೆ ಬರುತ್ತದೆ. ಆದರೆ ಅದರಲ್ಲಿ ವೈಯಕ್ತಿಕತೆಯ ಅಂಶ ಅಷ್ಟಾಗಿ ಇರುವುದಿಲ್ಲ. ಏಕೆಂದರೆ ಶ್ರೀಮಾತೆಯವರ ಮಕ್ಕಳಂತಿರುವ ಎಲ್ಲ ಜೀವಿಗಳ ಅಥವಾ ಜನರ ಬಗೆಗೆ ಆಂತರಿಕ ಸಂಬಂಧ ಬೆಳೆದಿರುತ್ತದೆ. ಇಂಥ ಅಂತರಾತ್ಮಿಕ ಭಾವನೆಯಿಂದ ಯಾವ ತೊಂದರೆಯೂ ಇಲ್ಲ. ಅದು ಸಾಮರಸ್ಯವನ್ನು ಸಂತೋಷವನ್ನುಂಟುಮಾಡುತ್ತದೆ. ಪರಸ್ಪರರ ನಡುವಣ ಪ್ರಾಣಿಕ ಪ್ರೇಮವನ್ನು ನಿರಾಕರಿಸಬೇಕು, ಏಕೆಂದರೆ ಅದು ಭಗವಂತನಿಗೆ ಇಡಿಯಾಗಿ ನಿವೇದಿಸಿಕೊಳ್ಳುವುದನ್ನು ತಡೆಯುತ್ತದೆ. ಆದರೆ ಇಂಥ ಅಂತರಾತ್ಮಿಕ ಭಾವವು ಶ್ರೀಮಾತೆಯವರ ಪ್ರಜ್ಞೆಯಲ್ಲಿ ಆತ್ಮವು ಬೆಳೆಯುವುದಕ್ಕೆ ಸಹಾಯ ಮಾಡುವುದು, ಸಾಧನೆ ಹಾಗೂ ಆಂತರಿಕ ಜೀವನ ಬೆಳೆಯುವುದಕ್ಕೂ ಸಹಾಯ ಮಾಡುವುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/463**

## ಅಂತರಾತ್ಮಿಕ ಭಕ್ತಿ

ಅಂತರಾತ್ಮನ ಜಾಗೃತಿಯಾದಾಗ ನಿಮಗೆ ನಿಮ್ಮ ಆತ್ಮದ ಬಗ್ಗೆ ಅರಿವು ಮೂಡುತ್ತದೆ. ನೀವು ನಿಮ್ಮ ಆತ್ಮವನ್ನು ಗುರುತಿಸುತ್ತೀರಿ. ನಿಮ್ಮನ್ನು ಮಾನಸಿಕ ಅಥವಾ ಪ್ರಾಣಿಕ ಸತ್ತೆಯ ಜೊತೆ ಗುರುತಿಸಿಕೊಳ್ಳುವ ತಪ್ಪನ್ನು ಮುಂದೆ ಮಾಡುವುದಿಲ್ಲ. ಅವುಗಳನ್ನು ನಿಮ್ಮ ಆತ್ಮ ಎಂದು ತಪ್ಪಾಗಿ ಭಾವಿಸುವುದಿಲ್ಲ. ಎರಡನೆಯದಾಗಿ ಅದು ಜಾಗೃತಿಯಾದ ಮೇಲೆ ಭಗವಂತನ ಬಗ್ಗೆ ನಿಮ್ಮ

ಗುರುವಿನ ಬಗ್ಗೆ ನಿಮಗೆ ನಿಜವಾದ ಭಕ್ತಿ ಬೆಳೆಯುವುದು. ಅಂಥ ಭಕ್ತಿಯು ಮಾನಸಿಕ ಅಥವಾ ಪ್ರಾಣಿಕ ಭಕ್ತಿಗಿಂತ ತುಂಬ ಭಿನ್ನವಾಗಿರುತ್ತದೆ.

ಮನಸ್ಸಿನಲ್ಲಿ ಓರ್ವ ವ್ಯಕ್ತಿಯ ಬಗೆಗೆ ಅಥವಾ ಗುರುವಿನ ಬಗೆಗೆ ಅತಿಯಾದ ಗೌರವ, ಅಭಿಮಾನ ಇರಬಹುದು. ಆದರೆ ಅದು ಕೇವಲ ಮಾನಸಿಕವಾದುದು; ಅದರಿಂದೇನೂ ಬಹಳ ಪ್ರಗತಿ ಆಗುವುದಿಲ್ಲ. ಹಾಗೆಂದು ಅಂಥ ಅಭಿಮಾನ ಇರುವುದರಿಂದ ತೊಂದರೆ ಏನಿಲ್ಲ. ಆದರೆ ಅಷ್ಟೇ ಇದ್ದ ಮಾತ್ರಕ್ಕೆ ಇಡೀ ಅಂತಃಸತ್ತೆಯು ತೆರೆದುಕೊಳ್ಳಲಾರದು. ಅದು ಕೇವಲ ಮಾನಸಿಕ ಸಂಪರ್ಕವನ್ನು ಕಲ್ಪಿಸುತ್ತದೆ ಅಷ್ಟೇ.

ಪ್ರಾಣಿಕ ಭಕ್ತಿಯು ಸದಾ ಬೇಡಿಕೆಗಳನ್ನು ಇಡುತ್ತಲೇ ಇರುತ್ತದೆ. “ಭಗವಂತ ನೀನು ದೊಡ್ಡವನು, ನಾನು ನಿನ್ನನ್ನು ಆರಾಧಿಸುತ್ತೇನೆ, ನನ್ನ ಈ ಅಭಿಲಾಷೆಯನ್ನು, ಮಹತ್ವಾಕಾಂಕ್ಷೆಯನ್ನು ನೀನು ಈಡೇರಿಸು, ನನ್ನನ್ನು ಮಹಾನನ್ನಾಗಿ ಮಹಾನ್ ಸಾಧಕನನ್ನಾಗಿ, ಮಹಾ ಯೋಗಿಯನ್ನಾಗಿ ಮಾಡು” ಎಂದು ಭಗವಂತನನ್ನು ಬೇಡುತ್ತದೆ.

ಅಪ್ರಕಾಶಿತವಾದ ಮನಸ್ಸು ಅಂದರೆ ಇನ್ನೂ ಜ್ಞಾನದ ಬೆಳಕಿನಿಂದ ಕೂಡಿರದ ಮನಸ್ಸು ಕೂಡ ಪರಾ ಸತ್ಯಕ್ಕೆ ಶರಣಾಗುತ್ತದೆ. ಆದರೆ ಅದು ತನ್ನದೇ ಆದ ಷರತ್ತುಗಳನ್ನು ವಿಧಿಸುತ್ತದೆ. “ನನ್ನ ಈ ನಿರ್ಣಯವನ್ನು ಪೂರೈಸು, ನನ್ನ ಅಭಿಪ್ರಾಯವನ್ನು ಸಮರ್ಥಿಸು” ಎಂದು ಸತ್ಯಕ್ಕೆ ಹೇಳುತ್ತದೆ. ಪರಾ ಸತ್ಯವು ಕೂಡ ಮನಸ್ಸಿನ ಆಕಾರಗಳಲ್ಲೇ ಒಡಮೂಡಿ ಬರಬೇಕೆಂಬ ಬೇಡಿಕೆ ಅದರದು.

ಪ್ರಾಣಿಕ ಸತ್ತೆ ಕೂಡ ಪರಾ ಸತ್ಯವು ತನ್ನ ಚಲನೆಯಲ್ಲಿಯೇ ಒಡಗೂಡಬೇಕೆಂದು ಬಯಸುತ್ತದೆ. ಪ್ರಾಣಿಕ ಸತ್ತೆಯು ಮೇಲಿನ ಶಕ್ತಿಯನ್ನು ಎಳೆಯುತ್ತದೆ. ಕೆಳಕ್ಕೆ ಎಳೆದೇ ಎಳೆಯುತ್ತದೆ. ಗುರುವಿನ ಪ್ರಾಣಿಕ ಸತ್ತೆಯೆಡೆಗೆ ಸೆಳೆಯುತ್ತದೆ. ಅವೆರಡೂ (ಮಾನಸಿಕ ಮತ್ತು ಪ್ರಾಣಿಕ) ತಮ್ಮ ಶರಣಾಗತಿಯಲ್ಲಿ ಮಾನಸಿಕ ಮೀಸಲಾತಿಯನ್ನು ಕಾಯ್ದುಕೊಳ್ಳುತ್ತವೆ.

ಆದರೆ ಅಂತರಾತ್ಮ ಮತ್ತು ಅದರ ಭಕ್ತಿ ಹೀಗಿರುವುದಿಲ್ಲ. ಏಕೆಂದರೆ ಹಿಂದಿರುವ ಪರಮಾತ್ಮನ ಜೊತೆ, ದೈವತ್ವದ ಜೊತೆ ನೇರವಾದ ಸಂಪರ್ಕ ಹೊಂದಿರುತ್ತದೆ. ಅದು ನಿಜವಾದ ಭಕ್ತಿಯನ್ನು ಹೊಂದಿರುತ್ತದೆ. ಅಂತರಾತ್ಮಿಕ ಭಕ್ತಿಯು ಯಾವುದೇ ಬೇಡಿಕೆಗಳನ್ನೂ ಇಡುವುದಿಲ್ಲ. ಎಂಥ ಮೀಸಲಾತಿಯನ್ನೂ

ಕಾಯ್ದುಕೊಳ್ಳುವುದಿಲ್ಲ. ತನ್ನ ಇರುವಿಕೆಯ ಜೊತೆ ಅದು ತೃಪ್ತವಾಗಿರುತ್ತದೆ. ಅಂತರಾತ್ಮಿಕ ಸತ್ತೆಗೆ ದೈವೀ ಸತ್ಯಕ್ಕೆ ಹೇಗೆ ವಿಧೇಯವಾಗಿರಬೇಕೆಂಬುದು ಗೊತ್ತು. ಭಗವಂತನಿಗೆ ಅಥವಾ ಗುರುವಿಗೆ ತನ್ನನ್ನು ಹೇಗೆ ಒಪ್ಪಿಸಿಕೊಳ್ಳಬೇಕೆಂಬುದು ಗೊತ್ತು. ಅದು ನಿಜವಾಗಿ ಸಮರ್ಪಣಾಭಾವ ಹೊಂದಿರುವುದರಿಂದ ಭಗವಂತನ ಕೃಪೆಯನ್ನು ಹೇಗೆ ಸ್ವೀಕರಿಸಬೇಕೆಂಬುದನ್ನೂ ಬಲ್ಲದು. ಮೂರನೆಯದಾಗಿ, ಅಂತರಾತ್ಮಿಕ ಸತ್ತೆಯು ಮೇಲ್ಮೈಗೆ ಬಂದಾಗ ಮಾನಸಿಕ ಅಥವಾ ಪ್ರಾಣಿಕ ಸತ್ತೆಗಳು ಅದನ್ನು ಅಪಹಾಸ್ಯ ಮಾಡಿದರೆ ಅದು ಖಿನ್ನವಾಗುತ್ತದೆ. ಆ ಖಿನ್ನತೆ ಅಂದರೆ ಪರಿಶುದ್ಧತೆಯ ಅವಹೇಳನವೇ, ಮನಸ್ಸು ತನ್ನದೇ ಆದ ಆಟ ಆಡುತ್ತಿದ್ದರೆ, ಪ್ರಾಣಿಕವು ತನ್ನದೇ ಆದ ಪ್ರಚೋದನೆಗಳಲ್ಲಿ ಹೊಡೆದುಕೊಂಡು ಹೋಗುತ್ತಿದ್ದರೆ ಅಂತರಾತ್ಮವು "ನನಗಿವೆಲ್ಲ ಬೇಡ. ನಾನಿಲ್ಲಿರುವುದು ಏತಕ್ಕಾಗಿ? ನಾನಿಲ್ಲಿರುವುದು ದೈವೀ ಸತ್ಯಕ್ಕಾಗಿ, ಇಂಥ ಸಂಗತಿಗಳಿಗಾಗಿ ನಾನಿಲ್ಲಿ ಇಲ್ಲವಲ್ಲ" ಎಂದು ಹೇಳಿಕೊಳ್ಳುತ್ತದೆ.

ಇಂಥ ಅಂತರಾತ್ಮಿಕ ಖಿನ್ನತೆಯು ಮಾನಸಿಕ ಅತೃಪ್ತಿಗಿಂತ ಅಥವಾ ಪ್ರಾಣಿಕ ಖಿನ್ನತೆ ಅಥವಾ ಭೌತಿಕ ಖಿನ್ನತೆಗಿಂತ ತುಂಬಾ ಭಿನ್ನವಾದುದು.

ಅಂತರಾತ್ಮವು ಪ್ರಬಲವಾಗಿದ್ದರೆ ಮಾನಸಿಕ ಅಥವಾ ಪ್ರಾಣಿಕ ಸತ್ತೆಗಳ ಮೇಲೆ ತನ್ನ ಪ್ರಭಾವ ಬೀರುತ್ತದೆ ಮತ್ತು ಅವುಗಳ ಮೇಲೆ ಬದಲಾಗುವಂತೆ ಒತ್ತಡ ಹೇರುತ್ತದೆ. ಅವು ಬದಲಾಗುವಂತೆ ಮಾಡುತ್ತದೆ. ದುರ್ಬಲವಾಗಿದ್ದರೆ, ಬೇರೆ ಭಾಗಗಳು ಅದರ ದುರ್ಲಾಭ ಪಡೆಯುತ್ತವೆ ಮತ್ತು ಅಂತರಾತ್ಮಿಕ ಖಿನ್ನತೆಯನ್ನು ತಮ್ಮ ಲಾಭಕ್ಕೆ ಬಳಸಿಕೊಳ್ಳುತ್ತವೆ.

ಕೆಲವರಲ್ಲಿ ಅಂತರಾತ್ಮವು ಮೇಲ್ಮೈಗೆ ಬಂದಾಗ ಮಾನಸಿಕ ಮತ್ತು ಪ್ರಾಣಿಕ ಸತ್ತೆಗಳ ಲಯವನ್ನೇ ಕೆಡಿಸಿಬಿಡುತ್ತದೆ. ಹೀಗಾಗಿ ಅತ್ಯಂತ ದುರವಸ್ಥೆ ಉಂಟಾಗುತ್ತದೆ. ಮಾನಸಿಕ ಅಥವಾ ಪ್ರಾಣಿಕ ಸತ್ತೆ ಬಲಿಷ್ಠವಾಗಿದ್ದರೆ ಮಾತ್ರ ಅಂತರಾತ್ಮವು ಆವಾಗಾವಾಗ ತನ್ನ ಪ್ರಭಾವ ಬೀರುತ್ತ ನಿಧಾನವಾಗಿ ಹಿಂದೆ ಸರಿಯುತ್ತದೆ. ಅದರ ಹಾರಾಟವೆಲ್ಲ ನಿಂತು ಹೋಗುತ್ತದೆ. ಪ್ರಾಣಿಕ ಅಥವಾ ಮಾನಸಿಕ ಸತ್ತೆಗಳು ತಮ್ಮ ಆಟವನ್ನು ಮುಂದುವರಿಸುತ್ತವೆ.

ಕೊನೆಯದಾಗಿ, ಅಂತರಾತ್ಮವು ಕೇವಲ ತೋರಿಕೆಗಳಿಂದ ಎಂದಿಗೂ ಮೋಸ ಹೋಗುವುದಿಲ್ಲ ಅಸತ್ಯವು ಅದನ್ನು ವಂಚಿಸಲಾರದು. ಅಸತ್ಯದಿಂದಾಗಿ ಅದು

ಎಂದಿಗೂ ಖಿನ್ನತೆ ತಾಳುವುದಿಲ್ಲ. ಅದು ಸತ್ಯವನ್ನು ಉತ್ಪ್ರೇಕ್ಷಿಸುವುದೂ ಇಲ್ಲ. ಉದಾಹರಣೆಗಾಗಿ, ವ್ಯಕ್ತಿಯ ಸುತ್ತಲಿನ ವಾತಾವರಣವೆಲ್ಲ "ಭಗವಂತನಿರುವುದೇ ಸುಳ್ಳು, ಅವನಿಲ್ಲವೇ ಇಲ್ಲ" ಎಂದು ಹೇಳಿದಾಗಲೂ ಅಂತರಾತ್ಮವು ಅದಾವುದನ್ನೂ ನಂಬುವುದಿಲ್ಲ. "ನನಗೆ ಗೊತ್ತು. ನನಗದರ ಅನುಭವ ಇದೆ ಆದ್ದರಿಂದ ನಾನು ನಂಬುತ್ತೇನೆ" ಎಂದು ಹೇಳುತ್ತದೆ.

ಅದು ತೋರಿಕೆಗಳ ಹಿಂದಿರುವ ಸತ್ಯವನ್ನು ಬಲ್ಲದು, ಆದ್ದರಿಂದ ಅದು ಮೋಸ ಹೋಗುವುದಿಲ್ಲ. ದೈವೀ ಶಕ್ತಿಯನ್ನು ತಕ್ಷಣ ಗುರುತಿಸುತ್ತದೆ.

ಅಂತರಾತ್ಮ ಜಾಗೃತಿಯಾದಾಗ ಭಾವನಾತ್ಮಕ ಸತ್ತೆಯೊಳಗಿರುವ ಎಲ್ಲ ಕಸಕಳೆಗಳನ್ನು ಕಿತ್ತೊಗೆಯುತ್ತದೆ. ಕೇವಲ ಭಾವನಾತ್ಮಕತೆ ಅಥವಾ ಭಾವನಾತ್ಮಕತೆಯ ನಿಮ್ನ ಪ್ರಯೋಗದಿಂದ ದೂರ ಮಾಡುತ್ತದೆ. ಮುಕ್ತಗೊಳಿಸುತ್ತದೆ.

ಆದರೆ ಅದು ಮಾನಸಿಕ ಶುಷ್ಕತೆಯನ್ನು ಅಥವಾ ಪ್ರಾಣಿಕ ಸಂವೇದನೆಗಳ ಉತ್ಪ್ರೇಕ್ಷೆಯನ್ನು ಮುಂದಕ್ಕೆ ಒಯ್ಯುವುದಿಲ್ಲ. ಪ್ರೀತಿ ಭಾವನೆಗಳಿಗೆ ಕೇವಲ ಅದು ಲಘು ಸ್ಪರ್ಶವನ್ನು ನೀಡುತ್ತದೆ.

*

**ಅಂತರಾತ್ಮಿಕ ಕ್ಷಣಗಳು**

*ಶ್ರೀಮಾತೆಯವರನ್ನು ಕೇವಲ ನೋಡಿದ ಮಾತ್ರಕ್ಕೆ ಆನಂದ ಅಥವಾ ಸಂತೃಪ್ತಿ ಆಗುತ್ತದಲ್ಲ, ಆ ಭಾವನೆ ಎಂಥದು?*

ಅದು ಅಂತರಾತ್ಮಿಕ

*ಶ್ರೀಮಾತೆಯವರನ್ನು ನೆನೆದ ಮಾತ್ರಕ್ಕೇ ಆನಂದ, ಸಂತೃಪ್ತಿ ಮೂಡುತ್ತದಲ್ಲ, ಅದೇನು?*

ಅದು ಅಂತರಾತ್ಮಿಕ

*ಶ್ರೀಮಾತೆಯವರ ಬಗ್ಗೆ ಅಪಶಬ್ದ ಅಥವಾ ಅವರ ವಿರೋಧದ ಮಾತುಗಳನ್ನು ಕೇಳಿದಾಗ ಹೃದಯದಲ್ಲಿ ಒಂದು ತೆರನಾದ ನೋವಾಗುತ್ತದಲ್ಲ, ಅದೇನು?*

ಅದು ಅಂತರಾತ್ಮಿಕ

*ಭೌತಿಕವಾಗಿ ತುಂಬ ದೂರದಲ್ಲಿದ್ದಾಗಲೂ ಕೂಡ, ಹೃದಯದಲ್ಲಿ ಶ್ರೀಮಾತೆಯ ಸಾನ್ನಿಧ್ಯದ ಅನುಭವ ಆಗುತ್ತದಲ್ಲ, ಅದೇನು?*

ಅದು ಅಂತರಾತ್ಮಿಕವೇ

*ನಾನು ಪೂರ್ಣತಃ ಅಂತರಾತ್ಮಿಕ ಪ್ರೇಮದ ಸ್ಥಿತಿಯಲ್ಲಿದ್ದೇನೆಂಬುದನ್ನು ತಿಳಿದುಕೊಳ್ಳುವುದು ಹೇಗೆ?*

ಅಹಂಭಾವ ಇಲ್ಲದಿರುವ ಮೂಲಕ, ಪರಿಶುದ್ಧವಾದ ಆರಾಧನಾಭಾವ ಇರುವುದರ ಮೂಲಕ, ಪರಮಾತ್ಮನಿಗೆ ಪೂರ್ಣತಃ ಶರಣಾಗುವುದರ ಮೂಲಕ, ಸಮರ್ಪಣೆ ಮಾಡಿಕೊಳ್ಳುವುದರ ಮೂಲಕ.

*

*ಎರಡು ದಿನಗಳವರೆಗೆ ನಿಮ್ಮ ಬಗ್ಗೆ ಹಾಗೂ ಶ್ರೀಮಾತೆಯ ಬಗ್ಗೆ ನನ್ನಲ್ಲಿ ಅತ್ಯಂತ ತೀವ್ರ ಪ್ರೇಮ ಕಂಡುಬಂದಿತು. ನನ್ನ ಇಡೀ ಸತ್ತೆ ಅಂಥ ಪ್ರೇಮದಿಂದ ಆವರಿಸಿಕೊಂಡಿತ್ತು. ಆನಂತರ ಕೇವಲ ಅದರ ಭಾಗಶಃ ಪರಿಣಾಮ ಉಳಿದುಕೊಂಡಿತು. ಶ್ರೀಮಾತೆ ಹಾಗೂ ಪ್ರಭುವಿನ ಬಗ್ಗೆ ಅತಿ ಉನ್ನತವಾದ ಹಾಗೂ ಆಳವಾದ ಗೌರವ ಮತ್ತು ಯಾವ ಭೌತಿಕ ಆನಂದವೂ ನೀಡದಂಥ ಆನಂದ ಉಳಿದುಕೊಂಡಿತು.*

ಅದು ಸ್ಪಷ್ಟವಾಗಿ ಅಂತರಾತ್ಮಿಕವೇ

ಯಾವಾಗ ಪರಮಾತ್ಮನ ಬಗೆಗೆ ಆಂತರಿಕ ಪ್ರೇಮ ಉಕ್ಕಿ ಬರುವುದೋ ಆಗೆಲ್ಲ ಕಣ್ಣಲ್ಲಿ ನೀರು ಬರುವುದನ್ನು ನಾನು ಗಮನಿಸಿದ್ದೇನೆ.

ಅವು ಅಂತರಾತ್ಮಿಕ ಆರಾಧನೆಯ, ಭಕ್ತಿಯ ಕಣ್ಣೀರು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/467–68**

**ಅಂತರಾತ್ಮಿಕ ವಿಧಾನ**

*ಶ್ರೀಮಾತೆಯವರ ಬಗ್ಗೆ ನಾನು ಶುದ್ಧವಾದ ಭಕ್ತಿಯನ್ನು ಹೇಗೆ ತಾಳಬಲ್ಲೆ?*

ಪರಿಶುದ್ಧವಾದ ಆರಾಧನೆ, ಅರ್ಚನೆ, ಪ್ರತಿಯಾಗಿ ಏನನ್ನೂ ಕೇಳದೇ ಬಯಸದೇ ಕೇವಲ ಪರಮಾತ್ಮನನ್ನು ಪ್ರೀತಿಸುವುದು – ಇದನ್ನು ಶುದ್ಧವಾದ ಭಕ್ತಿ ಎಂದು ಕರೆಯುತ್ತಾರೆ.

*ಯಾವ ಭಾಗದಿಂದ ಇದು ಅಭಿವ್ಯಕ್ತವಾಗುತ್ತದೆ?*

ಅಂತರಾತ್ಮಿಕದಿಂದ

ಅಂತರಾತ್ಮಿಕ ಭಕ್ತಿಯು ಪರಿಪೂರ್ಣವಾದ ಉಪಾಸನೆಯೇ?

ಅದು ಪರಿಪೂರ್ಣ ಉಪಾಸನೆಯ ಆಧಾರವಾಗಿದೆ

ಅಂತರಾತ್ಮಿಕ ಭಕ್ತಿಯನ್ನು ಬೆಳೆಸಿಕೊಳ್ಳುವುದು ಹೇಗೆ?

ನಿಷ್ಠಾಪೂರ್ಣ ಅಭೀಪ್ಸೆಯ ಮೂಲಕ

*ಶ್ರೀಮಾತೆಯ ಬಗ್ಗೆ ಇರುವ ಮಾನಸಿಕ, ಪ್ರಾಣಿಕ ಮತ್ತು ಅಂತರಾತ್ಮಿಕ ಭಕ್ತಿಗಳ ಗುಣಲಕ್ಷಣಗಳೇನು? ಅವುಗಳನ್ನು ಗುರುತಿಸುವುದು ಹೇಗೆ?*

ಅಂತರಾತ್ಮವು ಪ್ರೇಮ, ಆತ್ಮ ಸಮರ್ಪಣೆ, ಪ್ರತಿಯಾಗಿ ಏನನ್ನೂ ಅಪೇಕ್ಷಿಸದಿರುವುದು ಇಂಥವುಗಳಿಂದ ಕೂಡಿದೆ. ಪ್ರಾಣಿಕವು ಶ್ರೀಮಾತೆಯವರ ಸ್ವಾಧೀನದಲ್ಲಿರುವಂತೆ, ಆಕೆಗೆ ತಾನೇ ಸೇವೆ ಗೈಯಬೇಕೆಂಬ ಆಗ್ರಹ ಹೊಂದಿರುತ್ತದೆ. ಮಾನಸಿಕವು ಶ್ರೀಮಾತೆ ಏನು ಹೇಳುತ್ತಾರೋ, ಏನು ಮಾಡುತ್ತಾರೋ ಅದೆಲ್ಲವನ್ನೂ ಪ್ರತಿಯಾಡದೇ ಒಪ್ಪಿಕೊಳ್ಳುವಂಥ ಗುಣ ಹೊಂದಿದೆ. ಇವೆಲ್ಲ ಬಾಹ್ಯ ಲಕ್ಷಣಗಳೇ. ಆಂತರಿಕ ಲಕ್ಷಣಗಳ ಮೂಲಕ ಮಾತ್ರ ಅದನ್ನು ಚೆನ್ನಾಗಿ ಗುರುತಿಸಬಹುದು. ಆದರೆ ಅವುಗಳನ್ನು ಶಬ್ದಗಳಲ್ಲಿ ಹೇಳಲು ಬರುವುದಿಲ್ಲ.

*ಯೋಗದಲ್ಲಿ ಮಾನಸಿಕ ಹಾಗೂ ಪ್ರಾಣಿಕ ಭಕ್ತಿಗೆ ಯಾವ ಸ್ಥಾನವೂ ಇಲ್ಲವೇ?*

ಇಲ್ಲವೆಂದು ಯಾರು ಹೇಳುವರು? ಎಷ್ಟರ ಮಟ್ಟಿಗೆ ಅದು ನಿಜವಾದ ಭಕ್ತಿಯಾಗಿದೆಯೋ, ಅಷ್ಟರ ಮಟ್ಟಿಗೆ ಎಲ್ಲ ಭಕ್ತಿಗೂ ಸ್ಥಾನವಿದ್ದೇ ಇದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/476–77**

**ಅಂತರಾತ್ಮಿಕ ಪರಿವರ್ತನೆ**

ಹೃದಯ ಕೇಂದ್ರದಲ್ಲಿ ಏಕಾಗ್ರತೆ ಸಾಧಿಸುವುದರಿಂದ ಆ ಕೇಂದ್ರವು ತೆರೆದುಕೊಳ್ಳುವುದು. ಅಭೀಪ್ಸೆ–ಪ್ರೇಮ–ಭಕ್ತಿ–ಸಮರ್ಪಣೆಗಳ ಬಲದಿಂದ ಆತ್ಮವನ್ನು

ಮರೆಮಾಡಿರುವ ಪರದೆಯು ಸರಿದು ಹೋಗುವುದು. ಆಗ ಆತ್ಮ ಅಥವಾ ಅಂತರಾತ್ಮವು ಹೊರಬಂದು ಮನಸ್ಸು–ಪ್ರಾಣ ಹಾಗೂ ಶರೀರಗಳನ್ನು ತನ್ನ ನಿಯಂತ್ರಣದಲ್ಲಿ ತೆಗೆದುಕೊಳ್ಳುವುದು – ಹಾಗೂ ಅವುಗಳನ್ನು ಸಂಪೂರ್ಣವಾಗಿ ಪರಮಾತ್ಮನಿಗಾಗಿ ತೆರೆದಿಡುವುದು. ಅವುಗಳಲ್ಲಿರುವ ವಿರೋಧಿ ಅಂಶಗಳನ್ನೆಲ್ಲ ಉಧ್ವಸ್ತಗೊಳಿಸುವುದು. ಈ ಯೋಗದಲ್ಲಿ ಈ ಕ್ರಿಯೆಯನ್ನು ಅಂತರಾತ್ಮಿಕ ಪರಿವರ್ತನೆ ಎಂದು ಕರೆಯುತ್ತಾರೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/307**

## ಅಂತರಾತ್ಮದ ಪ್ರಭಾವದಡಿ ಎಲ್ಲ ಕೇಂದ್ರಗಳು ಉನ್ಮುಖವಾಗುವುದು

ದಿವ್ಯವಾದ ಶಾಂತಿಯು ನೆಲೆಗೊಂಡಿತೆಂದರೆ, ಈ ಉನ್ನತವಾದ ಅಥವಾ ದಿವ್ಯ ಶಕ್ತಿಯು ಕೆಳಗಿಳಿಯುವುದು ಮತ್ತು ನಮ್ಮೊಳಗೆ ಕೆಲಸ ಮಾಡಲು ಆರಂಭ ಮಾಡುವುದು. ಸಾಮಾನ್ಯವಾಗಿ ಅದು ಮೊದಲು ಶೀರ್ಷ ಕೇಂದ್ರದಲ್ಲಿ ಕೆಳಗಿಳಿದು, ಅಂತರ್ಮನಸ್ಸಿನ ಕೇಂದ್ರಗಳನ್ನು ಮುಕ್ತಗೊಳಿಸುವುದು. ಅಲ್ಲಿಂದ ಕೆಳಗೆ ಹೃದಯ ಕೇಂದ್ರದಲ್ಲಿಳಿದು ಭಾವನಾತ್ಮಕ ಸತ್ತೆ ಹಾಗೂ ಅಂತರಾತ್ಮಿಕ ಸತ್ತೆಗಳನ್ನು ಸ್ವತಂತ್ರಗೊಳಿಸುವುದು. ಅಲ್ಲಿಂದ ಮುಂದೆ ನಾಭಿ ಮತ್ತು ಇತರ ಪ್ರಾಣಿಕ ಕೇಂದ್ರಗಳಲ್ಲಿಳಿದು ಅಂತಃಪ್ರಾಣಿಕ ಸತ್ತೆಯನ್ನು ಮುಕ್ತಗೊಳಿಸುವುದು. ಅಲ್ಲಿಂದ ಮುಂದೆ ಮೂಲಾಧಾರ ಮತ್ತು ಅದರಿಂದ ಕೆಳಗಿಳಿದು ಅಂತರ್ಭೌತಿಕ ಸತ್ತೆಯನ್ನು ಬಂಧಮುಕ್ತಗೊಳಿಸುವುದು. ಈ ರೀತಿ ಸ್ವತಂತ್ರಗೊಳಿಸುವ ಕಾಲದಲ್ಲಿಯೇ ಅದು ಪರಿಪೂರ್ಣಗೊಳಿಸುವ ಕಾರ್ಯದಲ್ಲಿಯೂ ತೊಡಗಿರುವುದು. ಇಡೀ ಪ್ರಕೃತಿಯನ್ನು ನಿಧಾನವಾಗಿ ಒಂದೊಂದಾಗಿ ತೆಗೆದುಕೊಳ್ಳುತ್ತ, ಏನನ್ನು ತೆಗೆದು ಹಾಕಬೇಕೋ ಅವೆಲ್ಲವನ್ನೂ ತೆಗೆದುಹಾಕುತ್ತ, ಸಂಸ್ಕರಿಸಬೇಕಾಗಿರುವುದನ್ನು ಸಂಸ್ಕರಿಸುತ್ತ, ಏನನ್ನು ನಿರ್ಮಿಸಬೇಕೋ ಅದನ್ನು ನಿರ್ಮಿಸುತ್ತ, ರಚಿಸುತ್ತ ಹೋಗುತ್ತದೆ. ಅದು ಎಲ್ಲವನ್ನೂ ಸಮನ್ವಯಗೊಳಿಸುತ್ತದೆ. ಸಮರಸಗೊಳಿಸುತ್ತದೆ. ಪ್ರಕೃತಿಯಲ್ಲಿ ಒಂದು ಹೊಸ ಲಯವನ್ನು ಸ್ಥಾಪಿಸುತ್ತದೆ. ಅದು ಇನ್ನೂ ಹೆಚ್ಚು ಹೆಚ್ಚಾದ, ಹಿರಿಯ, ಉನ್ನತ ಶಕ್ತಿಗಳನ್ನು ಕೆಳಕ್ಕೆ ತರಬಲ್ಲದು. ಹಿರಿದಾದ ಪ್ರಕೃತಿಯನ್ನು ಕೂಡ ಕೆಳಗಿಳಿಸಿ ತರಬಲ್ಲದು. ಸಾಧನೆಯ ಪರಮ ಲಕ್ಷ್ಯ ಅದೇ ಆಗಿದ್ದರೆ ಅದು ಅತಿಮಾನಸ ಶಕ್ತಿಯನ್ನು, ಅಸ್ತಿತ್ವವನ್ನು ಕೂಡ ಕೆಳಗಿಳಿಸಿ ತರಬಲ್ಲದು. ಇದೆಲ್ಲದಕ್ಕೂ ಅಂತರಾತ್ಮದ ಕೆಲಸವೇ ಆಧಾರ. ಅದರದೇ ನೆರವು.

ಅದರದೇ ಪೋಷಣೆ. ಅದು ಎಷ್ಟು ಹೆಚ್ಚು ತೆರೆದುಕೊಂಡಿದೆಯೋ, ಮೇಲ್ಮೈಗೆ ಬಂದಿದೆಯೋ ಅಷ್ಟರ ಮಟ್ಟಿಗೆ ತ್ವರಿತಾಗಿ, ಸುರಕ್ಷಿತವಾಗಿ ದಿವ್ಯ ಶಕ್ತಿಯು ಕೆಲಸ ಮಾಡುವುದು. ಪ್ರೇಮ, ಭಕ್ತಿ ಮತ್ತು ಸಮರ್ಪಣೆಗಳು ಎಷ್ಟು ಹೆಚ್ಚು ಹೆಚ್ಚಾಗಿ ಬೆಳೆಯುವುವೋ, ಅಷ್ಟರ ಮಟ್ಟಿಗೆ ಸಾಧನೆ ಕೂಡ ತೀವ್ರ ಹಾಗೂ ಪರಿಪೂರ್ಣವಾಗುತ್ತ ಹೋಗುವುದು. ಏಕೆಂದರೆ ಅವತರಣ ಅಂದರೆ ಮೇಲಿನಿಂದ ಇಳಿಯುವಿಕೆ ಮತ್ತು ಪರಿವರ್ತನೆ ಎರಡೂ ಏಕಕಾಲಕ್ಕೆ ಪರಮಾತ್ಮನ ಜೊತೆ ಸಂಪರ್ಕ ಮತ್ತು ಸಂಯೋಗವನ್ನು ಸಾಧಿಸುವುವು.

ಇದು ಸಾಧನೆಯ ಮೂಲ ಸಿದ್ಧಾಂತವಾಗಿದೆ. ಇಲ್ಲಿ ಸ್ಪಷ್ಟವಾಗುವುದೇನೆಂದರೆ, ಎರಡು ಅತಿ ಮುಖ್ಯವಾದ ಸಂಗತಿಗಳಿವೆ. ಒಂದು ಹೃದಯ ಕೇಂದ್ರವು ಸಂಪೂರ್ಣವಾಗಿ ತೆರೆದುಕೊಳ್ಳಬೇಕು ಹಾಗೂ ಎರಡನೆಯದಾಗಿ ಮನಸ್ಸಿನ ಕೇಂದ್ರವು ಕೂಡ ತನಗಿಂತ ಮೇಲಿರುವ ಎಲ್ಲ ಹಿರಿದಾದ ಸಂಗತಿಗಳಿಗೆ ತೆರೆದುಕೊಳ್ಳಬೇಕು. ಹೃದಯವು ಅಂತರಾತ್ಮನಿಗೆ ಸಂಬಂಧಿಸಿದ್ದರೆ, ಮನಸ್ಸು ಹಿರಿದಾದ ಪ್ರಜ್ಞೆಗೆ ಸಂಬಂಧಿಸಿದೆ ಹಾಗೂ ಅಂತರಾತ್ಮ ಮತ್ತು ಹಿರಿದಾದ ಪ್ರಜ್ಞೆಗಳ ನಡುವಣ ಸಂಯೋಗವೇ ಸಿದ್ಧಿಯ ಪ್ರಮುಖ ಸಾಧನವಾಗಿದೆ. ಮೊದಲು ಹೃತ್‌ಕೇಂದ್ರದಲ್ಲಿ ಏಕಾಗ್ರತೆ ಸಾಧಿಸುವುದರಿಂದ ಅದು ತೆರೆದುಕೊಳ್ಳುವುದು, ಪರಮಾತ್ಮನು ನಮ್ಮೊಳಗೆ ಪ್ರಕಟವಾಗಲಿ ಎಂಬ ಪ್ರಾರ್ಥನೆ ಉದಯಿಸುವುದು, ಅಂತರಾತ್ಮನು ಈ ಕೆಲಸ ಸಾಧಿಸಲಿ, ನಮ್ಮೆಲ್ಲ ಸತ್ತೆಯ ಅಂಶಗಳನ್ನು ಸ್ವಾಧೀನಪಡಿಸಿಕೊಳ್ಳಲಿ ಎಂಬ ಬೇಡಿಕೆ ವ್ಯಕ್ತವಾಗುವುದು. ಅಭೀಪ್ಸೆ, ಪ್ರಾರ್ಥನೆ, ಭಕ್ತಿ, ಪ್ರೇಮ, ಸಮರ್ಪಣೆ ಇವೇ ಸಾಧನೆಯ ಮೂಲಾಧಾರಗಳು. ಜೊತೆಗೆ ನಮ್ಮ ಅಭೀಪ್ಸೆಗೆ ಏನೆಲ್ಲ ವಿರೋಧವಾಗಿದೆಯೋ ಅವೆಲ್ಲವನ್ನು ನಿರಾಕರಿಸುವುದು ಕೂಡ ಮೇಳವಿಸಬೇಕು. ಎರಡನೆಯ ಉನ್ಮುಖತೆ ಅಥವಾ ತೆರೆದುಕೊಳ್ಳುವಿಕೆಯು ಶಿರಃಕೇಂದ್ರದಲ್ಲಿ ಏಕಾಗ್ರತೆ ಸಾಧಿಸುವುದರಿಂದ ಆಗುವುದು (ಆಮೇಲೆ ಶಿರಸ್ಸಿನ ಆಚೆಗೆ ಏಕಾಗ್ರತೆ ಸಾಧಿಸಬೇಕಾಗುವುದು) ಹಾಗೂ ತೀವ್ರವಾದ ಅಭೀಪ್ಸೆ, ಬೇಡಿಕೆ, ದೈವೀ ಶಾಂತಿ, ಶಕ್ತಿ, ಜ್ಞಾನ ಅಥವಾ ಬೆಳಕು ಮತ್ತು ಆನಂದ ಇವು ನಮ್ಮ ಸತ್ತೆಯಲ್ಲಿ ಇಳಿದು ಬರಲಿ ಎಂದು ನಿರಂತರವಾಗಿ ಸಂಕಲ್ಪ ಮಾಡುವುದರಿಂದ ಇದು ಪರಿಣಾಮಕಾರಿಯಾಗುವುದು. ಮೊದಲು ದೈವೀ ಶಾಂತಿ ಅಥವಾ ದೈವೀ ಶಾಂತಿ ಮತ್ತು ಶಕ್ತಿ ಎರಡೂ ಏಕಕಾಲಕ್ಕೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/204–05**

**ಅಂತರಾತ್ಮೀಕರಣ**

ಅಂತರಾತ್ಮನಲ್ಲಿ ಕ್ರಿಯಾಶೀಲವಾದ ಆನಂದ ಹಾಗೂ ಸ್ವಯಂಜಾತ ಆನಂದ ಎರಡೂ ಇವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/374**

ಅಂತರಾತ್ಮೀಕರಣ ಅಥವಾ ಚೈತ್ತ್ಯೀಕರಣ ಅಂದರೆ ನಿಮ್ಮ ಪ್ರಕೃತಿಯು ಬದಲಾಗುವುದು, ಮನಸ್ಸಿನಲ್ಲಿ ಸತ್ಯ ದರ್ಶನ, ಪ್ರಾಣಿಕದಲ್ಲಿ ಸತ್‌ಪ್ರಚೋದನೆ ಹಾಗೂ ಸಂವೇದನೆ ಹಾಗೂ ಭೌತಿಕದಲ್ಲಿ ಸದ್ವರ್ತನೆ ಮತ್ತು ರೂಢಿ ಎಲ್ಲವೂ ಪರಮಾತ್ಮನೆಡೆಗೆ ತೆರೆದುಕೊಳ್ಳುವುದು, ಎಲ್ಲದರ ಆಧಾರ ಪ್ರೇಮ, ಆರಾಧನೆ, ಭಕ್ತಿ, ಕೊನೆಯದಾಗಿ ಎಲ್ಲದರಲ್ಲಿ, ಹೃದಯದಲ್ಲಿ ಶ್ರೀಮಾತೆಯನ್ನೇ ಕಾಣುವುದು, ಆಕೆಯ ಸಾನ್ನಿಧ್ಯವನ್ನನುಭವಿಸುವುದು, ಆಕೆಯ ದಿವ್ಯ ಶಕ್ತಿ ಸತ್ತೆಯ ಎಲ್ಲ ಭಾಗಗಳಲ್ಲಿ ಕಾರ್ಯ ಮಾಡುತ್ತಿರುವುದರ ಅರಿವಾಗುವುದು.

ಆಧ್ಯಾತ್ಮಿಕ ಬದಲಾವಣೆಯು ಮೇಲಿನಿಂದ ಶಾಂತಿ ಕೆಳಗಿಳಿದು ಬರುವುದರಿಂದ, ಬೆಳಕು, ಜ್ಞಾನ, ಶಕ್ತಿ, ಆನಂದ, ಆತ್ಮದ ಇರುವಿಕೆಯ ಬಗ್ಗೆ ಅರಿವು ಹಾಗೂ ಪರಮಾತ್ಮನ ಅಸ್ತಿತ್ವದ ಬಗ್ಗೆ ಖಚಿತತೆ, ಮೇಲಿನಿಂದ ಹಿರಿದಾದ ವಿಶ್ವಾತ್ಮಕ ಪ್ರಜ್ಞೆಯ ಅವತರಣ ಹಾಗೂ ಇಡೀ ಪ್ರಜ್ಞೆಯು ಸಮಗ್ರವಾಗಿ ಬದಲಾಗುವುದರ ಮೂಲಕ ಆಗುವುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 30/80**

**ಅಂತರಾತ್ಮವು ಮೇಲ್ಮೈಗೆ ಬರುವುದರ ಲಕ್ಷಣಗಳು**

ಕೇಂದ್ರದಲ್ಲಿರುವ ಭಕ್ತಿ, ಸಮರ್ಪಣೆ, ಎಲ್ಲವನ್ನೂ ನಿವೇದಿಸಿಕೊಳ್ಳುವುದು, ಯಾವುದು ಆಧ್ಯಾತ್ಮಿಕವಾಗಿ ಸರಿ ಹಾಗೂ ಯಾವುದು ತಪ್ಪು ಎನ್ನುವುದನ್ನು ಸದೈವ ಗುರುತಿಸಬಲ್ಲ ಸ್ಪಷ್ಟವಾದ ನೋಟ, ಯಾವುದು ಸರಿ ಅಲ್ಲವೋ ಅದನ್ನು ತಾನಾಗಿ ನಿರಾಕರಿಸಿಬಿಡುವಂಥ ಗುಣ – ಎಲ್ಲವೂ, ಸರ್ವಸ್ವವೂ ಆಗಿರುವ ಶ್ರೀಮಾತೆಗೆ ಸರ್ವಸ್ವವನ್ನು ನಿವೇದಿಸಿಕೊಳ್ಳುವುದು ಹಾಗೂ ಮೀಸಲಿರಿಸುವುದು.

*

ಅದು ಅಂತರಾತ್ಮಿಕ ಅನುಭವದ ಒಂದು ಭಾಗ. ಇನ್ನೊಂದು ಸಂಪೂರ್ಣವಾಗಿ ಅರ್ಪಿಸಿಕೊಳ್ಳುವುದು, ಪ್ರತಿಯಾಗಿ ಏನನ್ನೂ ಅಪೇಕ್ಷಿಸದಿರುವುದು, ಬೇಡದಿರುವುದು,

ಅಂತರಾತ್ಮಿಕ ಸತ್ತೆಯ ಪ್ರಾಬಲ್ಯದಿಂದ ಯಾವುದು ಅಸತ್ಯವೋ, ತಪ್ಪೋ, ಅಹಂಕಾರ ಮುಕ್ತವೋ, ದೈವೀ ಸತ್ಯಕ್ಕೆ–ದೈವೀ ಸಂಕಲ್ಪಕ್ಕೆ, ದೈವೀ ಪರಿಶುದ್ಧತೆಗೆ ಹಾಗೂ ದೈವೀ ಬೆಳಕಿಗೆ ವಿರುದ್ಧವಾಗಿದೆಯೋ ಅದೆಲ್ಲವೂ ಬಿದ್ದು ಬಿದ್ದು ಹೋಗುವುದು. ಪ್ರಕೃತಿಯಲ್ಲಿ ಅದು ಉಳಿಯಲಾರದು. ಅಂತರಾತ್ಮಿಕ ಗುಣಗಳು ಬೆಳೆಯುತ್ತ ಹೋದಂತೆ ಕೃತಜ್ಞತಾಭಾವ, ವಿಧೇಯತೆ, ನಿಃಸ್ವಾರ್ಥತೆ, ವಿಶ್ವಾಸ, ಸದ್ದರ್ಶನದ ಬಗ್ಗೆ ನಂಬಿಕೆ. ಸತ್ಯ ಪ್ರಚೋದನೆಯ ಬಗ್ಗೆ ಭರವಸೆ ಎಲ್ಲ ಬೆಳೆಯುತ್ತ ಹೋಗುತ್ತವೆ. ಇವೆಲ್ಲ ಶ್ರೀಮಾತೆಯವರಿಂದಲೇ ಬರುತ್ತವೆ. ಅಲ್ಲಿಗೇ ಕೊಂಡೊಯ್ಯುತ್ತವೆ. ಈ ಭಾಗ ಬೆಳೆದಂತೆಲ್ಲ, ಉಳಿದ ಭಾಗವು – ಅಂದರೆ ಸಾನ್ನಿಧ್ಯ, ಪ್ರೇಮ, ಆನಂದ, ಸೌಂದರ್ಯಗಳು ಸಹ ಬೆಳೆಯುತ್ತ ನಿರಂತರವಾಗಿ ಉಳಿದು ಬಿಡುತ್ತವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/356, 338–39**

**ಅಂತರಾತ್ಮಿಕ ಸತ್ತೆಯು ಅತಿಮಾನಸ ಸತ್ತೆಯಂತೆಯೇ ರೂಪಗೊಳ್ಳುವುದು**

ನನ್ನ ಅನುಭವ. ಇದು ತುಂಬ ಕುತೂಹಲಕಾರಿಯಾಗಿದೆ. ಅದು ಆಗಿದ್ದು ಮೊಟ್ಟ ಮೊದಲ ಬಾರಿ. ಅದು ನಿನ್ನೆಯೋ ಅಥವಾ ಮೊನ್ನೆಯೋ ಇರಬಹುದು (ನನಗೆ ಸರಿಯಾಗಿ ನೆನಪಿಲ್ಲ). R ಅಲ್ಲಿದ್ದಳು, ನನ್ನ ಎದುರಲ್ಲೇ ಇದ್ದಳು. ಮಂಡಿಯೂರಿ ನಮಸ್ಕರಿಸುತ್ತಿದ್ದಳು. ನಾನು ಆಕೆಯ (ಸುಮಾರು ಎಂಟು ಇಂಚು ಹೆಚ್ಚು ಎತ್ತರ ಸಂಜ್ಞೆ ಮಾಡುತ್ತ) ಇಷ್ಟು ಎತ್ತರದ ಅಂತರಾತ್ಮಿಕ ಸತ್ತೆಯನ್ನು ನೋಡಿದೆ. ಅದು ಮೊದಲು ಬಾರಿ. ಆಕೆಯ ಭೌತಿಕ ಸತ್ತೆ ತುಸು ಗಿಡ್ಡ ಆದರೆ ಆಕೆಯ ಅಂತರಾತ್ಮ ಇಷ್ಟು ಎತ್ತರವಾಗಿತ್ತು. ಅದು ಲಿಂಗರಹಿತ ಶರೀರ. ಅದು ಗಂಡೂ ಅಲ್ಲ, ಹೆಣ್ಣೂ ಅಲ್ಲ. ನನಗೆ ನಾನೇ ಹೇಳಿಕೊಂಡೆ (ಅದು ಯಾವಾಗಲೂ ಹಾಗೇಯೇ ಇರುತ್ತದೆಯೋ ಏನೋ ನನಗೆ ಗೊತ್ತಿಲ್ಲ. ಆದರೆ ಆ ಸಮಯದಲ್ಲಿ ನಾನದನ್ನು ಸ್ಪಷ್ಟವಾಗಿ ಗಮನಿಸಿದೆ) ಈ ಅಂತರಾತ್ಮನೇ ಮುಂದೆ ರೂಪಗೊಂಡು ಅತಿಮಾನಸಿಕ ಸತ್ತೆಯಾಗುವುದು!

ನಾನದನ್ನು ನೋಡಿದೆ. ಅದು ಹೀಗಿತ್ತು. ಸ್ಪಷ್ಟವಾದ ಆಕಾರವೇನೋ ಇತ್ತು. ಹಾಗೆಂದು ತೀರ ಗಾಢವಾದುದೇನಲ್ಲ ಮತ್ತು ಸ್ಪಷ್ಟವಾಗಿ ಹೇಳಬೇಕೆಂದರೆ ಅದು ಪುರುಷನೂ ಅಲ್ಲ. ಮಹಿಳೆಯೂ ಅಲ್ಲ, ಅದರಲ್ಲಿ ಎರಡೂ ಗುಣಗಳಿದ್ದವು. ಆಕೆಗಿಂತ ಆ ಅಂತರಾತ್ಮ ಎತ್ತರವಾಗಿತ್ತು. ಅದು ಎಲ್ಲ ದಿಕ್ಕುಗಳಿಂದಲೂ ಆಕೆಗಿಂತ ಸುಮಾರು ಒಂದು ಇಂಚು ಹೆಚ್ಚಾಗಿತ್ತು. (ಭೌತಿಕ ಶರೀರಕ್ಕಿಂತ ಎಂಟು ಇಂಚು

ಹೆಚ್ಚು ಎತ್ತರವಾಗಿತ್ತು ಎಂದು ಸನ್ನೆ ಮಾಡಿ ತೋರಿಸುತ್ತಾರೆ) – R ಇಲ್ಲಿಯೇ ಇದ್ದಳು. ಅದು ಕೂಡ ಇಲ್ಲಿಯೇ ಹೀಗೆಯೇ ಇತ್ತು. (ಸನ್ನೆ) ಅದರ ಬಣ್ಣ..... ಬಣ್ಣವು. ಅದು ಭೌತಿಕವೆನ್ನುವುದಾದರೆ ಆರೋವಿಲ್‌ನಂತೆ ಕಿತ್ತಳೆ ಬಣ್ಣದ್ದು. ಅದು ಮೃದು. ಪರದೆಯ ಹಿಂದೆ ಇರುವಂತೆ ತುಸು ಮಸುಕು. ಕರಾರುವಕ್ಕಾಗಿ ಹೀಗೆಯೇ ಎಂದು ಹೇಳಲು ಬಾರದಿದ್ದರೂ ಅದನ್ನು ಆ ಬಣ್ಣದ್ದೇ ಎಂದು ಹೇಳಬಹುದು. ಕೂದಲು ಇದ್ದವು. ಆದರೆ.... ಅದು ಬೇರೆ ಯಾವುದೋ ತರ ಇತ್ತು...

ಅಂತರಾತ್ಮವು ಯಾವಾಗಲೂ ಇರುವಂಥದು. ಅಂದರೆ ಅದೊಮ್ಮೆ ರೂಪಗೊಂಡಿತೆಂದರೆ ಅದು ಮೃತ್ಯುವಿನಿಂದ ಪಾರಾಗಿ ಬಿಡುತ್ತದೆ... "ಪಾರಾಗಿ ಬಿಡುವುದು" ಅಂದರೆ... ಯಾವುದು ಸತ್ಯದ ಪ್ರಕಾರ ಕೆಲಸ ಮಾಡುವುದಿಲ್ಲವೋ ಅದು ನಾಶವಾಗಿ ಹೋಗಿ ಬಿಡುತ್ತದೆ. ಯಾವುದು ಪರಿವರ್ತನೆ ಹೊಂದಲು ಅಸಮರ್ಥವಾಗುವುದೋ, ಅಂತರಾತ್ಮನ ರೂಪದಲ್ಲಿ ಬೆಳೆಯುವುದಿಲ್ಲವೋ ಅದೆಲ್ಲ ನಾಶವಾಗುವುದು.

**– ಶ್ರೀಮಾತೆ: ಶಿಷ್ಯನೊಡನೆ ಸಂವಾದ, ಜುಲೈ 1, 1970**

**ಪ್ರೇಮ ಮತ್ತು ಆರಾಧನೆಗಳು ಅಂತರಾತ್ಮಿಕ ಜಾಗೃತಿಯ ಮೇಲೆ ಅವಲಂಬಿತವಾಗಿರುತ್ತವೆ ಮತ್ತು ಅದಕ್ಕಾಗಿ ಎಲ್ಲ ಬಯಕೆಗಳು ನಾಶವಾಗಲೇಬೇಕು. ಎಷ್ಟೋ ಜನ ಶ್ರೀಮಾತೆಗೆ ಅಂತರಾತ್ಮಿಕ ಪ್ರೇಮದ ಬದಲಾಗಿ ಪ್ರಾಣಿಕ ಪ್ರೇಮವನ್ನು ಅರ್ಪಿಸಿದ್ದುಂಟು. ಅದು ಸದಾ ಬಯಕೆಗಳಿಂದ ಕೂಡಿಕೊಂಡಿರುವುದರಿಂದ ಎಲ್ಲಕ್ಕಿಂತ ಹೆಚ್ಚಿನ ಗೊಂದಲವನ್ನು ತಂದೊಡ್ಡುವುದು.**

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/475 – ಶ್ರೀ ಅರವಿಂದರು**

*ಅಂತರಾತ್ಮಿಕ ಸತ್ತೆಯು ಹೇಗೆ ತೆರೆದುಕೊಳ್ಳುತ್ತದೆ? ಆಧಾರದಲ್ಲಿ ಅಂತರಾತ್ಮ ಮತ್ತು ಪ್ರಾಣಿಕ ಸತ್ತೆಗಳನ್ನು ತಿಳಿದುಕೊಳ್ಳುವುದು ಹೇಗೆ?*

ಅಭೀಪ್ಸೆಯ ಬಲ ಮತ್ತು ಶ್ರೀಮಾತೆಯ ಅನುಗ್ರಹದ ಮೂಲಕ.

ಅಂತರಾತ್ಮ: ಇದು ನಿಮ್ಮ ನಿಜವಾದ ಸತ್ತೆಯು. ಇದು ಹೃದಯ ಸ್ಥಾನದಲ್ಲಿ ಇರುತ್ತದೆ ಮತ್ತು ಇದು ಶ್ರೀಮಾತೆಯ ಪ್ರಜ್ಞೆಯ ಅಂಶವಾಗಿರುತ್ತದೆ.

ಪ್ರಾಣಿಕ: ಇದರಿಂದಲೇ ಆಶೆಗಳು, ತೃಷೆ, ಹಸಿವು, ಕ್ರಿಯಾಶೀಲ ಚಟುವಟಿಕೆಗಳು ಹುಟ್ಟುತ್ತವೆ. ಇದರ ಭೌತಿಕ ಆಧಾರದ ಸ್ಥಾನವು ನಾಭಿಯ ಸುತ್ತಲ ಪ್ರದೇಶದಲ್ಲಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/39**

ಸ್ವಾತ್ಮ ನಿವೇದನೆ: ಹೀಗೆ ಮಾಡುವುದರಿಂದ ಇಡೀ ಸತ್ತೆಯು ಕೇಂದ್ರ ಅಂತರಾತ್ಮಿಕ ಸತ್ತೆಯ ಸುತ್ತ ಏಕೀಕೃತವಾಗುತ್ತ ಹೋಗುತ್ತದೆ. ನಿಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಳ್ಳಿ. ನಿಮ್ಮನ್ನು ಕಂಡುಕೊಳ್ಳಲು ಇದೇ ಅತ್ಯುತ್ತಮವಾದ ಮಾರ್ಗ.

*

ನೀವೇನಾಗಿರುವಿರೋ, ನೀವೇನೆಲ್ಲವನ್ನು ಮಾಡುವಿರೋ ಅದೆಲ್ಲವನ್ನೂ ನಿಷ್ಠೆಯಿಂದ ನಿವೇದಿಸಿಕೊಳ್ಳಿರಿ. ಅದು ಸಾಧನೆಗೆ ಧ್ಯಾನಕ್ಕಿಂತ ಹೆಚ್ಚು ಫಲಕಾರಿ.

*

ನಿಜವಾದ ಪ್ರೇಮ ಮತ್ತು ಸ್ವಾತ್ಮ ನಿವೇದನೆಗಳು ಕಠೋರ ತಪಸ್ಸಿಗಿಂತ ಹೆಚ್ಚು ತೀವ್ರವಾಗಿ ನಿಮ್ಮನ್ನು ಪರಮಾತ್ಮನೆಡೆಗೆ ಕರೆದೊಯ್ಯುತ್ತವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/100**

ಲೌಕಿಕ ವಿಷಯಗಳ ಬಗ್ಗೆ ಮಾತನಾಡುವಾಗ ಉತ್ಸಾಹದಿಂದ, ಸಂತೋಷದಿಂದ, ಹಾಸ್ಯ ಮನೋಭಾವದಿಂದ ಮಾತನಾಡಬೇಕು.

ಪ್ರಾಣಿಕ ಸಂಗತಿಗಳ ಬಗ್ಗೆ ಮಾತನಾಡುವಾಗ ನಿಮ್ಮ ಶೈಲಿ ಸ್ಪಷ್ಟವಾಗಿರಬೇಕು. ನಿರರ್ಗಳವಾಗಿರಬೇಕು.

ಮಾನಸಿಕ ಸಂಗತಿಗಳ ಬಗ್ಗೆ ಮಾತನಾಡುವಾಗ ನಿಮ್ಮ ಶೈಲಿ ಅಸಂದಿಗ್ಧ, ಸ್ಪಷ್ಟ, ಕರಾರುವಾಕ್ ಹಾಗೂ ಖಚಿತವಾಗಿರಬೇಕು.

ಅಂತರಾತ್ಮಿಕ ವಿಷಯಗಳ ಬಗ್ಗೆ ಮಾತನಾಡುವಾಗ ಅಂತಃಸ್ಫೂರ್ತಿಯಿಂದ ಮಾತನಾಡಬೇಕು.

*

ಆಧ್ಯಾತ್ಮಿಕ ಭಾಷಣ: ಸರಳವಾಗಿದ್ದಷ್ಟು ಶಕ್ತಿಶಾಲಿಯಾಗಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/204** **– ಶ್ರೀಮಾತೆ**

## ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್
## ಪ್ರಕಟವಾಗಿರುವ ಪುಸ್ತಕಗಳ ಪಟ್ಟಿ

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 1 | ಸಮಗ್ರ ಶಿಕ್ಷಣ |
| 2 | ಶ್ರೀ ಅರವಿಂದರು ದಿವ್ಯ ಜೀವನ |
| 3 | ಶ್ರೀ ಅರವಿಂದರು ಭಾರತೀಯ ಧರ್ಮ ಪರಂಪರೆ ಮತ್ತು ಭಗವಾನ್ ಶ್ರೀ ಅರವಿಂದರ ದರ್ಶನ |
| 4 | ಶ್ರೀ ಮಾತಾರವಿಂದರ ಪೂರ್ಣಯೋಗ |
| 5 | ಪ್ರಾರ್ಥನಾ ಪದ್ಯಗಳು |
| 6 | ರವಿ ಬೆಳಗಿದ ಪಥ (ಶ್ರೀಮಾತೆಯವರ ವಚನವೇದ ಸಂಕಲನ) |
| 7 | ನವ್ವೆಂಬರ್ 24, 1926 ಅಧಿಮಾನಸ ಪ್ರಜ್ಞೆಯ ಅವರೋಹಣ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ದೃಷ್ಟಿಯಲ್ಲಿ ಸಿದ್ಧಿದಿನದ ಮಹತ್ವ |
| 8 | ಶ್ರೀ ಅರವಿಂದರು (ಒಂದು ಸಂಕ್ಷಿಪ್ತ ಪರಿಚಯ) |
| 9 | ಶ್ರೀಮಾತೆ (ಒಂದು ಸಂಕ್ಷಿಪ್ತ ಪರಿಚಯ) |
| 10 | ಕೇಂಬ್ರಿಜ್‌ನ ಸುಗಂಧಿತ ಪುಷ್ಪ (ಮಾನವತೆಗೆ ಶ್ರೀ ಅರವಿಂದರ ಕೊಡುಗೆ) |
| 11 | ಅತಿಮಾನಸ ಹಾಗೂ ಹೊಸ ಜಗತ್ತೊಂದರ ಜನನ (ಶ್ರೀಮಾತೆ ಹಾಗೂ ಶ್ರೀ ಅರವಿಂದರ ಬರಹಗಳ ಸಂಕಲನ) |
| 12 | ಭಾರತ ಮತ್ತು ಭರತಮಾತೆಯ ದೈವನಿಯತಿ |
| 13 | ಆದರ್ಶ ಶಿಕ್ಷಕ |
| 14 | ಪೂರ್ಣಯೋಗ |
| 15 | ಶ್ರೀ ಅರವಿಂದರ ಧರ್ಮ ಹಾಗೂ ರಾಷ್ಟ್ರೀಯತ್ವ |
| 16 | ಶ್ರೀಮಾತೆಗೆ 72 (ಬಾಹತ್ತರ) ಕವನಗಳ ಅರ್ಪಣೆ |

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 17 | ಶಿಕ್ಷಣ ಕುರಿತು ಶ್ರೀಮಾತಾರವಿಂದರ ವಿಚಾರಧಾರೆ |
| 18 | ಶ್ರೀ ಅರವಿಂದ ದರ್ಶನ |
| 19 | ಶ್ರೀಮಾತೆ ಭಾರತಮಾತೆ |
| 20 | ದುರ್ಗಾಸ್ತೋತ್ರ |
| 21 | ಚಿಂತನಗಳು ಮತ್ತು ಸೂಕ್ತಿಗಳು |
| 22 | ಯೋಗ ಸಮನ್ವಯ |
| 23 | ಶ್ರೀ ಅರವಿಂದಾಶ್ರಮ |
| 24 | ಪ್ರಸೂತಿ ಪೂರ್ವದ ಶಿಕ್ಷಣ<br>ಶೋಭಾಯಮಾನ ಭವಿಷ್ಯತ್ತಿನೆಡೆಗೆ |
| 25 | ಮಗುವನ್ನು ಪೋಷಿಸುವುದು ಹೇಗೆ? |
| 26 | ಸುಪ್ರಮಾನಸದ ಶ್ರೀಮಾತೆ |
| 27 | ಸಾವಿತ್ರಿ (ಶ್ರೀ ಅರವಿಂದರ ಮಹಾಕಾವ್ಯದ ಸಾರಾಂಶ) |
| 28 | ಪೂರ್ಣಯೋಗದ ಪಥದಲ್ಲಿ |
| 29 | ಬೆಳಕಿನ ಕಿರಣಗಳು |
| 30 | 24th November 1926<br>(Descent of Overmental Consciousness) |
| 31 | ಶ್ರೀ ಅರವಿಂದರ ಸಾವಿತ್ರಿ |
| 32 | ಮಾನುಷ ಚಕ್ರ |
| 33 | ಚೈತ್ಯ ಪುರುಷ |

## ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ಜೆ.ಪಿ.ನಗರ ಶ್ರೀ ಅರವಿಂದೋ ಸೊಸೈಟಿ ಶಾಖೆ ವತಿಯಿಂದ ಕೆಳಕಂಡ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

- ♦ 2ನೇ ನವೆಂಬರ್ 2019 ಶನಿವಾರ ಪ್ರೊ. ಸತ್ಯನಾರಾಯಣ, ಬೆಂಗಳೂರು ಇವರಿಂದ ಸಾಯಂಕಾಲ 5.30 ರಿಂದ 6.30 ರವರೆಗೆ "ಕನ್ನಡ ಭಾಷೆ ಮತ್ತು ನುಡಿ" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು.
- ♦ 9ನೇ ನವೆಂಬರ್ 2019 ಶನಿವಾರ ಕೆ.ಎಸ್. ರಮಣನ್, ಬೆಂಗಳೂರು ಇವರಿಂದ ಸಾಯಂಕಾಲ 5.30 ರಿಂದ 6.30 ರವರೆಗೆ "ಲೆವರೇಜಿಂಗ್ ದಿ ಪವರ್ ಆಫ್ ಪೀಪಲ್ – ದಿ ಕ್ರಿಟಿಕಲ್ ರೋಲ್ ಆಫ್ ಲೀಡರ್‌ಶಿಪ್" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು.
- ♦ 17ನೇ ನವೆಂಬರ್ 2019 ಭಾನುವಾರ "ಶ್ರೀಮಾತೆಯವರ ಮಹಾಸಮಾಧಿ" ದಿನದ ಅಂಗವಾಗಿ ಡಾ॥ ಎ.ಎನ್. ಎಲ್ಲಪ್ಪ ರೆಡ್ಡಿ, ಫಾರ್ಮರ್ ಸೆಕ್ರೆಟರಿ ಫಾರ್ ಎನ್ವಿರಾನ್ಮೆಂಟ್, ಕರ್ನಾಟಕ ಸರ್ಕಾರ, ಬೆಂಗಳೂರು ಇವರಿಂದ ಬೆಳಿಗ್ಗೆ 10.00 ಗಂಟೆಯಿಂದ 11.30 ಗಂಟೆಯವರೆಗೆ "ಸ್ಪಿರಿಚುವಲ್ ಸಿಗ್ನಿಫಿಕೆನ್ಸ್ ಆಫ್ ಪ್ಲಾಂಟ್ಸ್" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು.
- ♦ 24ನೇ ನವೆಂಬರ್ 2019 ಭಾನುವಾರ "ಶ್ರೀ ಅರವಿಂದರ ಸಿದ್ಧಿ"ಯ ದಿನವನ್ನಾಗಿ ಆಚರಿಸಲಾಯಿತು. ತತ್ಸಂಬಂಧ ಡಾ॥ ಅಜಿತ್ ಸಬ್ನೀಸ್, ಕಾರ್ಯನಿರ್ವಾಹಕ ಧರ್ಮದರ್ಶಿಗಳು, ಶ್ರೀ ಅರವಿಂದೊ ಕಾಂಪ್ಲೆಕ್ಸ್ ಟ್ರಸ್ಟ್, ಬೆಂಗಳೂರು ಇವರಿಂದ ಬೆಳಿಗ್ಗೆ 10.00 ಗಂಟೆಯಿಂದ 11.30 ಗಂಟೆಯವರೆಗೆ "ಅಡ್ವೆಂಚರ್ ಆಫ್ ಕಾನ್ಸಿಯಸ್‌ನೆಸ್" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು.

ಈ ಕಾರ್ಯಕ್ರಮಗಳಿಗೆ ಅನೇಕ ಗುರು–ಬಂಧುಗಳು ಹಾಗೂ ಇತರರು ಹಾಜರಿದ್ದರು.

## ಶ್ರೀ ಅರವಿಂದರ ನವದರ್ಶನ

ದೂರದೂರಿನ ಕೂಸು ದಾರಿಗಾಣದೆ ಬಳಲಿ ಬಂದನ್ನೈ ತಮ್ಮಡಿಗೆ ತಂದೆ
ದೂರದೂರದ ಕನಸು ನನಸಾಗಿ ಹೇಳಿತ್ತು 'ದೂರ ದೂರಲ್ಲ'ವೆಂದೆ

ತಮ್ಮ ಅಡಿದಾವರೆಗೆ ಎನ್ನ ಮಸ್ತಕವಿಡಲು ಎಲ್ಲಿಂದ ಬಂತು ಗಾನ
ಗುಂಯೆಂದು ಸುಂಯೆಂದು ಸೊಂಯೆಂದು ಸುಳಿ ಸುಳಿದು ರೂಪುಗೊಂಡಿತ್ತು ಕವನ

ಏನು ಏನದು ಶಾಂತಿ! ಎಂಥ ಎಂತಹ ಕಾಂತಿ ಅದ್ಭುತದ ಅಮರ ಲೋಕ
ಹೂವಾಗಿ ಕಂಪಾಗಿ ಸೊಂಪಾಗಿ ಬೀರುವದು ಮಕರಂದ ಮೂರು ಲೋಕ

ಹೂವರಳಿ ಹಿಂಡಾಗಿ ತೊಂಡ ತೊಂಡಲವಾಗಿ ತಮ್ಮಡಿಯ ತುಂಬ ಹಾಸು
ಭಾವದುಂಬಿಯು 'ಆವ ಹೂವನು ಮೂಸಲಿ' ಎಂದು ಅಲೆಯುವದು ತಾಸು ತಾಸು

ಹೂವೆಂದು ತೋರುವದು ಮಕರಂದವೆನಿಸಿಹುದು ಮೈ ಮನದ ಆತ್ಮ ತಣಿವು
ಯಾವ ಹೂವೊ ಕಾಣೆ! ಎಂಥ ವಾಸನೆ ಅರಿಯೆ! ಆದರೂ ಹಿಂಗುತಿದೆ ಹಸಿವು

ಮೂಕ, ಸಕ್ಕರೆ ತಿಂದು ಸವಿಯ ಹೇಳುವನೇನು? ನನಗಿದುವು ಒಡೆಯದೊಗಟು
ನಾಕ ಸುತ್ತುವೆನೆಂದು ಅರಿವಾಗುತಿದೆ ಮಾತ್ರ ಮಣಿಮಣಿದು ನಾ ಕಂಡ ಗುಟ್ಟು

ಅಲ್ಲಿಯವರಿಲ್ಲಿಯವರೆಲ್ಲೆಲ್ಲಿಯವರೆನಿತೋ ಮೂಡು-ಮುಳುಗುಗಳಿಂದ ಬಂದಿರುವರು
ಇಲ್ಲಿ ಎಲ್ಲರು ನಿಮ್ಮ ಅಡಿಗಳಿಗೆ ಮಣಿದಾಗ ಎಂದಿಗೂ ಹೃದಯದಿಂದೊಂದೆಂಬರು

ನೆಲಭೇದ ಜಲಭೇದ ಗುಣ ಬಣ್ಣಗಳ ಭೇದದೆಳೆ ಎಳೆಗಳೊಂದುಗೂಡಿ
ಮಾಲೆ ದಾರಗಳಾಗಿ ಶೋಭೆಗೊಂಡಿಹವಯ್ಯ ತಮ್ಮಡಿಯ ಪೂಜಿಸುವ ಭಾಗ್ಯ ಬೇಡಿ

ಅಲ್ಲಿ ಇಲ್ಲಿಯದೆಂಬ ಸೊಲ್ಲು ಕೇಳುವದೆಲ್ಲ ಇಲ್ಲಿಯೇ ಕಾಣುತಿಹ ಕವಿಯಾಗಿ ಕೂಸು
ಕಾಲ ಕಾಲಕು ತಮ್ಮ ಅಡಿಗಿಡುವ ಹೂವಾಗಿ ಅರಳಲೆಂದೊರಲುವದು ಬಾಲ ನನಸು

**– ಸಂಗಮೇಶ ಹೊಸಮನಿ, ಹುನಗುಂದ**

**(ದಿನಾಂಕ 24-11-1951 ರಂದು ಪಾಂಡಿಚೇರಿಗೆ – ಶ್ರೀ ಅರವಿಂದಾಶ್ರಮಕ್ಕೆ ಹೋದಾಗ ಬರೆದ ಪದ್ಯವಿದು. 'ಅಮೃತ ಧಾರೆ'(2018)ರ ಸಂಚಿಕೆಯಲ್ಲಿ ಪ್ರಕಟಗೊಂಡಿದೆ.)**

**RNI No. 22511/1971**
No. of Pages **68 + 4 (Cov. Page)**
KAR Reg No.: RNP/KA/BGS/368/2018-2020
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2020
Licensed to Post at BG PSO, Mysore Road, Bengaluru - 560 026



ನಿರ್ಮಾಯ ಶಾಂತಿ ಅತಿಸನಿಹದಲ್ಲಿ ಆ ದೇವನೊಲಿದ ಹಾಗೆ
ತನ್ಮಯದ ಪರಮ ಘನಶಾಂತ ಲಯದ ನಿನದದಲಿ ನಾದ ಹೀಗೆ
ಪ್ರಭೆಯಾಗಿ ಜ್ಯೋತಿ ಭೂ–ಬಾನುಗಳನು ಬೆಳಗಿಸಲು ಧಾರೆ ಸಲಿಲ
ಮತ್ತೆ ತಾನೀಗ ಅಸ್ಮಿತೆಯು ಸ್ಮಿತದಿ, ದೈವದುನ್ಮಾದ ಲೀಲ
ಭಾವದುತ್ಕರ್ಷದುತ್ಕಂಠದಲ್ಲಿ ನಿಸ್ಸಂಗ ಹೃದಯದಲ್ಲಿ
ತಲ್ಲೀನ ಧ್ಯಾನದಾ ಬೋಧ–ಸ್ಪಂದ ತುಂತುಂಬಿ ನಿಂದುದಿಲಿ

**– ಪುಟ್ಟು ಕುಲಕರ್ಣಿ**
**(ಶ್ರೀ ಅರವಿಂದರ ‘ಸಾವಿತ್ರಿ’; ದಳ 4 ರೇಣು 3 ಪುಟ 351)**

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, ‘Sri Aurobindo Marg’,
J.P. Nagar I Phase, Bengaluru - 560 078. Phone: 080 - 22449882.